ಜನಶಕ್ತಿ
ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 14
ಏಪ್ರಿಲ್ 05, 2009
ಕನ್ನಡ ವಾರಪತ್ರಿಕೆ
ರೂ. 5/-



ಭ್ರಮೆಯಲ್ಲಿ ತೇಲುತ್ತಿರುವ ಕಾಂಗ್ರೆಸ್



ಮೂರನೇ ಪರ್ಯಾಯದ ಬಲವರ್ಧನೆ



ಬಿಜೆಪಿ-ಕಾಂಗ್ರೆಸ್‌ಗಳಲ್ಲಿ ನಡುಕ



ನಿಲ್ಲದ ರೈತರ ಆತ್ಮಹತ್ಯೆ

ಕೃಷಿಯಲ್ಲಿ ಯುಪಿಎ ಫೇಲ್

ಅಬ್ಬಬ್ಬ! ಗೃಹಮಂತ್ರಿ - ಸಿಐಎ ಮುಖ್ಯಸ್ಥರ ಭೇಟಿ

ಐದು

ನೋಟ



ಡಾ. ಜಿ. ಭಾಸ್ಕರ ಮಯ್ಯ

ಮತಾಂತರ ಎಂಬ ದುರ್ಗಮ ಅರಣ್ಯದಲ್ಲಿ ಒಂದು ಪಯಣ

ಜಾತಿವ್ಯವಸ್ಥೆ, ಅಸ್ಪೃಶ್ಯತೆ ಮತ್ತು ಕಮ್ಯೂನಿಷ್ಟರು

ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಕಾಲ ಘಟ್ಟದಲ್ಲಿ 'ಜಾತಿವಾದ' ಮತ್ತು "ಅಸ್ಪೃಶ್ಯತಾ ವಿರೋಧಿ" ಸಂಘರ್ಷವನ್ನು 'ಸಾಮ್ರಾಜ್ಯವಾದ ವಿರೋಧಿ ಹೋರಾಟ' ಹಾಗೂ 'ಕೃಷಿಕ್ರಾಂತಿ'ಯಿಂದ ಪ್ರತ್ಯೇಕಗೊಳಿಸಿದ್ದರಿಂದಾದ ಭಯಾನಕ ಪರಿಣಾಮಗಳನ್ನು ನಾವು ಇಂದು ಅನುಭವಿಸುತ್ತಿದ್ದೇವೆ.

ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಖಂಡಿತವಾಗಿಯೂ ಭಾರತೀಯ ಸಮಾಜವನ್ನು ಪರಿವರ್ತಿಸುವ ಪ್ರಯತ್ನವನ್ನು ಮಾಡಲಿಲ್ಲ. ಏಕೆಂದರೆ ಅದು ಅವರ ಹಿತಕ್ಕೆ ವಿರುದ್ಧವಾಗಿತ್ತು. ಇನ್ನೊಂದೆಡೆಯಲ್ಲಿ ಹಳೆಯ ಸಾಮಾಜಿಕ ವ್ಯವಸ್ಥೆ, ಸ್ತರವಿಭಜನೆ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಪರಿವರ್ತನೆಯು ಅತ್ಯಂತ ನಿಧಾನದ ಹಾಗೂ ಕಷ್ಟಕರವಾದ ಪ್ರಕ್ರಿಯೆ. ಬ್ರಿಟಿಷರು ಭಾರತದಲ್ಲಿ ಶಕ್ತಿಶಾಲಿಯಾದ ಬಂಡವಾಳಶಾಹಿಗಳ ವರ್ಗ ಬೆಳೆಯದಂತೆ ನೋಡಿಕೊಂಡಿತ್ತು. ಭಾರತದ ಅತೀ ಹಿಂದುಳಿದಿರುವ ಪಾಳೇಗಾರಿ ವ್ಯವಸ್ಥೆಯಲ್ಲಿಯೇ ಅದು ತನ್ನ ಶೋಷಣೆಯನ್ನು ನಡೆಸುತ್ತಾ ಬಂದಿತ್ತು. ಇದರಿಂದಾಗಿ ಗ್ರಾಮೀಣ ಕೃಷಿ ಸಂಬಂಧಗಳಲ್ಲಿ ಯಾವುದೇ ತೆರನಾದ ಬದಲಾವಣೆಗಳಾಗದೆ ಅದು ನಿಂತ ನೀರಾಗಿತ್ತು. ಬ್ರಿಟಿಷರೂ ಕೂಡಾ ಬ್ರಿಟಿಷ್‌ಬಂಡವಾಳಗಾರರ ಪ್ರತಿನಿಧಿಗಳಾಗಿರಲಿಲ್ಲ; ಬದಲಿಗೆ ಬ್ರಿಟಿಷ್ ಭೂಮಾಲಕರ ಏಜೆಂಟರಾಗಿದ್ದರು. ಇದರಿಂದಾಗಿ ಇಂಥ ವ್ಯವಸ್ಥೆಯನ್ನು ಹಾಗೆಯೇ ಇರಗೊಡುವುದರಲ್ಲಿಯೇ ವಸಾಹತುಶಾಹಿಯ ಹಿತ ಅಡಗಿತ್ತು. ಸಾಮಾಜಿಕ ಮತ್ತು ಆರ್ಥಿಕ ಸಹಾಯಕ್ಕೆ ಸಾಮಂತರನ್ನು, ಜಮೀಂದಾರರನ್ನು ಆಶ್ರಯಿಸುವುದೆಂದರೆ ಜಾತಿ ವ್ಯವಸ್ಥೆಯನ್ನು ಇದ್ದ ಸ್ವರೂಪದಲ್ಲಿಯೇ ಇರಗೊಡುವುದು. ಬೆಳೆದು ಬರುತ್ತಿರುವ ಬಂಡವಾಳಶಾಹಿ ವರ್ಗದ ರಾಷ್ಟ್ರೀಯ ಮುಖಂಡರಾದ ಬುದ್ಧಿಜೀವಿಗಳು 'ಜಾತಿವ್ಯವಸ್ಥೆ'ಯೊಂದಿಗೆ ರಾಜಿ ಮಾಡಿಕೊಂಡಿದ್ದರು.

ಸಾಮಾಜಿಕ ಸುಧಾರಣೆ

ತಿಲಕರ ವಿರೋಧ

ತಿಲಕರು ಸಮಾಜ ಸುಧಾರಣೆಯನ್ನು ಎಲ್ಲಿಯವರೆಗೆ ವಿರೋಧಿಸುತ್ತಿದ್ದರೆಂದರೆ ಮದುವೆಯ ವಯಸ್ಸನ್ನು ಹೆಚ್ಚಿಸುವುದಕ್ಕೂ ಅವರ ವಿರೋಧವಿತ್ತು.

ಬಹುತೇಕ ಎಲ್ಲಾ ನಾಯಕರೂ ಪುನರುತ್ಥಾನವಾದದ ಸಮರ್ಥಕರಾಗಿದ್ದರು. ಮಹಾತ್ಮ ಗಾಂಧೀಜಿಯವರೂ ಇದಕ್ಕೆ ಹೊರತಾಗಿರಲಿಲ್ಲ.

ಆದರೆ, ಕಾಂಗ್ರೆಸಿನ ಮಹಾನ್ ನೇತಾರರಾದ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಗೆ ಕೋಟ್ಯಾಂತರ ಭಾರತೀಯರನ್ನು ಸಂಘಟಿಸುವುದರಲ್ಲಿ ಸಮರ್ಥರಾದರು. ದೊಡ್ಡ ಸಂಖ್ಯೆಯಲ್ಲಿ ಮುಸಲ್ಮಾನರು ರಾಷ್ಟ್ರೀಯ ಆಂದೋಲನದೆಡೆಗೆ ಸೆಳೆಯಲ್ಪಡುವುದಕ್ಕೂ ಗಾಂಧೀಜಿಯವರೇ ಕಾರಣ.

ಇಲ್ಲಿಯೂ ಜಾತಿವಿನಾಶ ಚಳುವಳಿಯನ್ನು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಿಂದ ಹೊರಗಿಡಲಾಯಿತು. ಇದಕ್ಕೆ ಪ್ರಮುಖ ಕಾರಣ ಕೃಷಿಕ್ರಾಂತಿ ನಡೆದು ಬಿಡಬಹುದೆಂಬ ಭಯ. ರೈತರು ಮತ್ತು ಕಾರ್ಮಿಕರು ಸಾಮ್ರಾಜ್ಯಶಾಹಿಗಳೊಂದಿಗೆ ಹೋರಾಡುವುದರ ಜೊತೆಗೆ ತಮ್ಮ ಭೂಮಾಲಿಕರು ಮತ್ತು ಬಂಡವಾಳಗಾರರ ವಿರುದ್ಧವೂ ಹೋರಾಟಕ್ಕೂ ಅಣಿನೆರೆದಿದ್ದರೆ ಭಾರತದ ಇತಿಹಾಸವೇ ಬೇರೆಯಾಗಿರುತ್ತಿತ್ತು. ಜಾತಿವಿನಾಶ ಮತ್ತು ಅಸ್ಪೃಶ್ಯತೆಯ ವಿರುದ್ಧ ಮಾತ್ರವೇ ಹೋರಾಟ ನಡೆಸಿದ ಮುಖಂಡರಿಗೆ ಪಾಳೇಗಾರಿ ಆರ್ಥಿಕವ್ಯವಸ್ಥೆ ಮತ್ತು 'ಸಾಮ್ರಾಜ್ಯಶಾಹಿ' ಅತಿ ದೊಡ್ಡ ಶತ್ರುವೆಂದು ಕಾಣಿಸಲೇ ಇಲ್ಲ. ಅಂತೆಯೇ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದ ನೇತೃತ್ವ ವಹಿಸಿದವರಿಗೆ ಈ ಮೊದಲೇ ಹೇಳಿದಂತೆ ಕೃಷಿಕ್ರಾಂತಿಯ ಭಯವಿತ್ತು. ಭೂಮಾಲಿಕರು ಮತ್ತು ಬಂಡವಾಳಗಾರರು ಒಂದುಗೂಡಿದ್ದರು. ಅವರು ರೈತ ಕಾರ್ಮಿಕರು ತಮ್ಮ ವಿರುದ್ಧವೇ ಕ್ರಾಂತಿ ನಡೆಸದಂತೆ ಜಾಗರೂಕರಾಗಿದ್ದರು.

ಹಿಂದೂ ರಾಷ್ಟ್ರದ ನಿಜಸ್ವರೂಪ

ಅತ್ಯಂತ ಮಹತ್ವದ ವಿಚಾರವೆಂದರೆ-ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿಯೇ ಡಾ. ಅಂಬೇಡ್ಕರ್ "ಹಿಂದೂ ರಾಷ್ಟ್ರವಾದ"ದ ನಿಜವಾದ ಸ್ವರೂಪವನ್ನು ಗ್ರಹಿಸಿದ್ದರು. ಅವರು ಸ್ಪಷ್ಟ ಶಬ್ದಗಳಲ್ಲಿ ತಿಳಿಸಿದ್ದರು "ಯಾವುದೇ ಬೆಲೆ ತೆತ್ತಾದರೂ ಹಿಂದೂ ರಾಷ್ಟ್ರವನ್ನು ತಡೆಯಬೇಕು. 'ಹಿಂದೂ ರಾಷ್ಟ್ರ' ಒಂದು ವಾಸ್ತವವಾಗಿ ಮಾರ್ಪಟ್ಟರೆ ಈ ದೇಶಕ್ಕೆ ಅದಕ್ಕಿಂತ ದೊಡ್ಡ ಗಂಡಾಂತರ ಇನ್ನೊಂದಿಲ್ಲ". ಇದೇ ರೀತಿ ಡಾ. ಅಂಬೇಡ್ಕರ್ ಅವರು ಹಿಂದೂ ಮಹಾಸಭಾದ ಸಾವರ್ಕರ್ ಅವರ 'ದ್ವಿರಾಷ್ಟ್ರ' ಸಿದ್ಧಾಂತವನ್ನು ತಳ್ಳಿಹಾಕಿದ್ದರು ಮಾತ್ರವಲ್ಲದೆ ಖಂಡತುಂಡವಾಗಿ ವಿರೋಧಿಸಿದ್ದರು. ಹಿಂದೂ ರಾಷ್ಟ್ರವಾದದ ಚಾರಿತ್ರ್ಯವ ಫ್ಯಾಸಿಸ್ಟ್ ಲಕ್ಷಣಗಳನ್ನು ಹೊಂದಿದ್ದು ಅದರ ಬೇರುಗಳು ಇಟೆಲಿ ಮತ್ತು ಜರ್ಮನಿಯಲ್ಲಿವೆಯೆಂದು ಅಂಬೇಡ್ಕರ್ ಸರಿಯಾಗಿಯೇ ಗುರುತಿಸಿದ್ದರು. ಆದರೆ, ಈ ದೇಶದ ದುರಂತವೆಂದರೆ ದಲಿತರ ಬಹುದೊಡ್ಡ ವಿಭಾಗ ಅಂಬೇಡ್ಕರ್ ಅವರನ್ನು ಅರ್ಥಮಾಡಿಕೊಳ್ಳದೆ ಸಂಘ ಪರಿವಾರದ ಬಲೆಯೊಳಗೆ ಸಿಕ್ಕಿಹಾಕಿಕೊಳ್ಳುತ್ತಿರುವುದು. ಯಾವ ಅಂಬೇಡ್ಕರ್ 'ಮನುಸ್ಮೃತಿ'ಯನ್ನು ಸಾರ್ವಜನಿಕವಾಗಿ ಸುಟ್ಟು ಹಾಕಿ ಜಾತಿವ್ಯವಸ್ಥೆಯ ವಿರುದ್ಧ ಬಂಡೆದ್ದರೂ, ಅದೇ 'ಮನುಸ್ಮೃತಿ'ಯ ಬೆಡಗಿನ ರೂಪವಾದ 'ಭಗವದ್ಗೀತೆ'ಯನ್ನು ಪಾಠಪಠ್ಯದಲ್ಲಿ ಸೇರಿಸಲು ದಲಿತ ಸಮುದಾಯದ ಕರ್ನಾಟಕದ ಶಿಕ್ಷಣ ಮಂತ್ರಿ ಆದೇಶಿಸುತ್ತಿರುವುದು ಇತಿಹಾಸದ ಒಂದು ಮಹಾನ್ ವಿಡಂಬನೆ. ಅಂಬೇಡ್ಕರ್ ಅವರ ದಲಿತರಿಗೆ "ಪ್ರತ್ಯೇಕ ಚುನಾವಣಾ ಕ್ಷೇತ್ರ"ದ ಪರಿಕಲ್ಪನೆಯನ್ನು ಗಾಂಧೀಜಿ ಒಪ್ಪುತ್ತಿರಲಿಲ್ಲ ಅವರ ಪ್ರಕಾರ ಜಾತಿಗಳ ಆಧಾರದಲ್ಲಿ ಹಿಂದುಗಳ ವಿಭಜನೆ ಭಾರತೀಯ ಸಮಾಜದ ವಿಭಜನೆಗೆ ಕಾರಣವಾಗುತ್ತಿತ್ತು. ಅದು ಸರಿಯೂ ಆಗಿತ್ತು. ಏಕೆಂದರೆ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟವನ್ನು ಅದು ದುರ್ಬಲಗೊಳಿಸುತ್ತಿತ್ತು. ಆದರೆ, ಅಂಬೇಡ್ಕರ್ ಕೊನೆಯವರೆಗೂ ತಮ್ಮ ನಿರ್ಣಯಕ್ಕೇ ಅಂಟಿಕೊಂಡಿರಲಿಲ್ಲ. ಅವರೂ ಕೂಡಾ ಕೆಲವು ಮಹತ್ವಪೂರ್ಣ ಕ್ಷಣಗಳಲ್ಲಿ ಗಾಂಧೀಜಿಯವರ ವಿಧಾನವನ್ನು ಸ್ವೀಕರಿಸಿದ್ದರು. 'ಪರಿಶಿಷ್ಟ ಜಾತಿಗಳು ಸವರ್ಣಹಿಂದೂಗಳ ಸಹಕಾರದಿಂದ ವಿಕಾಸ ಹೊಂದುತ್ತವೆ, ಸಂಪೂರ್ಣ ಭಾರತೀಯ ಸಮಾಜದ ಆರ್ಥಿಕ ಮತ್ತು ರಾಜಕೀಯ ವಿಕಾಸದೊಂದಿಗೆ ದಲಿತರ ವಿಕಾಸವೂ ಆಗುತ್ತದೆ' ಎಂಬ ಒಂದು ವೈಚಾರಿಕ ಒಪ್ಪಂದದ ಆಧಾರದಲ್ಲಿಯೇ ಅವರು ಸ್ವತಂತ್ರ ಭಾರತದ ಸರಕಾರದ ಮಂತ್ರಿಮಂಡಲದೊಂದಿಗೆ ಸೇರಿಕೊಂಡರು ಮತ್ತು ಭಾರತೀಯ ಸಂವಿಧಾನದ ನಿರ್ಮಾಣದಲ್ಲಿ ಅವಿಶ್ರಾಂತವಾಗಿ ದುಡಿದರು. ಅದೊಂದು ಮೈಲಿಗಲ್ಲು. ಅವರು ತಮ್ಮ ಚಾರಿತ್ರಿಕ ಪಾತ್ರವನ್ನು ನಿರ್ವಹಿಸಿಯಾಗಿತ್ತು. ಆದರೆ, ತಮ್ಮ ಕೊನೆಯ ದಿನಗಳಲ್ಲಿ ಗಾಂಧೀಜಿಗೆ ತೀವ್ರ ನಿರಾಶೆಯಾಗಿತ್ತು. ಅಂಬೇಡ್ಕರ್ ಅವರಿಗೂ ಕೂಡಾ ಖಂಡಿತವಾಗಿಯೂ ಭ್ರಮನಿರಸನವಾಗಿರಬೇಕು. ಈ ಸಂದರ್ಭದಲ್ಲಿ ಈ.ಎಮ್.ಎಸ್. ನಂಬೂದರಿಪ್ಪಾದ್ ಅವರ "ಗಾಂಧಿ ಎಂಡ್ ಹಿಸ್ ಇಸಮ್" ಗ್ರಂಥದ ಒಂದು ವಾಕ್ಯ ನೆನಪಾಗುತ್ತದೆ:

"ಪ್ರತಿಯೊಬ್ಬ ಮನುಷ್ಯನ ದೌರ್ಭಾಗ್ಯವೆಂದರೆ ಆತನ ಕಾರ್ಯದ ಬಗೆಗೆ ಇತಿಹಾಸದ ನಿರ್ಣಯವು ಸ್ವತಃ ಆ ವ್ಯಕ್ತಿಯ ಚಿಂತನೆ ಮತ್ತು ಕಾರ್ಯದಿಂದ ಭಿನ್ನವಾಗಿರುತ್ತದೆ". ಇದು ಗಾಂಧೀಜಿಯವರಿಗೂ, ಅಂಬೇಡ್ಕರ್ ಅವರಿಗೂ ಸುಸ್ಪಷ್ಟವಾಗಿ ಅನ್ವಯಿಸುತ್ತದೆ."

ಕಮ್ಯೂನಿಸ್ಟರ ಸ್ಪಷ್ಟತೆ

ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಮಾತ್ರವೇ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿರುದ್ಧ ನಡೆಸುವ ಹೋರಾಟವನ್ನು ಕೃಷಿಕ್ರಾಂತಿ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆಸುವ ಹೋರಾಟದ ಜತೆಗೇ ಒಂದುಗೂಡಿಸಿತ್ತು. ಕೃಷಿ ಕ್ರಾಂತಿ ಮತ್ತು ವರ್ಗ ಸಂಘರ್ಷ ಮಾತ್ರವೇ ಹಿಂದೂ ಮುಸ್ಲಿಂ ಭೇದಭಾವವನ್ನು ಕೊನೆಗಾಣಿಸುವ ಸಿದ್ಧೌಷಧವೆಂದು ಕಮ್ಯೂನಿಸ್ಟ್ ಪಕ್ಷ ಸ್ಪಷ್ಟ ಪಡಿಸಿತ್ತು. ಇಡೀ ದೇಶದಲ್ಲಿ ದಲಿತ ಮತ್ತು ಮುಸ್ಲಿಮರ ಮೇಲೆ ನಡೆಸಲಾದ ಭಯಾನಕ ದೌರ್ಜನ್ಯವನ್ನು ನಾವು ಕಂಡಿದ್ದೇವೆ. ಆದರೆ, ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರದಲ್ಲಿ ಏಕೆ ಕೋಮುಗಲಭೆಗಳು ಆಗುತ್ತಿಲ್ಲ? ಏಕೆ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿಲ್ಲ? ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಕಮ್ಯೂನಿಷ್ಟರು ಜಾತಿ ಹೋರಾಟದ ಸ್ಥಾನದಲ್ಲಿ ವರ್ಗ ಹೋರಾಟವನ್ನು ತಂದಿಟ್ಟು ಭಾರತೀಯ ಸಮಾಜದ ವಾಸ್ತವದಿಂದ ದೂರ ಸರಿದಿದ್ದಾರೆ ಎಂಬ ವಾದ ನಿಜಕ್ಕೂ ಪೂರ್ವಾಗ್ರಹ ಪೀಡಿತವಾದುದು. 1930ರಲ್ಲಿ ಭಾರತೀಯ ಕಮ್ಯೂನಿಷ್ಟ ಪಕ್ಷ ಪ್ರಸ್ತುತ ಪಡಿಸಿದ 'ಕಾರ್ಯ ಕ್ರಮಕ್ಕೆ ವೇದಿಕೆ'ಯಲ್ಲಿ ಹೀಗೆ ಹೇಳಲಾಗಿದೆ:

"ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತದ ಪರಿಣಾಮವಾಗಿ ನಮ್ಮ ದೇಶದ ಕೋಟ್ಯಾಂತರ ಜನರು ಗುಲಾಮರಾಗಿದ್ದಾರೆ. ಇಂದಿಗೂ ಕೋಟ್ಯಾಂತರ ಶ್ರಮಜೀವಿ ದಲಿತರಿಗೆ ಸಮಾಜದಲ್ಲಿ ಯಾವುದೇ ಅಧಿಕಾರವಿಲ್ಲ. ಬ್ರಿಟಿಷ್ ಶಾಸನ, ಪಾಳೇಗಾರೀ ವ್ಯವಸ್ಥೆ, ಧಾರ್ಮಿಕ ದಗಲ್ಬಾಜಿತನ, ಗುಲಾಮಗಿರಿಯ ಪ್ರಾಚೀನ ಪರಂಪರೆಗಳು ನಮ್ಮ ಕುತ್ತಿಗೆಯನ್ನು ಅಮುಕುತ್ತಿವೆ. ಜನತೆಯ ಸ್ವಾತಂತ್ರ್ಯದ ಹಾದಿಗೆ ಅವು ಬಾಧಕವಾಗಿವೆ. ಇದೆಲ್ಲದರ ಪರಿಣಾಮವಾಗಿಯೇ ಈ ಇಪ್ಪತ್ತನೆಯ ಶತಮಾನದಲ್ಲಿಯೂ ನಮ್ಮ ದೇಶದಲ್ಲಿ ಅಸ್ಪೃಶ್ಯರಿದ್ದಾರೆ. ಅವರಿಗೆ ಬೇರೆ ಮನುಷ್ಯರೊಡನೆ ಬೆರೆಯಲು, ಸಾರ್ವಜನಿಕ ಬಾವಿಕೆರೆಗಳಿಂದ ನೀರು ಕುಡಿಯಲು, ಸಾರ್ವಜನಿಕ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಯಾವ ಹಕ್ಕೂ ಇಲ್ಲ."

ಭಾರತೀಯರ ಮೇಲೆ ಅಂತಹ ಈ ಲಜ್ಜಾಸ್ಪದ ಕಳಂಕವನ್ನು ಶಾಶ್ವತವಾಗಿ ಕಿತ್ತೊಗೆಯುವ ಬದಲಿಗೆ ಕಾಂಗ್ರೆಸ್ ಜಾತಿವ್ಯವಸ್ಥೆಯನ್ನು ಹಾಗೆಯೇ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈ ಜಾತಿವ್ಯವಸ್ಥೆಯಿಂದಾಗಿಯೇ ದಲಿತರ ಪರಿಸ್ಥಿತಿ ಇಂದು ಈ ಬಗೆಯಲ್ಲಿದೆ. ಜಾತಿವ್ಯವಸ್ಥೆಯ ಬಗೆಗೆ ಗಾಂಧೀವಾದದ ಪರಿಷ್ಕೃತ ರೂಪವನ್ನು ಧ್ವಂಸಗೊಳಿಸಿ, ಕೃಷಿಕ್ರಾಂತಿಯ ತಾಕತ್ತಿನ ಬಲದಲ್ಲಿ ಬ್ರಿಟಿಷ್ ಪ್ರಭುತ್ವವನ್ನು ಕಿತ್ತೆಸೆಯುವ ಮಾರ್ಗದಿಂದಲಷ್ಟೇ ದುಡಿಯುವ ವರ್ಗದ ದಲಿತರು ಮತ್ತು ಗುಲಾಮರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ನ್ಯಾಯ ಸಮ್ಮತವಾದ ಮುಕ್ತಿಯು ಸಾಧ್ಯವಾಗುತ್ತದೆ. ಬ್ರಿಟಿಷ್ ಶಾಸನ ಮತ್ತು ಪಾಳೇಗಾರಿ ವಿರುದ್ಧ ನಡೆಸುವ ಸಂಯುಕ್ತ ಕ್ರಾಂತಿಕಾರಿ ಹೋರಾಟದಲ್ಲಿ ದೇಶದೆಲ್ಲಾ ಕಾರ್ಮಿಕರ ಜೊತೆಗೆ ಎಲ್ಲಾ ದಲಿತರು ಒಂದುಗೂಡಬೇಕೆಂದು ಭಾರತದ ಕಮ್ಯೂನಿಷ್ಟ ಪಕ್ಷವು ದಲಿತರಿಗೆ ಕರೆನೀಡುತ್ತದೆ.

(ಮುಂದುವರಿಯುವುದು)

ಆತ್ಮೀಯ ಓದುಗರೇ,

ಕಳೆದ ಸಂಚಿಕೆ (13) ಯಲ್ಲಿ ಪುಟ 9 ರಲ್ಲಿ ಮುದ್ರಣವಾಗಬೇಕಿದ್ದ ಪ್ರಕಾಶ್ ಕಾರಟ್‌ರ ಲೇಖನ 'ಮೂರನೇ ಪರ್ಯಾಯ'ದ ಕುರಿತ ಲೇಖನ ಪ್ರಕಟವಾಗದೇ 8ನೇ ಪುಟದ ಲೇಖನವೇ ಅಲ್ಲಿಯೂ ಮುದ್ರಿತವಾಗಿದೆ.

ಆಕಸ್ಮಿಕ ಅಚಾತುರ್ಯದಿಂದ ಆಗಿರುವ ತಪ್ಪಿಗಾಗಿ ವಿಷಾದಿಸುತ್ತೇವೆ. ಹಾಗೂ ಪ್ರಸ್ತುತ ಸಂಚಿಕೆಯಲ್ಲಿ ಪ್ರಕಾಶ್ ಕಾರಟ್‌ರವರ ಲೇಖನವನ್ನು ಮುದ್ರಿಸಲಾಗಿದೆ(ಪುಟ 7). ಓದುಗರ ಸಹಕಾರವನ್ನು ಕೋರಲಾಗಿದೆ.

- ಸಂ.

ಸಂಪಾದಕೀಯ

ರೇಷನ್ ವ್ಯವಸ್ಥೆಯ ಸಾರ್ವತ್ರೀಕರಣವಾಗಲಿ

15ನೇ ಲೋಕಸಭೆಗಾಗಿ ನಡೆಯುವ ಚುನಾವಣೆಯ ಸಂದರ್ಭದಲ್ಲಿ ಅತಿ ಹೆಚ್ಚು ಚರ್ಚೆಯಾಗಲಿರುವ ಹಾಗೂ ಅತಿ ಹೆಚ್ಚು ಚರ್ಚೆ ಆಗಬೇಕಾದ ವಿಷಯಗಳಲ್ಲಿ ಪಡಿತರ (ರೇಷನ್) ವ್ಯವಸ್ಥೆ ಒಂದು ಮುಖ್ಯ ವಿಷಯವಾಗಿದೆ. ವಿವಿಧ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿವೆ. ಮತ್ತೊಮ್ಮೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿರುವ ಕಾಂಗ್ರೆಸ್ ಬಡವರ ಮತಗಳ ಮೇಲೆ ಕಣ್ಣಿಟ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಕೆ.ಜಿ.ಗೆ 3 ರೂ ಬೆಲೆಯಲ್ಲಿ ತಿಂಗಳಿಗೆ 25 ಕೆ.ಜಿ ಅಕ್ಕಿ ಅಥವಾ ಗೋಧಿಯನ್ನು ಒದಗಿಸುವುದಾಗಿ ಆಶ್ವಾಸನೆ ನೀಡಿದೆ. ಆದರೆ ಇಂತಹ ಕ್ರಮಗಳಿಂದ ಭಾರತದ ಬಡವರಿಗೆ ಆಹಾರದ ಭದ್ರತೆ ಒದಗಿಸಲು ಸಾಧ್ಯವಿಲ್ಲ.

ಕೆ.ಜಿ.ಗೆ 3 ರೂ. ಬೆಲೆಯಲ್ಲಿ ಅಕ್ಕಿ/ ಗೋದಿ ಒದಗಿಸುವುದು ಅಸಾಧ್ಯವೇನಲ್ಲ. ತಮಿಳುನಾಡಿನಲ್ಲಿ ಕಳೆದ ವಿಧಾನಸಭಾ ಚುನಾವಣೆಗಳ ನಂತರದಿಂದ ಕೆ.ಜಿ.ಗೆ 1 ರೂ. ಬೆಲೆಯಲ್ಲಿ ಅಕ್ಕಿಯನ್ನು ನೀಡಲಾಗುತ್ತಿದೆ. ಕೇರಳ ಮತ್ತು ಪಶ್ಚಿಮ ಬಂಗಾಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಪ್ರಸಕ್ತ ಸಾಲಿನ ಬಜೆಟ್‌ನೊಂದಿಗೆ ಕೆ.ಜಿ.ಗೆ 2 ರೂ. ಬೆಲೆಯಲ್ಲಿ ಅಕ್ಕಿಯನ್ನು ಒದಗಿಸಲು ಆರಂಭಿಸಿವೆ. ಕರ್ನಾಟಕದ ಬಿಜೆಪಿ ಸರ್ಕಾರ ಮಾತ್ರ ಕೆ.ಜಿ.ಗೆ 2 ರೂ. ಬೆಲೆಯಲ್ಲಿ ಅಕ್ಕಿಯನ್ನು ಒದಗಿಸುವ ಚುನಾವಣಾ ಪೂರ್ವದ ಭರವಸೆಯನ್ನು ಜಾರಿ ಮಾಡದೆ ಬಡವರಿಗೆ ಮೋಸ ಮಾಡಿದೆ.

ಪಡಿತರ (ರೇಷನ್) ವ್ಯವಸ್ಥೆಯನ್ನು ಬಲಹೀನಗೊಳಿಸಿದ ಕೀರ್ತಿ ಕಾಂಗ್ರೆಸ್ಸಿಗೇ ಸಲ್ಲುತ್ತದೆ. ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸಿ ಸಂಪನ್ಮೂಲಗಳನ್ನು ಸಂಗ್ರಹಿಸುವ ಬದಲು ಬಡವರಿಗಾಗಿ ಖರ್ಚು ಮಾಡುವುದನ್ನು ಕಡಿಮೆ ಮಾಡಿ, ಸಾರ್ವಜನಿಕ ವೆಚ್ಚಗಳನ್ನು ಕಡಿತ ಮಾಡಬೇಕು ಎನ್ನುವುದೇ ಉದಾರೀಕರಣದ ಮೂಲ ಮಂತ್ರ. 1991 ರಲ್ಲಿ ಕೇಂದ್ರದ ಕಾಂಗ್ರೆಸ್ ಸರ್ಕಾರ ಉದಾರೀಕರಣದ ನೀತಿಗಳನ್ನು ಉದ್ಘಾಟಿಸುವುದರೊಂದಿಗೆ ಪಡಿತರ ವ್ಯವಸ್ಥೆಯನ್ನು ಹಂತ ಹಂತವಾಗಿ ಕೆಡವಿ ಹಾಕುವ ಕೆಲಸ ಆರಂಭಿಸಿತು. ಆಹಾರ ಸಬ್ಸಿಡಿ ಕಡಿತ ಮಾಡಲಾಯಿತು. ರೇಷನ್ ದರಗಳನ್ನು ಏರಿಸಲಾಯಿತು. 1991 ರಿಂದ 1994 ರ ನಡುವೆ ರೇಷನ್ ದರಗಳನ್ನು ಗಣನೀಯವಾಗಿ ಹೆಚ್ಚಿಸಲಾಯಿತು. 1997 ರಲ್ಲಿ ಬಡತನ ರೇಖೆ ಕೆಳಗೆ (ಬಿಪಿಎಲ್) ಮತ್ತು ಬಡತನ ರೇಖೆ ಮೇಲೆ (ಎಪಿಎಲ್) ಇರುವವರು ಎಂಬ ವಿಂಗಡಣೆ ಮಾಡಲಾಯಿತು. ಆಹಾರ ಸಬ್ಸಿಡಿ ಬಡವರಿಗೇ ತಲುಪಬೇಕು ಎಂದು ಹೇಳಿಕೊಂಡು ಈ 'ಟಾರ್ಗೆಟ್' ಪದ್ಧತಿಯನ್ನು ಆರಂಭಸಲಾಯಿತು. ಬಡತನ ರೇಖೆ ಕೆಳಗೆ ಇರುವವರನ್ನು ಗುರುತಿಸಲು ಅಸಂಬದ್ಧ ಮಾನದಂಡಗಳನ್ನು ರೂಪಿಸಲಾಯಿತು. ಬಿಪಿಎಲ್ ರೇಷನ್ ಕಾರ್ಡುಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿತ ಮಾಡಲಾಯಿತು. ಇದರ ಪರಿಣಾಮವಾಗಿ ರೇಷನ್ ಕಾರ್ಡುಗಳು ಬಡವರಿಗೆ ವಿತರಣೆ ಆಗುವ ಬದಲು ಸಮಾಜದ ಅನುಕೂಲಸ್ಥರೇ ಅವುಗಳನ್ನು ಕಬಳಿಸುವಂತಾಯಿತು. ರೇಷನ್‌ಗಾಗಿ ಬಿಡುಗಡೆಯಾಗುತ್ತಿದ್ದ ಅಕ್ಕಿ, ಗೋದಿ ಮೊದಲಾದವುಗಳು ಬಡವರಿಗೆ ದೊರೆಯುವ ಬದಲು ಕಾಳಸಂತೆಕೋರರ ಪಾಲಾಗುವಂತಾಯಿತು.

ಆರ್ಥಿಕ ಧೋರಣೆಗಳ ವಿಷಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಬಿಜೆಪಿ ಅಧಿಕಾರಕ್ಕೆ ಬಂದಾಗ ಹಿಂದಿನ ಕಾಂಗ್ರೆಸ್ ಸರ್ಕಾರದ ತಪ್ಪು ಪಡಿತರ ನೀತಿಯನ್ನು ಅದು ಬದಲಾಯಿಸಬಹುದಾಗಿತ್ತು. ಆದರೆ ಬಿಜೆಪಿ ಹಾಗೆ ಮಾಡಲಿಲ್ಲ. ಬದಲಾಗಿ ಎಪಿಎಲ್ ಫಲಾನುಭವಿಗಳಿಂದ ಪಡಿತರದ ಪೂರ್ಣ ವೆಚ್ಚವನ್ನು ಮತ್ತು ಬಿಪಿಎಲ್ ವಿಭಾಗದವರಿಂದ ಶೇ.50 ರಷ್ಟು ವೆಚ್ಚವನ್ನು ವಸೂಲಿ ಮಾಡಲು ಕ್ರಮ ಜರುಗಿಸಿತು. ಹೀಗೆ 2000 ಮತ್ತು 2004 ರ ನಡುವೆ ಪಡಿತರ ಬೆಲೆಗಳಿಗೂ ಮಾರುಕಟ್ಟೆ ಬೆಲೆಗಳಿಗೂ ವ್ಯತ್ಯಾಸವೇ ಇರಲಿಲ್ಲ. ಹೀಗಾಗಿ ಎಪಿಎಲ್ ಫಲಾನುಭವಿಗಳು ರೇಷನ್ ಅಂಗಡಿಗಳಿಗೆ ಬರುವುದನ್ನು ಬಿಡುವಂತಾಯಿತು. ಬಿಪಿಎಲ್ ಕಾರ್ಡುದಾರರಿಗೂ ಏರಿಸಿದ ದರಗಳಲ್ಲಿ ರೇಷನ್ ಖರೀದಿ ಮಾಡಲು ಸಾಧ್ಯವಾಗಲಿಲ್ಲ.

2004 ರಲ್ಲಿ, ಯುಪಿಎ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರವೂ ರೇಷನ್ ಅವ್ಯವಸ್ಥೆ ಸರಿಯಾಗಲಿಲ್ಲ. ರೈತರು ಬೆಳೆದ ಗೋಧಿಯನ್ನು ಖರೀದಿಸಲು ಖಾಸಗಿ ಕಂಪನಿಗಳಿಗೆ ಅವಕಾಶ ಮಾಡಿಕೊಟ್ಟು ವಿದೇಶದಿಂದ ದುಬಾರಿ ಬೆಲೆಯ ಗೋಧಿಯನ್ನು ಆಮದು ಮಾಡಿಕೊಳ್ಳಲಾಯಿತು. ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಭರವಸೆ ಕೊಟ್ಟಂತೆ ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಿಸಲು ಯುಪಿಎ ಸರ್ಕಾರ ಮುಂದಾಗದಿದ್ದುದು ಆಹಾರ ಸಮಸ್ಯೆಯನ್ನು ಗಂಭೀರಗೊಳಿಸಿತು. ಶೇ.52 ರಷ್ಟು ಕೃಷಿ ಕೂಲಿಕಾರರು ಮತ್ತು ಇತರ ಬಡವರು ರೇಷನ್ ಪದ್ಧತಿಯಿಂದ ಹೊರಹಾಕಲ್ಪಟ್ಟರು. ಇದೇ ಸಮಯದಲ್ಲಿ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿ ಸಮಸ್ಯೆ ಉಲ್ಬಣಗೊಳ್ಳುವಂತಾಯಿತು. ಈ ಅವಧಿಯಲ್ಲಿ ನಡೆದ ಚುನಾವಣೆಗಳಲ್ಲಿ ಇದರ ಪರಿಣಾಮ ವ್ಯಕ್ತವಾಗಿದ್ದು ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿಯೂ ಅದು ವ್ಯಕ್ತವಾಗಲಿದೆ.

ಸಿಪಿಐ(ಎಂ) ಮಾತ್ರ ನಿರಂತರವಾಗಿ 'ಟಾರ್ಗೆಟ್' ಪದ್ಧತಿಯನ್ನು ಕೈಬಿಟ್ಟು ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಪಕ್ಷ ಬಿಡುಗಡೆ ಮಾಡಿರುವ ಚುನಾವಣಾ ಪ್ರಣಾಳಿಕೆಯಲ್ಲಿಯೂ ಅದರ ಪ್ರಸ್ತಾಪವಿದೆ. ಸಾರ್ವತ್ರಿಕ ರೇಷನ್ ವ್ಯವಸ್ಥೆಯನ್ನು ಪುನಃ ಜಾರಿಗೆ ತರುವ ಮೂಲಕ ಎಲ್ಲರಿಗೂ ರೇಷನ್ ಕಾರ್ಡುಗಳನ್ನು ವಿತರಿಸಬೇಕು. ಎಲ್ಲರಿಗೂ ರೇಷನ್‌ಕಾರ್ಡ್ ವಿತರಣೆ ಮಾಡುವ ಕ್ರಮದಿಂದ ಮಾತ್ರ ಎಲ್ಲಾ ಬಡವರಿಗೆ ರೇಷನ್ ಕಾರ್ಡ್ ದೊರೆಯಲು ಸಾಧ್ಯ. ಇದರಿಂದ ಯಾವುದೇ ರೀತಿಯ ದುರುಪಯೋಗ ಆಗಲಾರದು. ಸರ್ಕಾರ ಮಾತ್ರ ಈ ಆದ್ಯತೆಯ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಶ್ರೀಮಂತರ ಮೇಲೆ ಹೆಚ್ಚು ತೆರಿಗೆಗಳನ್ನು ವಿಧಿಸಿ ಸಾರ್ವತ್ರಿಕ ರೇಷನ್ ವ್ಯವಸ್ಥೆಗಾಗಿ ಅಗತ್ಯ ಸಂಪನ್ಮೂಲಗಳ ಸಂಗ್ರಹ ಮಾಡಲು ಸರ್ಕಾರ ಮುಂದಾಗಬೇಕು.

ಶಿಥಿಲ ಕಾಂಗ್ರೆಸ್‌ನ ರಾಜಕೀಯ ಶೂನ್ಯತೆಯ ಸಮಾವೇಶ



ದೆಹಲಿಯ ಗದ್ದುಗೆಗೆ 'ದಸ್ತಿ' ಹಾಕಿ ಕುಳಿತಿರುವ ಕಾಂಗ್ರೆಸ್ ಪಕ್ಷ ಓಟುಗಳಿಗಾಗಿ ಗಾಳಿಯಲ್ಲಿ ಕೈಯಾಡಿಸುತ್ತಿದೆ. ಒಂದೆಡೆ ಸರ್ಕಾರದಲ್ಲಿ ಜೊತೆಗಿದ್ದ ಪಕ್ಷಗಳೇ ದೂರ ದೂರ ನಿಂತಿವೆ. ಅಥವಾ ಕಾಂಗ್ರೆಸ್ಸನ್ನೆ ದೂರವಿಡುತ್ತಿವೆ. ಕೊನೆಗೂ ರೈಲ್ವೆ ಮಂತ್ರಿ ಲಲ್ಲೂಪ್ರಸಾದ್ ಯಾದವ್ ಸಹ ಬಿಹಾರದಂತಹ ಕಡೆ ಸೀಟು ಹೊಂದಾಣಿಕೆಯ ವಿಷಯದಲ್ಲಿ ಗುಡ್‌ಬೈ ಹೇಳಿದರು. ತೀರಾ ಈ ಒಂದೆರೆಡು ದಿನಗಳಲ್ಲಿ ಪಿ.ಎಂ.ಕೆ.ಪಕ್ಷವೂ ಅಲ್ಲಿಂದ ಹೊರಬಂದು ಎಐಡಿಎಂಕೆ ಮೈತ್ರಿಗೆ ಸೇರಿಕೊಳ್ಳುತ್ತಿದೆ. ಹಾಗೇ ನೋಡಿದರೆ ಕಾಂಗ್ರೆಸ್ ಪಕ್ಷ ಪಶ್ಚಿಮ ಬಂಗಾಳದ ತೃಣ ಮೂಲ ಕಾಂಗ್ರೆಸ್, ಈ ಮೂಲಕ ಮಾವೋವಾದಿಗಳು-ಬಿಜೆಪಿಗಳ ಪ್ರತಿಗಾಮಿಗಳ ಮೈತ್ರಿಗೆ ಬಂದುದು ಎಡರಂಗವನ್ನು ಶತಾಯಗತಾಯ ಸೋಲಿಸಲು ಅಥವಾ ಸಂಸತ್ ಸದಸ್ಯರನ್ನು ಕಡಿಮೆ ಮಾಡಲು ಮಾತ್ರ. ಉಳಿದಂತೆ ಮಹಾರಾಷ್ಟ್ರ ಹಂಚಿಕೆ ಒಂದು ಪ್ರಯಾಸದ್ದೇ, ಹೀಗಿದ್ದರೂ ತಾವೇ ಸರ್ಕಾರ ರಚಿಸುವ ಭರವಸೆ ಇಟ್ಟುಕೊಂಡಿರುವುದು ಸಾದಾ ಮಾರ್ಗ ಎಂದನ್ನುಸುವುದಿಲ್ಲ.



ಇನ್ನೊಂದೆಡೆ ಕಾಂಗ್ರೆಸ್ ಪಕ್ಷ ಕರ್ನಾಟಕವನ್ನೂ ಒಳಗೊಂಡು ಇನ್ನೂ ಅಭ್ಯರ್ಥಿಗಳ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಿಲ್ಲ. ಇಲ್ಲೂ ಗೊಂದಲ, ಒತ್ತಡಗಳು ಇವೆ. ಒಳಜಗಳದ ಕಾವು ಆರಿಲ್ಲ. ರಾಜ್ಯದ ಕಾಂಗ್ರೆಸ್‌ನಲ್ಲಿ ಪ್ರಮುಖ ನಾಯಕರಾಗಿರುವ ಮಾಜಿ ಸಚಿವ ವಿ.ಸೋಮಣ್ಣ, ಡಿ.ಬಿ.ಚಂದ್ರೇಗೌಡ, ಕೆ.ಹೆಚ್.ಶ್ರೀನಿವಾಸ್‌ರಂಥ ಹಲವರು ವಿದಾಯ ಹೇಳುತ್ತಿದ್ದಾರೆ. ಬಿಜೆಪಿ ಅವರನ್ನು ಸೆಳೆಯುತ್ತಿದೆ. ಒಳಗಿನ ವಾತಾವರಣ, ಬಿಜೆಪಿ ಅಧಿಕಾರದ ಹಲವು ಆಮಿಷಗಳು ಜೋರಾಗಿಯೇ ಕೆಲಸ ಮಾಡುತ್ತಿವೆ. ಬಳ್ಳಾರಿಯಂತಲ್ಲಿಯೂ ರೆಡ್ಡಿ ಸಹೋದರರು ಕಾಂಗ್ರೆಸ್‌ನವರಿಗೆ ಗಾಳಹಾಕಿ ಎಳೆದುಕೊಳ್ಳುತ್ತಿದ್ದಾರೆ. ಸಂಸದ ಅಂಬರೀಶ್ ಸ್ಥಿತಿ ಡೋಲಾಯಮಾನ. ಹೀಗಾಗಿ ಕಾಂಗ್ರೆಸ್ ಕರ್ನಾಟಕದಲ್ಲಿ ಒಂದು ಪ್ರಬಲ ಪೈಪೋಟಿಯನ್ನು ನೀಡಬಹುದೇ ಎಂಬುದೇ ಒಂದು ಪ್ರಶ್ನೆ. ಬಿಜೆಪಿ ಎಲ್ಲಾ ಸಿದ್ಧತೆಗಳೊಂದಿಗೆ ಮುನ್ನುಗ್ಗಲು ಯತ್ನಿಸುತ್ತಿರುವಾಗ ಅಧಿಕೃತ ವಿರೋಧ ಪಕ್ಷದ ಹತಾಶ ಸ್ಥಿತಿ ಇದು. ಆದರೆ ಈ ತಿಂಗಳು ದಾಬಸ್ ಪೇಟೆಯಲ್ಲಿ ಜೆಡಿ(ಎಸ್), ಎಡಪಕ್ಷಗಳು ಹಾಗೂ ಇತರೆ ಪಕ್ಷಗಳು ಸೇರಿ ಘೋಷಿತವಾದ ಮೂರನೆಯ ಪರ್ಯಾಯ ಉತ್ಸುಕತೆಯನ್ನು ಎಲ್ಲೆಲ್ಲಿಯೂ ಸೃಷ್ಟಿಸಿದೆ. ರಾಜ್ಯದಲ್ಲಿ ಬಿಜೆಪಿಯನ್ನು- ಕಾಂಗ್ರೆಸ್ಸನ್ನು ಎದುರಿಸುವ ಸನ್ನದ್ಧತೆಯು ಕಂಡು ಬರುತ್ತಿದೆ.

ಈ ನಡುವೆ ಕಾಂಗ್ರೆಸ್ ಪಕ್ಷ ದಾವಣಗೆರೆಯಲ್ಲಿ ಮಾರ್ಚ್ 23 ರಂದು 'ಭಾರತ ನಿರ್ಮಾಣ' ಎಂಬ ರಾಜಕೀಯ ಸಮಾವೇಶವನ್ನು ಸಂಘಟಿಸುವುದರ ಮೂಲಕ ಚುನಾವಣಾ ಪ್ರಚಾರವನ್ನು ಆರಂಭಿಸಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಸಭೆಯನ್ನುದ್ದೇಶಿಸಿ ಮಾತನಾಡಿದ್ದಾರೆ. ಆದರೆ ಒಟ್ಟಾರೆ ಇಂದಿನ ರಾಜಕೀಯ ಸವಾಲುಗಳನ್ನು ಎದುರಿಸುವ ಸ್ಪಷ್ಟ ಹಾದಿ ಕ್ರಮಗಳನ್ನು ನೀಡಲಾಗಲಿಲ್ಲ.

ಬಿಜೆಪಿ ಯು ಕೋಮುವಾದಿಯೆಂದು ವ್ಯಾಖ್ಯಾನಿಸಿ ಟೀಕಿಸಿದರೂ ಕೋಮುವಾದವನ್ನು ಎದುರಿಸಲು ಪ್ರಾಯೋಗಿಕವಾಗಿ ಕಾಂಗ್ರೆಸ್ ಈ ದಿನಗಳಲ್ಲಿ ಏನು ಮಾಡಿದೆ ಎಂಬುದನ್ನು ಹೇಳಲಾಗಲಿಲ್ಲ. ಅಂತಹದ್ದೇನನ್ನಾದರೂ ಮಾಡಿದ್ದರೆ ತಾನೇ? ಕರ್ನಾಟಕದಲ್ಲಿ ಸಂಘಪರಿವಾರ ನಡೆಸಿದ ಅನೇಕಾನೇಕ ಧಾಳಿಗಳನ್ನು ಹಿಮ್ಮೆಟ್ಟಿಸಲು, ಧಾಳಿಗೊಳಗಾದವರಿಗೆ ರಕ್ಷಣೆ ನೀಡಲು ಏನೂ ಮಾಡದೇ ಎಂದೋ ಒಂದು ದಿನ ಭಾಷಣ ಮಾಡಿದ್ದೇ ಹೆಚ್ಚು. ಅಲ್ಲೆ ಪಕ್ಷದ ದಾವಣಗೆರೆ - ಹಾವೇರಿಯಲ್ಲಿ ಚರ್ಚ್‌ಗಳು ಧಾಳಿಗೊಳಗಾದಾಗಲೂ ಕಾಂಗ್ರೆಸ್ ಸ್ಪಂದನ -ನಿರ್ಲಕ್ಷ್ಯ, ತಿರಸ್ಕಾರವೇ. ಹಾಗೆಯೇ ಜನ ಸಾಮಾನ್ಯರ ಬವಣೆಗಳು, ಬೆಲೆ ಏರಿಕೆ ತಡೆಯದ, ರೇಷನ್ ನೀಡದ ಹಲವಾರು ಸಂಕಷ್ಟಗಳ ಸರಮಾಲೆಯೇ ಇದೆ. ಸೋನಿಯಾ ಮಾತಿನಲ್ಲಿ ಅಭಿವೃದ್ಧಿ ಶಬ್ದ ಬಿಟ್ಟರೆ ನಿರ್ದಿಷ್ಟತೆಯೂ ಇರಲಿಲ್ಲ. ಹೀಗೆ ಒಂದು ನಿರ್ಣಾಯಕ ನಿರ್ಧಾರಗಳೇ ರಾಜಕೀಯ ತಾತ್ವಿಕ ದಾರಿದ್ರ್ಯತೆಯಿಂದ ಬಳಲುತ್ತಿರುವ ಕಾಂಗ್ರೆಸ್‌ನಿಂದ ಏನು ನಿರೀಕ್ಷಿಸಬಹುದು? ಆದರೆ ಅವೋಘ ಸಾಧನೆಗಳಲ್ಲೆವೂ ತನ್ನವೆ ಎಂದು ಹೇಳಿಕೊಂಡ ಸೋನಿಯಾಗಾಂಧಿ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರ ಇಡಲೆಂದು ಸೆಕ್ಯೂಲರ್ ಸರ್ಕಾರ ರಚನೆಗಾಗಿ ಹೊರಗಿನಿಂದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಬೆಂಬಲಿಸಿದ್ದ ಎಡ ಪಕ್ಷಗಳನ್ನು ಅಭಿನಂದಿಸದೇ, ಅರ್ಥಹೀನವಾಗಿ ಟೀಕಿಸಿದ್ದು ರಾಜಕೀಯ ದುರ್ಲಾಭದ ಕೃತಘ್ನ ಲೆಕ್ಕಚಾರದಿಂದಾಗಿಯೇ. ಇಲ್ಲಿ ಕಾಂಗ್ರೆಸ್‌ನ ವರ್ಗ ನೀತಿಯನ್ನು ಬಯಲಿಗಿಟ್ಟಿಕೊಂಡರು.

ಅಂತೂ ಮೂರನೆಯ ಪರ್ಯಾಯದ ನಂತರ ತಮ್ಮದೂ ಒಂದು ಎಂದು ಸಮಾವೇಶ ಮುಗಿದಿದೆ. ನಿರ್ಣಾಯಕ ಕ್ರಮಗಳಿಲ್ಲದ ಕಾಂಗ್ರೆಸ್ ರಾಜ್ಯದಲ್ಲಿ-ದೇಶದಲ್ಲಿ ಜನತೆಯ ಹಿತ ಕಾಯಬಲ್ಲುದೇ 'ಗೆಲುವ ಸಾಧಿಸಬಲ್ಲದೇ' ಇದು ಕಾಂಗ್ರೆಸ್ ನಾಯಕರಿಗೂ ಸ್ಪಷ್ಟತೆ ಇಲ್ಲ. ಒಂದಿಷ್ಟು ಅಧಿಕ ಸ್ಥಾನ ಲಭ್ಯವಾದರೆ ಉಳಿದವರನ್ನು ಸೆಳೆಯಬಹುದೆಂಬ ಲೆಕ್ಕಾಚಾರ! ಹೀಗಿವೆ ಅಧಿಕಾರ ಗಳಿಸುವ ಪುರಾತನ ಪಕ್ಷದ ವೈಖರಿ. ಅವಕಾಶವಾದವೇ ರಾಜಕೀಯ ಸಿದ್ಧಾಂತವಾಗಿರುವ ಕಾಂಗ್ರೆಸ್, ಬಿಜೆಪಿಗೆ ಪರ್ಯಾಯವೇ ಅಲ್ಲ.

ಬಳ್ಳಾರಿಯಿಂದ ಬಂದರು ರೈತರು ಕಾಲ್ನಡಿಗೆಯಲ್ಲಿ

ಬಳ್ಳಾರಿಯ ಜಾಗನೂರು ಮತ್ತು ಸಿರಿವಾರ ಗ್ರಾಮಗಳಲ್ಲಿನ ಫಲವತ್ತಾದ 2000 ಎಕರೆ ಕೃಷಿ ಭೂಮಿಯನ್ನು ಬಳ್ಳಾರಿಯ 3ನೇ ವಿಮಾನ ನಿಲ್ದಾಣಕ್ಕಾಗಿ ಬಲತ್ಕಾರದಿಂದ ವಶಪಡಿಸಿಕೊಳ್ಳುವುದನ್ನು ವಿರೋಧಿಸಿ ಮಾರ್ಚ್ 15 ರಂದು ಬಳ್ಳಾರಿಯಿಂದ ಆರಂಭವಾದ ಕಾಲ್ನಡಿಗೆ ಜಾಥಾ ಮಾರ್ಚ್ 25 ರಂದು ಬೆಂಗಳೂರಿಗೆ ತಲುಪಿತು.

ನಗರದ ರೈಲ್ವೆ ನಿಲ್ದಾಣದಿಂದ ರಾಜಭವನದವರೆಗೆ ನಡೆದ ಮೆರವಣಿಗೆಯ ನಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘ ಸೇರಿದಂತೆ ಹಲವು ಸಂಘಟನೆಗಳು ಜಾಥಾದ ನೇತೃತ್ವ ವಹಿಸಿದ್ದವು. ದೇವನಹಳ್ಳಿ ವಿಮಾನ ನಿಲ್ದಾಣಕ್ಕಾಗಿ ಭೂಮಿ ಕಳೆದುಕೊಂಡು ಬೀದಿಪಾಲಾಗಿರುವ ರೈತರು ಜಾಥಾದಲ್ಲಿ ಪಾಲ್ಗೊಂಡಿದ್ದರು.





ಯಶಸ್ವಿ ಯುವಜನ ಸಮ್ಮೇಳನ

ಕೋಮುವಾದ - ಭಯೋತ್ಪಾದನೆ ಮುಕ್ತ ಸೌಹಾರ್ದ ಕರ್ನಾಟಕಕ್ಕಾಗಿ, ಉದ್ಯೋಗಧಾ... ಅಭಿವೃದ್ಧಿಗಾಗಿ ಡಿವೈಎಫ್ಐನ 9ನೇ ರಾಜ್ಯ ಯುವಜನ ಸಮ್ಮೇಳನ ಮಾರ್ಚ್ 23-25, 20... ರ ವರೆಗೆ ಹಾಸನದಲ್ಲಿ ಯಶಸ್ವಿಯಾಗಿ ನಡೆಯಿತು. ಮಾರ್ಚ್ 23 ರಂದು ಹುತಾತ್ಮ ದಿನಾಚರಣೆ ನಡೆಯಿತು. ಸಮ್ಮೇಳನದಲ್ಲಿ ಆಯ್ಕೆಯಾದ ಪದಾಧಿಕಾರಿಗಳ ಪಟ್ಟಿ ಹೀಗಿದೆ.



ಅಧ್ಯಕ್ಷರು : **ಎನ್.ಎಲ್.ಭರತ್‌ರಾಜ್** (ರಾಜ್ಯಕೇಂದ್ರ)


ಉಪಾಧ್ಯಕ್ಷರುಗಳು: **ಮುನೀರ್ ಕಾಟಪಳ್ಳಿ** (ಮಂಗಳೂರು), **ಚನ್ನರಾಯಪ್ಪ** (ಚಿಕ್ಕಬಳ್ಳಾಪುರ), **ನಾಗರಾಜ್** (ಬೆಂಗಳೂರು), **ಸುಜಾತ** (ಮಂಡ್ಯ), **ಪಿ.ಆರ್.ಭರತ್** (ಕೊಡಗು)

ಕಾರ್ಯದರ್ಶಿ : **ಬಿ.ರಾಜಶೇಖರಮೂರ್ತಿ** (ರಾಜ್ಯಕೇಂದ್ರ)

ಖಜಾಂಚಿ : **ಲಿಂಗರಾಜ್** (ಬೆಂಗಳೂರು)

ಜಂಟಿ ಕಾರ್ಯದರ್ಶಿಗಳು : **ರಂಗಪ್ಪ ದಾಸರ** (ಬಳ್ಳಾರಿ), **ಸುರೇಶ್ ಕಲ್ಲಗರ** (ಉಡುಪಿ), **ಆರ್.ಕೃಷ್ಣ** (ಮಂಡ್ಯ), **ಬಿ.ವಿ.ಸಂಪಂಗಿ** (ಕೋಲಾರ) **ಎಂ.ಪಿ. ಮುನಿವೆಂಕಟಪ್ಪ** (ಕೋಲಾರ)

ಕಾರ್ಯದರ್ಶಿ ಮಂಡಳಿ ಸದಸ್ಯರು : **ಶರಣಬಸವ** (ರಾಯಚೂರು) **ರಮೇಶ್‌ಕುಮಾರ್** (ದಕ್ಷಿಣ ಕನ್ನಡ), **ಶಾವಲ್ ಹಮೀದ್** (ಹಾಸನ), **ಶ್ರೀನಿವಾಸ್** (ದಾವಣಗೆರೆ)



ಅಧ್ಯಕ್ಷರು : **ಎನ್.ಎಲ್.ಭರತ್‌ರಾಜ್**



ಕಾರ್ಯದರ್ಶಿ : **ಬಿ.ರಾಜಶೇಖರಮೂರ್ತಿ**

ಚುನಾವಣಾ ಕಣವೇ.... ಏನು ನಿನ್ನ ಕಲಿಗಳ ಲೀಲೆ.......!?

ಕ್ಯಾತೆ • ಶ್ರೀ

ಭಗವದ್ಗೀತೆ ಓದುವಂತೆ ಪ್ರಿಯಾಂಕ ಗಾಂಧಿ ತನ್ನ ತಮ್ಮ ವರುಣ್ ಗಾಂಧಿಗೆ ಸಲಹೆ ನೀಡಿದ್ದಾರೆ. ಅಕಸ್ಮಾತ್ ಆತ ಭಗವದ್ಗೀತೆ ಓದಿದ ಅಂತ ಇಟ್ಕೊಳಿ, 'ಕರ್ಮಣ್ಯೇ ವಾದಿಕಾರಸ್ತೇ ಮಾ ಫಲೇಶು ಕದಾಚನ' ಎನ್ನುವ ಶ್ಲೋಕವನ್ನು, 'ಈಗ ಹೋಗುತ್ತಿರುವ ಕರ್ಮಕಾಂಡದ ರಸ್ತೆಯಲ್ಲೇ ಹೋದರೆ 'ಮಾ' ಫಲ ಕೊಟ್ಟೇ ಕೊಡುತ್ತಾಳೆ' ಅಂತ ಅರ್ಥ ಮಾಡಿಕೊಂಡು ಇದೇ ರಸ್ತೆಯಲ್ಲಿ ಸ್ಪೀಡಾಗಿ ನುಗ್ಗಿದ್ರೆ? ಮೊದಲೇ ಪ್ರಾಣಿ ಪ್ರೇಮಿ ಅವನ 'ಮಾ', ಮನುಷ್ಯತ್ವ ಅಂದರೇನು ಮಾನವೀಯತೆ ಅಂದರೇನು ಅಂತ ತಿಳಿಸದೆ ಕ್ರೂರ 'ಕೇಸರಿ'ಗಳ ಜೊತೆ ಬೆಳೆಸಿದ್ದರಿಂದ ಹೀಗಾಗಿರ ಬಹುದು. ಇರಲಿ, ವರುಣನ ಈ ಹಗರಣವ ಕಂಡು ಕೇಸರೀ ಪಡೆಯಲ್ಲಿ ಕೆಲವರಿಗೆ ಖುಷಿ, ಕೆಲವರಿಗೆ ಆತಂಕ ಶುರುವಾಗಿದೆಯಂತೆ. ಒಬ್ಬ ಆಂಗ್ರೀ ಯಂಗ್ ಯುವನಾಯಕ ಸಿಕ್ಕ ಅಂತ ಕೆಲವರು ಅಂದುಕೊಂಡರೆ, ನಮಗಿಂತ ಜೋರಾಗಿ ಕಿರಿಚಿಕೊಳ್ಳುತ್ತಾನಲ್ಲ ಈ ಪೋರ ಮುಂದೆ ನಮ್ಮನ್ನೇ ಹಿಂದಿಕ್ಕಿದರೆ? ಅಂತ ಕೆಲ ಮುಖಂಡರಿಗೆ ಆತಂಕವಂತೆ. ಆದರೆ ಹೇ..., ವರುಣಾ..., ಭಗವದ್ಗೀತೆಯಲ್ಲಿ ಹೇಳಿಲ್ಲದ ಒಂದು ವಿಚಾರವನ್ನು ಕೇಳುವಂತವನಾಗು! ನಿನ್ನ ಪಕ್ಷದ ತತ್ವ ಏನು ಗೊತ್ತೇ? ನೀನು ಕರ್ಮ ಮಾಡಿದರೆ ಅದರಿಂದ ಬಂದ ಫಲವನ್ನು ಅವರು ಉಂಡು ಮಾವಿನ ಹಣ್ಣು ತಿಂದು ವಾಟೆ/ ಗೊರಟೆಯನ್ನು ಬಿಸಾಡುವ ಹಾಗೆ ಬಿಸಾಡುವರು. ಹೆಚ್ಚಿನ ವಿವರಗಳಿಗಾಗಿ ಉಮಾಭಾರತಿ, ಗೋವಿಂದಾ ಚಾರ್ಯ ಮುಂತಾದವರನ್ನು ಕೇಳಿನೋಡು.

★ ★ ★

ಈ ವರುಣ ಎಂಬ ಬಾಲಕನ 'ಬಾಲ' ಲೀಲೆಗಳು ಇಂತು ಮುಂದುವರೆಯುತ್ತಿರಲಾಗಿ ಅತ್ತ ಸನ್ಮಾನ್ಯ ಪ್ರಧಾನಿ ಮನಮೋಹನ ಸಿಂಗ್ ಹಾಗೂ ಪ್ರಧಾನಿ ಪಟ್ಟದ ಶಾಶ್ವತ ಕನಸುಗಾರ ಸನ್ಮಾನ್ಯ ಲಾಲ ಕೃಷ್ಣ ಆಡ್ವಾನಿ ಎಂಬ ವೃದ್ಧ ಬಾಲಕರು (ವೃದ್ಧಾಪ್ಯವನ್ನು ಎರಡನೇ ಬಾಲ್ಯ ಎನ್ನುತ್ತಾರಲ್ಲ!) 'ನೀನು ದುರ್ಬಲ- ನೀನು ಅಯೋಗ್ಯ' ಎಂದು ಪರಸ್ಪರ ಚಡ್ಡಿ ಎಳೆದಾಡಿ ಕೊಳ್ಳುತ್ತಾ ದೇಶದ ಸಮಸ್ತ ಜನತೆಯೆದುರು ತಮ್ಮ ತಮ್ಮ ಯೋಗ್ಯತೆಯನ್ನು ಬಿಚ್ಚಿಟ್ಟಿದ್ದಾರೆ! ಚುನಾವಣೀ ಕಣವೇ..., ಏನು ನಿನ್ನ ಕಲಿಗಳ ಲೀಲೆ...,!

★ ★ ★

ಇನ್ನು ಕರಿನಾಟಕಕ್ಕೆ ಬಂದರೆ, 'ಬಿಜೇಪಿಯ ಹಿರಿಯ ನಾಯಕರು ಹಾಗೂ ಪ್ರತಿಪಕ್ಷಗಳ ನಾಯಕರ ಮೇಲೆ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಶೋಭಾ ಕರಂದ್ಲಾಜೆ ಕೇರಳದ ಮಾಂತ್ರಿಕರಿಂದ ಮಾಟ ಮಂತ್ರ ಮಾಡಿಸಿದ್ದಾರೆ' ಎಂದು ಬಿಜೆಪಿ ಮುಖಂಡ ಯತ್ನಾಳರೇ ಹೇಳಿದ್ದಾರೆ. ಇತ್ತ ವಿಜಾಪುರದಲ್ಲಿ ಯತ್ನಾಳರು ಹೀಗೆ ಮಾಟದ ವಿಷಯ ಬಟಾಬಯಲು ಮಾಡುತ್ತಿರುವಾಗ ಅತ್ತ ಸಾಗರದಲ್ಲಿ 'ಆಪಾದನೆಗಳು ಲೆಕ್ಕಕ್ಕಿಲ್ಲ, ದೇವರಿಗೆ ಮಾತ್ರ ಹೆದರುವೆ' ಎಂದು ಸನ್ಮಾನ್ಯ ಮುಖ್ಯಮಂತ್ರಿ ಯವರು ಹೇಳಿದ್ದಾರೆ. ಒಟ್ಟಿನಲ್ಲಿ ತಾತ್ಪರ್ಯ ಏನಪಾ.. ಅಂದ್ರೇ ರಾಜ್ಯ, ರಾಜ್ಯದ ಜನತೆ ಇವರಿಗೆ ಆಟಕ್ಕುಂಟು ಲೆಕ್ಕಕ್ಕಿಲ್ಲ! ಏನಿದ್ದರೂ ಮಠ, ಮಾಟ, ಹಠ, ಚಟ, ತಟವಟ ಮುಂತಾದುವೇ ನಮ್ಮ ಆಸ್ತಿ ಎಂದು ಅವರುಗಳೇ ಸ್ವಯಂಘೋಷಣೆ ಮಾಡಿದ ಹಾಗಾಯಿತು ಅಲ್ಲವೇ?

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಲ್ಲಿ ದಾಖಲೆ ಸ್ಥಾಪಿಸಲು ಸನ್ಮಾನ್ಯ ಮುಖ್ಯಮಂತ್ರಿಗಳೂ ಅವರ ಸುಪುತ್ರ ಪರಿವಾರದೊಡಗೂಡಿ ಹಗಲಿರುಳೂ ಪ್ರಯತ್ನಿಸುತ್ತರುವರಾದರೂ ಆದರಲ್ಲಿ ಬಿಹಾರವೇ ಮೊದಲನೇ ಸ್ಥಾನದಲ್ಲಿದೆಯಂತೆ. ಇನ್ನೂ ಸಮಯ ಇದೆ, ನಿಮಗೆ ಶಕ್ತಿಯೂ ಇದೆ, ಅ-ಯೋಗ್ಯತೆಯೂ ಇದೆ, ರಾಜ್ಯಕ್ಕೇ ಮೊದಲ ಸ್ಥಾನ ತರಲು ಪ್ರಯತ್ನಿಸಿ.



ಸಿಪಿಐ(ಎಂ) ಪ್ರಣಾಳಿಕೆ

ಭಾರತದ ಜನತೆಗೊಂದು ಹೊಸದಾರಿ

ಭಾಗ 2

ರಾಷ್ಟ್ರರಾಜಕಾರಣದಲ್ಲಿ ದುಡಿಯುವ ಜನತೆಯ ಪರವಾಗಿ ಶೋಷಿತ ಸಮುದಾಯಗಳ ಪರವಾಗಿ ಮಹತ್ವದ ಪಾತ್ರವಹಿಸುತ್ತಿರುವ ಸಿಪಿಐ(ಎಂ) ಪಕ್ಷವು ಇತ್ತೀಚೆಗೆ ತನ್ನ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಒಂದು ಜನಪರವಾದ ನೀತಿಗಳ ಆಧಾರದಲ್ಲಿ ಬಿಜೆಪಿ-ಕಾಂಗ್ರೆಸ್‌ಗಳಿಗೆ ಬದಲಿಯೊಂದನ್ನು ರೂಪಿಸುವ ಆಶಯವುಳ್ಳ ಪ್ರಣಾಳಿಕೆಯ ಮುಖ್ಯಾಂಶಗಳ ಕುರಿತ ಲೇಖನದ ಎರಡನೇ ಭಾಗ.



ಕಳೆದ ಐದು ವರ್ಷಗಳ ಸಾಧನೆಯು ಸಿಪಿಐ(ಎಂ) ಪಕ್ಷದ ಪ್ರಾಮುಖ್ಯತೆಯ ಕುರಿತಾಗಿ ಹೇಳಬಲ್ಲುದು. ಜನತೆಯ ಹಿತಾಸಕ್ತಿ ಮತ್ತು ಜೀವನೋಪಾಯಗಳನ್ನು ರಕ್ಷಿಸಲು, ರಾಷ್ಟ್ರೀಯ ಸಾರ್ವಭೌಮತೆಯನ್ನು ಸಂರಕ್ಷಿಸಲು, ಕೋಮುವಾದವನ್ನು ಹಿಮ್ಮೆಟ್ಟಿಸಲು, ಸಾಮಾಜಿಕ ನ್ಯಾಯದ ಖಾತರಿಗಾಗಿ ಮತ್ತು ಬೆಳೆಯುತ್ತಿರುವ ಸಾಮ್ರಾಜ್ಯಶಾಹಿಯ ಒಳನುಸುಳುವಿಕೆಯ ವಿರುದ್ದ ಹೋರಾಡಲು ಪಕ್ಷವು ಲೋಕಸಭೆ ಮತ್ತು ಇತರ ಎಲ್ಲೆಡೆ ನಿರಂತರವಾಗಿ ಮಧ್ಯಪ್ರವೇಶಿಸಿದೆ. ಸಿಪಿಐ(ಎಂ) ಪಕ್ಷವು ದೇಶಕ್ಕೆ ಪರ್ಯಾಯ ಹಾದಿಯನ್ನು ರೂಪಿಸಿದೆ. ಈ ವೇದಿಕೆಯು ಕೆಳಗಿನ ಅಂಶಗಳನ್ನು ಒಳಗೊಂಡಿದೆ:

ಧರ್ಮನಿರಪೇಕ್ಷತೆಯನ್ನು ಉತ್ತೇಜಿಸುವುದು:

■ ಕೋಮು ಗಲಭೆಯ ವಿರುದ್ದ ಸಮಗ್ರ ಶಾಸನವನ್ನು ರೂಪಿಸುವುದು; 2002ರಲ್ಲಿ ಗುಜರಾತ್ ನರಮೇಧದಂತಹ ಕೋಮು ಗಲಭೆ ಸಂತ್ರಸ್ತರಿಗೆ ತಕ್ಷಣ ನ್ಯಾಯದ ಖಾತರಿ ಮತ್ತು ಸೂಕ್ತ ಪರಿಹಾರ ಹಾಗೂ ನ್ಯಾಯವಾದಿ ಶ್ರೀ ಕೃಷ್ಣ ಆಯೋಗದ ವರದಿಯ ಅನುಷ್ಠಾನ.

■ ಕೋಮು ದ್ವೇಷ ಹರಡುವ ಮತ್ತು ಅಲ್ಪಸಂಖ್ಯಾತರ ಮೇಲೆ ಧಾಳಿ ಮಾಡುವ ಸಂಘಟನೆಗಳು ಮತ್ತು ಸಂಸ್ಥೆಗಳನ್ನು ಸೂಕ್ತ ಕಾನೂನು ಕ್ರಮಗಳ ಮೂಲಕ ನಿಯಂತ್ರಿಸುವುದು.

ಪರ್ಯಾಯ ಆರ್ಥಿಕ ನೀತಿಗಳು:

■ ವಾರ್ಷಿಕ ಯೋಜನಾ ವೆಚ್ಚವನ್ನು ಪ್ರಸ್ತುತ ಆಂತರಿಕ ದೇಶೀಯ ಉತ್ಪನ್ನದ ಶೇ. 10ರಷ್ಟು ಹೆಚ್ಚಿಸುವುದು.

■ ಕಾರ್ಪೋರೇಟ್ ಕಂಪನಿಗಳಿಗೆ ತೆರಿಗೆ ವಿನಾಯಿತಿಗಳನ್ನು ಕಡಿತ ಮಾಡುವುದು; ಕಪ್ಪುಹಣವನ್ನು ವಿಶೇಷವಾಗಿ ಸ್ವಿಸ್ ಬ್ಯಾಂಕುಗಳಲ್ಲಿ ಬಚ್ಚಿಟ್ಟಿರುವ ಮತ್ತು ಇತರೆ ವಿದೇಶಿ ತೆರಿಗೆ ವಂಚನೆಗಳನ್ನು ಹೊರಗೆಳೆಯುವುದು.

■ ಹಣಕಾಸು ಕ್ಷೇತ್ರದ ಬಲಿಷ್ಟ ನಿಯಂತ್ರಣ, ಹಣಕಾಸಿನ ಮೇಲೆ ಸರ್ಕಾರದ ನಿಯಂತ್ರಣವನ್ನು ಕಾಪಾಡುವುದು ಮತ್ತು ಅಭಿವೃದ್ಧಿ ಹಣಕಾಸಿನ ಪುನಶ್ಚೇತನ

■ ಎಣ್ಣೆ ಕಾಳುಗಳು, ಇತರೆ ವಾಣಿಜ್ಯ ಬೆಳೆಗಳು ಮತ್ತು ಸಾಂಪ್ರದಾಯಿಕ ಕಾಳುಗಳನ್ನು ಒಳಗೊಂಡಂತೆ ಹೆಚ್ಚಿನ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಒದಗಿಸುವುದು; ವಾಣಿಜ್ಯ ಬೆಳೆಗಳಿಗೆ ಮೂಲ ಬೆಲೆಗಳನ್ನು ನಿಗದಿಪಡಿಸಲು ಸರಕು ಮಂಡಳಿಗಳನ್ನು ಪುನಶ್ಚೇತನಗೊಳಿಸುವುದು; ಕೃಷಿ ಕ್ಷೇತ್ರಕ್ಕೆ ಗರಿಷ್ಟ ಶೇ. 4 ರ ಬಡ್ಡಿ ದರದಲ್ಲಿ ಸಾಂಸ್ಥಿಕ ಸಾಲ ನೀಡುವುದು

■ ದೋಷಪೂರಿತ ಬಡತನ ಅಂಕಿಅಂಶಗಳ ಮೇಲೆ ಆಧರಿಸಿರುವ ಗುರಿ-ಕೇಂದ್ರಿತ (ಟಾರ್ಗೆಟೆಡ್) ಪಡಿತರ ವ್ಯವಸ್ಥೆಯನ್ನು ರದ್ದುಪಡಿಸಿ ಸಾರ್ವತ್ರಿಕ ಪಡಿತರ ಚೀಟಿ ವ್ಯವಸ್ಥೆಯನ್ನು ಪುನರ್ ಜಾರಿಗೊಳಿಸುವುದು; ಸಕ್ಕರೆ, ಕಾಳುಗಳು ಮತ್ತು ಎಣ್ಣೆಗಳನ್ನು ಒಳಗೊಂಡಂತೆ 14 ಅತ್ಯಗತ್ಯ ಸರಕುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ಪೂರೈಸುವುದು.

■ ತೈಲದ ಮೇಲಿನ ಕಸ್ಟಮ್ಸ್ ಸುಂಕ ಮತ್ತು ಅಬಕಾರಿ ಸುಂಕವನ್ನು ಕಡಿತಗೊಳಿಸುವ ಮೂಲಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಕಡಿಮೆಗೊಳಿಸುವುದು.

■ ಭೂ-ಮಿತಿ ಕಾನೂನುಗಳ ಅಧಿಕಾರವನ್ನು ಮೊಟಕುಗೊಳಿಸುತ್ತಿರುವ ಪ್ರಸಕ್ತ ಕ್ರಿಯೆಯನ್ನು ತಿರುವುಗೊಳಿಸುವುದು; ಭೂ ಸುಧಾರಣೆಗಳನ್ನು ಜಾರಿಗೊಳಿಸಲು ತಕ್ಷಣದ ಸಮಗ್ರ ಕ್ರಮಗಳನ್ನು ಕೈಗೊಳ್ಳುವುದು.

■ ಹೊಸ ಬಂಡವಾಳ ಮತ್ತು ತಂತ್ರಜ್ಞಾನವನ್ನು ಅಳವಡಿಸುವ ಮೂಲಕ ಅತಿಮುಖ್ಯ ಮತ್ತು ಆಯಕಟ್ಟಿನ ಕ್ಷೇತ್ರಗಳಲ್ಲಿ ಸಾರ್ವಜನಿಕ ರಂಗವನ್ನು ವಿಸ್ತರಿಸಿ ಬಲಪಡಿಸುವುದು; ಲಾಭಮಾಡುತ್ತಿರುವ ಮತ್ತು ಸಮರ್ಥವಾಗಿರುವ ಸಾರ್ವಜನಿಕ ರಂಗದ ಘಟಕಗಳಲ್ಲಿ ಬಂಡವಾಳ ಹಿಂತೆಗೆಯುವುದನ್ನು ಮತ್ತು ಖಾಸಗೀಕರಣ ಗೊಳಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸುವುದು.

■ ಆಮದು ಶುಲ್ಕ ಕಡಿತಗೊಳಿಸುವುದು ಮತ್ತು ವಿದೇಶಿ ಕಂಪನಿಗಳು ಭಾರತೀಯ ಕಂಪನಿಗಳನ್ನು ಕೊಂಡುಕೊಳ್ಳುವ ಕ್ರಮಗಳಿಂದ ದೇಶೀಯ ಕೈಗಾರಿಕೆಗಳನ್ನು ಸಂರಕ್ಷಿಸುವುದು; ಉತ್ಪಾದನಾ ಮತ್ತು ಸೇವಾ ಕ್ಷೇತ್ರಗಳಲ್ಲಿ ಖಾಸಗಿ ಬಂಡವಾಳ ಹೂಡಲು ಪ್ರೋತ್ಸಾಹ ನೀಡುವುದು.

■ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳದ ನಿಷೇಧ; ಪರವಾನಗಿ ನೀತಿಯ ಮೂಲಕ ದೇಶೀಯ ಕಾರ್ಪೋರೇಟ್ ಚಿಲ್ಲರೆ ಮಾರಾಟ ಕಂಪನಿಗಳ ನಿಯಂತ್ರಣ

■ ವಿದೇಶಿ ನೇರ ಬಂಡವಾಳವು ಹಿಂಬಾಗಿಲ ಮೂಲಕ ಪ್ರವೇಶಿಸುವುದನ್ನು ತಡೆಯಲು ವಿದೇಶಿ ನೇರ ಬಂಡವಾಳ ಮಾರ್ಗದರ್ಶಿಗಳನ್ನು ಪರಿಷ್ಕರಿಸುವುದು; ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಮತ್ತು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅಗತ್ಯತೆಗಳಿಗೆ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ನೀಡುವುದು.

■ ಪ್ರಸಕ್ತ ಜರುಗುತ್ತಿರುವ ದೋಹಾ ಸುತ್ತಿನ ಡಬ್ಲ್ಯೂಟಿಒ ಮಾತುಕತೆಯಲ್ಲಿ ಭಾರತದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತಾಸಕ್ತಿಯನ್ನು ರಕ್ಷಿಸುವುದು; ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳ ಮೇಲೆ ಮತ್ತಷ್ಟು ಸುಂಕ ಕಡಿತ ಮಾಡುವ ಪ್ರಶ್ನೆಯೇ ಇಲ್ಲ.

ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಬಲಗೊಳಿಸುವುದು:

■ ಕಲಂ 355 ಮತ್ತು 356 ನ್ನು ದುರುಪಯೋಗಪಡಿಸಿಕೊಳ್ಳದಂತೆ ತಿದ್ದುಪಡಿಗೊಳಿಸುವುದು.



■ ರಾಜ್ಯದ ಮುಖ್ಯಮಂತ್ರಿ ಸಲಹೆ ಮಾಡಿದ ಮೂರು ಗಣ್ಯ ವ್ಯಕ್ತಿಗಳ ಪೈಕಿ ರಾಜ್ಯಪಾಲರನ್ನು ರಾಷ್ಟ್ರಪತಿಯು ನೇಮಕಗೊಳಿಸುವುದು.

■ ಕೇಂದ್ರೀಯ ತೆರಿಗೆಯಲ್ಲಿ ಸಂಗ್ರಹಣೆಯಾದ ಶೇ. 50ರಷ್ಟನ್ನು ರಾಜ್ಯಗಳಿಗೆ ನೀಡುವುದು; ರಾಜ್ಯಗಳು ಪಡೆಯುವ ಮಾರುಕಟ್ಟೆ ಪಾಲಿನ ಪ್ರಮಾಣವನ್ನು ಶೇ. 50ಕ್ಕೆ ಹೆಚ್ಚಿಸುವುದು.

■ ಸಂವಿಧಾನದ ಕಲಂ 370ನೇ ಪೂರ್ಣ ವ್ಯಾಪ್ತಿಯನುಸಾರ ರಾಜ್ಯಕ್ಕೆ ಅಧಿಕ ಸ್ವಾಯತ್ತತೆಯನ್ನು ನೀಡುವ ಆಧಾರದ ಮೇಲೆ ಕಾಶ್ಮೀರ ಸಮಸ್ಯೆಗೆ ಒಂದು ರಾಜಕೀಯ ಪರಿಹಾರ ಕಂಡುಕೊಳ್ಳುವುದು; ಜಮ್ಮು ಕಾಶ್ಮೀರ ಮತ್ತು ಲಡಕ್ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡಲು ಸ್ವಾಯತ್ತ ಪ್ರಾಧಿಕಾರ ರಚಿಸುವುದು.

■ ಈಶಾನ್ಯ ಭಾಗವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಅದನ್ನು ಆದ್ಯತಾ ಪ್ರದೇಶವೆಂದು ಘೋಷಿಸುವುದು; ಭೌತಿಕ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವುದು ಮತ್ತು ಯುವಜನತೆಗಾಗಿ ಉದ್ಯೋಗ ಯೋಜನೆಗಳನ್ನು ತರುವುದು; ಗಡಿಗಳಿಗೆ ಬೇಲಿ ಹಾಕುವ ಕಾರ್ಯವನ್ನು ಚುರುಕಾಗಿ ಪೂರ್ಣಗೊಳಿಸುವುದು.

ಭಯೋತ್ಪಾದನೆ ವಿರುದ್ದ:

■ ಬೇಹುಗಾರಿಕಾ ವ್ಯವಸ್ಥೆಯನ್ನು ಪುನರ್ರೂಪಿಸುವುದು ಮತ್ತು ಭದ್ರತೆ ಹಾಗೂ ಬೇಹುಗಾರಿಕಾ ಏಜೆನ್ಸಿಗಳ ನಡುವೆ ಉತ್ತಮ ಸಂಯೋಜನೆ ತರುವುದು.

■ ಪೋಲೀಸ್ ವ್ಯವಸ್ಥೆಯ ಆಧುನೀಕರಣ; ಬಂದರು ಭದ್ರತಾ ವ್ಯವಸ್ಥೆಯನ್ನು ಬಲಗೊಳಿಸುವುದು.

ಸ್ವತಂತ್ರ ವಿದೇಶಾಂಗ ನೀತಿ:

■ ಸಾಮ್ರಾಜ್ಯಶಾಹಿ ಒತ್ತಡಗಳಿಂದ ಭಾರತವನ್ನು ರಕ್ಷಿಸುವಂತಹ ಸ್ವತಂತ್ರವಾದ ಮತ್ತು ಅಲಿಪ್ತ ವಿದೇಶಾಂಗ ನೀತಿ; ದಕ್ಷಿಣ-ದಕ್ಷಿಣ ಹೊಂದಾಣಿಕೆಗಾಗಿ ಉತ್ತೇಜನ ಮತ್ತು ಅಲಿಪ್ತ ಚಳುವಳಿಯನ್ನು ಪುನಶ್ಚೇತನಗೊಳಿಸುವುದು.

■ ಯಾವುದೇ ಅಂತರಾಷ್ಟ್ರೀಯ ಒಪ್ಪಂದ ಮಾಡಿಕೊಳ್ಳಲು ಪಾರ್ಲಿಮೆಂಟಿನ ಒಪ್ಪಿಗೆ ಪಡೆಯುವಂತೆ ಸಂವಿಧಾನ ತಿದ್ದಪಡಿ ಮಾಡುವುದು

■ ಶ್ರೀಲಂಕಾದ ಯುದ್ದ ಭೂಮಿಯಲ್ಲಿ ತಮಿಳು ಜನತೆಯ ಜೀವ ರಕ್ಷಿಸಲು ರಾಯಭಾರಿ ಮತ್ತು ರಾಜಕೀಯ ಪ್ರಯತ್ನಗಳನ್ನು ಕೈಗೊಳ್ಳುವುದು; ಐಕ್ಯ ಶ್ರೀಲಂಕಾದ ಚೌಕಟ್ಟಿನೊಳಗೇ ತಮಿಳು ಮಾತನಾಡುವ ಪ್ರದೇಶಗಳಿಗೆ ಸ್ವಾಯತ್ತತೆ ನೀಡುವ ಆಧಾರದ ಮೇಲೆ ತಕ್ಷಣದ ರಾಜಕೀಯ ಪರಿಹಾರಕ್ಕಾಗಿ ಕ್ರಮಕೈಗೊಳ್ಳುವುದು.

■ ಪಶ್ಚಿಮ ಏಷ್ಯಾ ರಾಷ್ಟ್ರಗಳೊಂದಿಗೆ ಹತ್ತಿರದ ಬಾಂಧವ್ಯ ಏರ್ಪಡಿಸಿ ಕೊಳ್ಳುವುದು; ಅಮೇರಿಕಾದ ಒತ್ತಡವನ್ನು ಬದಿಗೊತ್ತಿ ಇರಾನ್-ಪಾಕಿಸ್ತಾನ-ಭಾರತ ಅನಿಲ ಕೊಳವೆ ಯೋಜನೆಯನ್ನು ಅನುಷ್ಠಾನಗೊಳಿಸುವುದು.

■ ಅಪಾಯಕಾರಿ ಷರತ್ತುಗಳನ್ನು ತೆಗೆದುಹಾಕಲು ನಾಗರೀಕ ಪರಮಾಣು ಸಹಕಾರಕ್ಕಾಗಿ ಅಮೇರಿಕಾದೊಂದಿಗಿನ 123 ಒಪ್ಪಂದವನ್ನು ಪುನರ್- ಪರಿಶೀಲಿಸುವುದು ಮತ್ತು ಪುನರ್ರೂಪಿಸುವುದು.

■ ಅಮೇರಿಕಾದೊಂದಿಗಿನ ರಕ್ಷಣಾ ಚೌಕಟ್ಟಿನ ಒಪ್ಪಂದವನ್ನು ರದ್ದುಗೊಳಿಸಿ ಭಾರತ- ಅಮೇರಿಕಾ ಜಂಟಿ ಮಿಲಿಟರಿ ಕವಾಯತುಗಳ ನಿರ್ಮೂಲನೆ

ಜನತೆಯ ಹಕ್ಕುಗಳು ಮತ್ತು ದುಡಿಯುವ ಜನತೆಗೆ ಸಾಮಾಜಿಕ ನ್ಯಾಯ:

■ ಅಂತರಾಜ್ಯ ವಲಸೆ ಕಾರ್ಮಿಕರ ಕಾನೂನು ಸಹ ಒಳಗೊಂಡಂತೆ ಎಲ್ಲ ಕಾರ್ಮಿಕ ಕಾನೂನುಗಳನ್ನು ಗಂಭೀರವಾಗಿ ಜಾರಿಯಾಗುವಂತೆ ಖಾತರಿ; ಗುತ್ತಿಗೆ

ಪುಟ 6 ಕ್ಕೆ

ಸಿಪಿಐ(ಎಂ) ಪ್ರಣಾಳಿಕೆ....

ಪುಟ 5 ರಿಂದ

ನೀಡುವುದನ್ನು ನಿರ್ಬಂಧಿಸುವುದು.

■ ಅಸಂಘಟಿತ ವಲಯ ಕಾರ್ಮಿಕರ ಕುರಿತಾದ ಶಾಸನವನ್ನು ಅಭಿವೃದ್ಧಿಪಡಿಸುವುದು ಮತ್ತು ಈ ಸಂಬಂಧ ಕೆಲಸದ ಕುರಿತಾದ ಸ್ಥಾಯಿ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸುವುದು; ವಲಸೆ ಕಾರ್ಮಿಕರು ಮತ್ತು ತೋಟ ಕಾರ್ಮಿಕರಿಗಾಗಿ ವಿಶೇಷ ಭದ್ರತಾ ಕ್ರಮಗಳನ್ನು ಕೈಗೊಳ್ಳುವುದು.

■ ಎಲ್ಲ ರಂಗದಲ್ಲೂ ಮಹಿಳಾ ಕಾರ್ಮಿಕರಿಗೆ ಸಮಾನ ವೇತನ ದೊರೆಯುವಂತೆ ಖಾತರಿ; ಹೆರಿಗೆ ಸೌಲಭ್ಯವೂ ಒಳಗೊಂಡಂತೆ ಮಹಿಳಾ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ ಜಾರಿ.

■ ಸರಕಾರೀ ನೌಕರರೂ ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಸಂಘಟನೆಯ , ಸಾಮೂಹಿಕ ಚೌಕಾಸಿಯ ಹಾಗೂ ಮುಷ್ಕರದ ಹಕ್ಕುಗಳ ರಕ್ಷಣೆ; ಮುಷ್ಕರವನ್ನು ನಿಷೇಧಿಸುವ ಸುಪ್ರಿಂ ಕೋರ್ಟ್ ತೀರ್ಪನ್ನು ಅಳಿಸಿ.ಹಾಕಲು ಶಾಸನವನ್ನು ತರುವುದು.

ರೈತಾಪಿ ಜನಗಳು

ಬೆಳೆಗಳಿಗೆ ಸ್ಥಿರ ಮತ್ತು ಫಲದಾಯಕ ಬೆಲೆಗಳು ಸಿಗುವಂತೆ ಮಾಡುವುದು; ಬೀಳುತ್ತಿರುವ ಜಾಗತಿಕ ಬೆಲೆಗಳಿಂದ ರೈತಾಪಿ ಜನಗಳಿಗೆ ರಕ್ಷಣೆ.

ಸಂಕಟಗ್ರಸ್ತ ರೈತರಿಗೆ ಸಾಂಸ್ಥಿಕ ಮತ್ತು ಲೇವಾದೇವಿಗಾರರಿಗೆ ಕೊಡಬೇಕಾದ ಖಾಸಗಿ ಸಾಲಗಳು ಎರಡನ್ನೂ ಒಳಗೊಳ್ಳುವಂತೆ ಸಮಗ್ರ ಸಾಲ ಮನ್ನಾ.

ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿಗಳು, ಸಾಮೂಹಿಕವಾಗಿ ಚೌಕಾಸಿ ಮಾಡುವ ಹಕ್ಕು ಮತ್ತು ಪಿಂಚಣಿ, ಅಪಘಾತ ಪರಿಹಾರ ಇತ್ಯಾದಿ ಸಾಮಾಜಿಕ ಭದ್ರತೆಯ ಕ್ರಮಗಳನ್ನು ಕೇಂದ್ರ ಸರಕಾರದ ಹಣ ನೀಡಿಕೆಯೊಂದಿಗೆ ತರುವಂತೆ ಒಂದು ಪ್ರತ್ಯೇಕ ಮತ್ತು ಸಮಗ್ರ ಶಾಸನವನ್ನು ರೂಪಿಸುವುದು.

ಮಹಿಳೆಯರು ಮತ್ತು ಮಕ್ಕಳು

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೂರನೆ ಒಂದು ಮೀಸಲಾತಿ ಸಿಗುವಂತೆ ಮಹಿಳಾ ಮೀಸಲಾತಿ ಮಸೂದೆಯನ್ನು ತರುವುದು.

ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಸೇರಿದಂತೆ ಮಹಿಳೆಯರ ಮೇಲಿನ ಲೈಂಗಿಕ ಹಿಂಸಾಚಾರದ ವಿರುದ್ಧ ಒಂದು ಸಮಗ್ರ ಶಾಸನ; ವೈವಾಹಿಕ ಆಸ್ತಿಗಳಲ್ಲಿ ಜಂಟಿ ಹಕ್ಕುಗಳನ್ನು ಕಾನೂನು ಪ್ರಕಾರ ಮಾನ್ಯ ಮಾಡುವುದು; ಗೌರವಕ್ಕಾಗಿ ಕೊಲೆಗಳನ್ನು ಮಾಡುವುದರ ವಿರುದ್ಧ ಪ್ರತ್ಯೇಕ ಕಾನೂನು.

ವರದಕ್ಷಿಣೆ ಮತ್ತು ಹೆಣ್ಣು ಭ್ರೂಣ ಹತ್ಯೆಯ ನಿರ್ಮೂಲನವನ್ನು ಒಂದು ರಾಷ್ಟ್ರೀಯ ಮಿಶನ್ ಆಗಿ ಕೈಗೊಳ್ಳುವುದು.

ಐಸಿಡಿಎಸ್ ನ್ನು ಆರು ವರ್ಷಗಳ ವರೆಗಿನ ಎಲ್ಲಾ ಮಕ್ಕಳನ್ನು ಒಳಗೊಳ್ಳುವಂತೆ ಸಾರ್ವತ್ರೀಕರಿಸುವುದು; ಐಸಿಡಿಎಸ್ ಖಾಸಗೀಕರಣವನ್ನು ನಿಲ್ಲಿಸುವುದು.

ದಲಿತರು, ಆದಿವಾಸಿಗಳು ಮತ್ತು ಒಬಿಸಿಗಳು

ಅಸ್ಪೃಶ್ಯತೆ ಮತ್ತು ಪರಿಶಿಷ್ಟ ಜಾತಿಗಳ ವಿರುದ್ಧ ಅತ್ಯಾಚಾರಗಳ ವಿರುದ್ಧ ಕಠಿಣ ಕ್ರಮ.

ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಹೆಚ್ಚಿನ ಹಣ ನೀಡಿಕೆ; ದಲಿತರು ಮತ್ತು ಆದಿವಾಸಿಗಳ ನೀರಾವರಿ ಇಲ್ಲದ ಭೂಮಿಗಳಿಗೆ ಒಂದು ಸಮಗ್ರ ರಾಷ್ಟ್ರೀಯ ಕಿರು ನೀರಾವರಿ ಕಾರ್ಯಕ್ರಮವನ್ನು ಆರಂಭಿಸುವುದು.

ದಲಿತ ಕ್ರೈಸ್ತರಿಗೆ ಮತ್ತು ದಲಿತ ಮುಸ್ಲಿಮರಿಗೆ ಮೀಸಲಾತಿ ವಿಸ್ತರಣೆ.

ಆದಿವಾಸಿಗಳ ಭೂಹಕ್ಕುಗಳನ್ನು ರಕ್ಷಿಸುವುದು ಮತ್ತು ಅವರಿಂದ ಕಾನೂನುಬಾಹಿರವಾಗಿ ಪರಭಾರೆ ಮಾಡಿಕೊಂಡ ಭೂಮಿಯನ್ನು ಮತ್ತೆ ಅವರದಾಗಿಸುವುದು.

ಪರಿಶಿಷ್ಟ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ(ಅರಣ್ಯ ಹಕ್ಕುಗಳ ಮಾನ್ಯತೆ) ಕಾನೂನು. 2006ನ್ನು ಪೂರ್ಣವಾಗಿ ಜಾರಿಗೆ ತರುವುದು; ಒಂದು ಹೆಚ್ಚು ತರ್ಕಬದ್ಧವಾದ ನಿರೂಪಣೆಯ ಮೇಲೆ ಪಾರಂಪರಿಕ ಅರಣ್ಯ ವಾಸಿಗಳನ್ನು ಒಳಗೊಳ್ಳಲು ಕಾನೂನಿನ ತಿದ್ದುಪಡಿ.

ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ 27ಶೇಕಡಾ ಒಬಿಸಿ(ಇತರ ಹಿಂದುಳಿದ ವರ್ಗಗಳು) ಮೀಸಲಾತಿಯ ಸರಿಯಾದ ಜಾರಿ ಆಗುವಂತೆ ಮಾಡುವುದು; ಅದನ್ನು ಎಲ್ಲಾ ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸುವುದು.

ಅಲ್ಪಸಂಖ್ಯಾತರು

ಒಂದು ಸಮಾನ ಅವಕಾಶ ಆಯೋಗವನ್ನು ಸಾಕಷ್ಟು ಅಧಿಕಾರಗಳೊಂದಿಗೆ ರಚಿಸಿ ಅಲ್ಪಸಂಖ್ಯಾತರ ವಿರುದ್ಧ ಪಕ್ಷಪಾತವನ್ನು ಹೋಗಲಾಡಿಸುವುದು.

ಬುಡಕಟ್ಟು ಉಪಯೋಜನೆಯ ರೀತಿಯಲ್ಲಿ, ಸಾಚರ್ ಸಮಿತಿ ಶಿಫಾರಸುಗಳನ್ನು ಜಾರಿಗೆ ತರಲು ಒಂದು ಉಪಯೋಜನೆಯನ್ನು ರೂಪಿಸುವುದು; ಉದ್ಯೋಗ, ಶಿಕ್ಷಣ ಮತ್ತು ಆರೋಗ್ಯದ ವಲಯದಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ವಿಶೇಷ ಮುತುವರ್ಜಿಗಳನ್ನು ಕೈಗೊಳ್ಳುವುದು.

ರಂಗನಾಥ ಮಿಶ್ರ ಆಯೋಗದ ವರದಿಯನ್ನು ಸಾರ್ವಜನಿಕಗೊಳಿಸುವುದು ಮತ್ತು ಅದರ ಮೇಲೆ ಪೂರ್ಣ ರೀತಿಯಲ್ಲಿ ಚರ್ಚೆಯಾಗುವಂತೆ ಮಾಡುವುದು; ತಕ್ಷಣದ ಕ್ರಮವಾಗಿ ಮುಸ್ಲಿಂ ಸಮುದಾಯದ ಬಹುದೊಡ್ಡ ವಿಭಾಗವಾದ ಎಲ್ಲಾ ಒಬಿಸಿ ಮುಸ್ಲಿಮರನ್ನು ಒಬಿಸಿ ಕೋಟಾದಲ್ಲಿ ನಿರ್ದಿಷ್ಟ ರಾಜ್ಯವಾರು ಪ್ರಮಾಣಗಳೊಡನೆ ಸೇರಿಸುವುದು.

ಜನಗಳ ಕಲ್ಯಾಣ

ಉದ್ಯೋಗ ಖಾತ್ರಿಯನ್ನು ಎಲ್ಲ ವಯಸ್ಕರಿಗೆ ಕೇಳುವ ದಿನಗಳಷ್ಟು ವರೆಗೆ ವಿಸ್ತರಿಸುವುದು; ಉದ್ಯೋಗ ಖಾತ್ರಿಯನ್ನು ಶಾಸನವನ್ನು ರೂಪಿಸುವ ಮೂಲಕ ನಗರ ಪ್ರದೇಶಗಳಿಗೆ ವಿಸ್ತರಿಸುವುದು.

ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚವನ್ನು ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ದ 6 ಕ್ಕೇರಿಸುವುದು.

ಶಿಕ್ಷಣದ ಹಕ್ಕು ಮಸೂದೆ ತರುವುದು; ಅದರ ಜಾರಿಗೆ ಕೇಂದ್ರ ಸರಕಾರ ಹಣಕಾಸಿನ ಬಾಧ್ಯತೆಯ ಪ್ರಧಾನ ಭಾಗವನ್ನು ವಹಿಸಿಕೊಳ್ಳುವುದು.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶುಲ್ಕಗಳು, ಪ್ರವೇಶ ಮತ್ತು ಪಠ್ಯಕ್ರಮವನ್ನು ನಿಯಂತ್ರಿಸಲು ಶಾಸನವನ್ನು ರೂಪಿಸುವುದು.

ಆರೋಗ್ಯದ ಮೇಲೆ ಸಾರ್ವಜನಿಕ ವೆಚ್ಚವನ್ನು ಜಿಡಿಪಿಯ 5 ಶೇಕಡಾಕ್ಕೆ ಹೆಚ್ಚಿಸುವುದು.

ಎಲ್ಲಾ ಮೂಲಭೂತ ಆರೋಗ್ಯ ಸೇವೆಗಳನ್ನು ಒದಗಿಸುವ ಖಾತ್ರಿ ನೀಡಲು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ವಿಸ್ತರಿಸುವುದು; ಖಾಸಗಿ-ಸಾರ್ವಜನಿಕ ಭಾಗವಹಿಸುವಿಕೆ (ಪಿಪಿಪಿ) ಮೂಲಕ ನಡೆದಿರುವ ಖಾಸಗೀಕರಣದ ಪ್ರವೃತ್ತಿಯನ್ನು ಬದಲಿಸುವುದು.

ಜೀವನ ವೆಚ್ಚಕ್ಕೆ ಅನುಗುಣವಾಗಿ ಎಲ್ಲಾವಿಧಗಳ ನಿವೃತ್ತಿದಾರರ ಪಿಂಚಣಿಯನ್ನು ಮೇಲ್ದರ್ಜೆಗೆ ಏರಿಸುವುದು; ಮಾಜಿ ಸೈನಿಕರಿಗೆ ಒಂದು ದರ್ಜೆ-ಒಂದು ಪಿಂಚಣಿ.

ಪರಿಸರ

ಇಂಧನ-ದಕ್ಷ ತಂತ್ರಜ್ಞಾನಗಳು ಮತ್ತು ಪರಿಣಾಮಕಾರಿ ನಿಯಂತ್ರಣದ ಮೂಲಕ (ಗ್ರೀನ್‌ಹೌಸ್) ಹಸಿರುಮನೆ ಅನಿಲಗಳ ವಿಸರ್ಜನೆಯ ಹತೋಟಿಗೆ ಕ್ರಮಗಳನ್ನು ಕೈಗೊಳ್ಳುವುದು; ಸೌರಶಕ್ತಿ ಮತ್ತು ಇತರ ಅಸಾಂಪ್ರದಾಯಿಕ ಇಂಧನ ಮೂಲಗಳಿಗೆ ಪ್ರೋತ್ಸಾಹ.

ಪರಿಣಾಮಕಾರಿ ನಿಯಂತ್ರಣದ ಮೂಲಕ ನದಿಗಳ ಮತ್ತು ಇತರ ಜಲಮೂಲಗಳ ಮಾಲಿನ್ಯವನ್ನು ತಡೆಯುವುದು.

ಗ್ರಹ ಬಳಕೆ, ನೀರಾವರಿ ಮತ್ತು ಉದ್ದಿಮೆಗೆ ನೀರಿನ ಲಭ್ಯತೆಯನ್ನು ಹೆಚ್ಚಿಸಲು ಒಂದು ರಾಷ್ಟ್ರೀಯ ಜಲ ನೀತಿಯನ್ನು ರೂಪಿಸುವುದು; ಎಲ್ಲಾ ನಿವಾಸಿಗಳಿಗೆ ಕುಡಿಯುವ ನೀರನ್ನು ಒದಗಿಸಲು ಆದ್ಯತೆ ನೀಡುವುದು.

ವಿಜ್ಞಾನ ಮತ್ತು ತಂತ್ರಜ್ಞಾನ

ಸ್ವಾವಲಂಬನೆಯನ್ನು ಪ್ರೋತ್ಸಾಹಿಸಲು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ದೇಶೀ ಸಂಶೋಧನೆಗೆ ಸಾರ್ವಜನಿಕ ಹಣನೀಡಿಕೆಯನ್ನು ಹೆಚ್ಚಿಸುವುದು; ಸಂಶೋಧನೆ ಮತ್ತು ಅಭಿವೃದ್ಧಿಗೆ ಹಣ ನೀಡಿಕೆಯ ವಿಕೇಂದ್ರೀಕರಣ; ವಿಜ್ಞಾನಗಳಲ್ಲಿ ಮೂಲಭೂತ ಸಂಶೋಧನೆಗೆ ಆದ್ಯತೆ ನೀಡುವುದು.

ಮುಕ್ತ ತಂತ್ರಾಂಶ(ಫ್ರೀ ಸಾಫ್ಟ್‌ವೇರ್) ಮತ್ತು ಇಂತಹ ಕಾಪಿರೈಟ್‌ಗಳು ಮತ್ತು ಪೇಟೆಂಟ್‌ಗಳ ಮೂಲಕ ಗುತ್ತೇದಾರಿ ಮಾಲಕತ್ವದಿಂದ ಮುಕ್ತವಾದ ಇತರ ತಂತ್ರಜ್ಞಾನಗಳಿಗೆ ಪ್ರೋತ್ಸಾಹ; ಜೈವಿಕ ತಂತ್ರಜ್ಞಾನ ಮತ್ತು ಔಷಧಿ ಶೋಧನೆ ಮುಂತಾದವುಗಳಲ್ಲಿ "ಜ್ಞಾನ ಸಾಮಾನ್ಯ"ಇನ್ನು ಪ್ರೋತ್ಸಾಹಿಸಬೇಕು.

ಮಾಧ್ಯಮ ಮತ್ತು ಸಂಸ್ಕೃತಿ

ಸಂವಿಧಾನದ ಎಂಟನೇ ಶೆಡ್ಯೂಲಿನಲ್ಲಿ ಪಟ್ಟಿ ಮಾಡಿದ ಎಲ್ಲಾ ರಾಷ್ಟ್ರೀಯ ಭಾಷೆಗಳನ್ನು ಸಮಾನವಾಗಿ ಪ್ರೋತ್ಸಾಹಿಸಬೇಕು ಮ[...] ಬೆಳೆಸಬೇಕು.

ಜಾತ್ಯಾತೀತ, ಪ್ರಗತಿಪರ ಮತ್ತು ಪ್ರಜಾಸತ್ತ[...] ಸಂಸ್ಕೃತಿ; ಸಾಂಸ್ಕೃತಿಕ ವ್ಯಕ್ತಿಗಳು ಮತ್ತು ಕೃತಿಗಳ ಮೇ[...] ಕೋಮುವಾದಿ ಶಕ್ತಿಗಳ ದಾಳಿಗಳ ವಿರುದ್ಧ ದೃಢವ[...] ಕ್ರಮಗಳನ್ನು ಕೈಗೊಳ್ಳಬೇಕು.

ಮಾಧ್ಯಮಗಳಿಗೆ ಒಂದು ಸ್ವತಂತ್ರ ನಿಯಂತ್ರ[...] ಪ್ರಾಧಿಕಾರವಾಗಿ ಕೆಲಸ ಮಾಡಲು ಒಂದು ಮಾಧ್ಯ[...] ಮಂಡಳಿಯನ್ನು ರಚಿಸುವುದು.

ಸಾಂಸ್ಥಿಕ ಸುಧಾರಣೆಗಳು

■ ಪ್ರಧಾನ ಮಂತ್ರಿ, ಸಂಸತ್ ಸದಸ್ಯರು ಮ[...] ನ್ಯಾಯಾಂಗವೂ ಸೇರಿದಂತೆ ಉನ್ನತ ಸ್ಥಾನಗ[...] ಭ್ರಷ್ಟಾಚಾರವನ್ನು ನಿಲ್ಲಿಸಲು ಲೋಕಪಾ[...] ಮಸೂದೆಯನ್ನು ತರುವುದು.

■ ಒಂದು ರಾಷ್ಟ್ರೀಯ ನ್ಯಾಯಾ[...] ಆಯೋಗವನ್ನು ನ್ಯಾಯಾಧೀಶರ ನೇಮ[...] ವರ್ಗಾವಣೆ ಮತ್ತು ವಜಾಕ್ಕಾಗಿ ಹಾಗೂ ನ್ಯಾಯಾಂ[...] ಜವಾಬುದಾರಿಕೆಗಾಗಿ ನ್ಯಾಯಾಂಗ, ಕಾರ್ಯಾಂ[...] ಶಾಸಕಾಂಗ ಹಾಗೂ ನ್ಯಾಯವಾದಿ ಸಮುದಾಯ[...] ಪ್ರತಿನಿಧಿಗಳಿಂದ ಕೂಡಿರುವ ಒಂದು ಸ್ವತಂ[...] ಸಾಂವಿಧಾನಿಕ ಸಂಸ್ಥೆಯಾಗಿ ರಚಿಸುವುದು.

■ ಚುನಾವಣಾ ಆಯೋಗದ ಸದಸ್ಯ[...] ರಾಷ್ಟ್ರಪತಿಗಳು ಪ್ರಧಾನಮಂತ್ರಿಗಳು, ಪ್ರತಿಪಕ್ಷ[...] ಮುಖಂಡರು ಮತ್ತು ಸುಪ್ರಿಂ ಕೋರ್ಟಿನ ಮು[...] ನ್ಯಾಯಾಧೀಶರನ್ನು ಒಳಗೊಂಡ ಒಂದು ಸಮಿತಿ[...] ಸಲಹೆಯ ಮೇರೆಗೆ ನೇಮಿಸುವುದು.

■ ಭಾಗಶಃ ಪಟ್ಟಿ ವ್ಯವಸ್ಥೆಯೊಂದಿಗೆ ಅನುಪಾತ[...] ಪ್ರಾತಿನಿಧ್ಯ.

■ ಅಪರಾಧ ಹಿನ್ನೆಲೆಯ ವ್ಯಕ್ತಿಗಳ[...] ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ನಿಷೇಧಿಸ[...] ಪರಿಣಾಮಕಾರಿ ಕ್ರಮಗಳು.

■ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ[...] ವಸ್ತುಗಳ ಸ್ವರೂಪದಲ್ಲಿ ಸರಕಾರದಿಂದ ಹಣ ನೀಡಿ[...]

ಪ್ರಭುತ್ವದಡಿ ಪಾರಿವಾಳ

ಕರಾವಳಿ ಕರ್ನಾಟಕದಲ್ಲಿ ಕೆಲವು ದಶಕಗಳಿಂದ ನಾಗರೀಕ ಸಮಾಜದ ಸ್ವಾಸ್ಥ್ಯವನ್ನು ರಾಜಕೀಯ ಲಾಭಕ್ಕಾಗಿ ಕೆಡಿಸಲಾಗುತ್ತಿದೆ. ದ್ವೇಷ ಬಿತ್ತಿ, ದೇಶ ಕಟ್ಟುವ ಪಿತೂರಿಗೆ ನಮ್ಮ ನಾಗರೀಕ ಸಮಾಜ ಬಲಿಯಾಗುತ್ತಿರುವುದು ದುರಂತವೇ ಸರಿ. ನಮ್ಮ ವಿದ್ಯಾರ್ಥಿ ಯುವ ಜನರಿಗೆ ಇತಿಹಾಸ, ಸಮಾಜ ಶಾಸ್ತ್ರದ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ಶಿಕ್ಷಣ ಕ್ಷೇತ್ರ ಎಂದು ಡಾ.ಉದಯ ಬಾರ್ಕೂರ್‌ರವರು ಅಭಿಪ್ರಾಯಪಟ್ಟರು. ಕುಂದಾಪುರ ಸಮುದಾಯವು ಮಾರ್ಚ್ 22 ರಂದು ಏರ್ಪಡಿಸಿದ ಸೌಹಾರ್ದ ಚಿಂತನೆ ಅಧ್ಯಯನ ಗೋಷ್ಠಿಯಲ್ಲಿ ಪ್ರಭುತ್ವದಡಿ 'ಪಾರಿವಾಳ' ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ಪೊಲೀಸ್ ವ್ಯವಸ್ಥೆ ಸಮಾಜದ ದುಷ್ಟ ಶಕ್ತಿಗಳೊಂದಿಗೆ ಶಾಮಿಲಾಗಿ ಸತ್ಯದ ಬಾಯಿ ಮುಚ್ಚಿಸುವ ಪ್ರಯತ್ನ ನಡೆಸುತ್ತಿದೆ. ಶಾಂತಿ ಸೌಹಾರ್ದತೆಯನ್ನು ಕಾಪಾಡಬೇಕಾದ ಪ್ರಭುತ್ವ, ಕಾನೂನು ವ್ಯವಸ್ಥೆ ಸಂಪೂರ್ಣ ಭ್ರಷ್ಟವಾಗಿದೆ. ಅನ್ಯಾಯವನ್ನು ವಿರೋಧಿಸುವವರಿಗೆ ನಕ್ಸಲೈಟ್ ಹಣೆಪಟ್ಟಿ ಕಟ್ಟಿ ಶಂಕಿತ ಆರೋಪಿಯ ಪಟ್ಟಿಯಲ್ಲಿ ಸೇರಿಸಿ ಬೆದರಿಸಲಾಗುತ್ತಿದೆ. ನಿರುದ್ಯೋಗ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ನಮ್ಮ ಸರಕಾರ ಪ್ರಾಮಾಣಿಕ ಕಾಳಜಿ ವಹಿಸಿದಲ್ಲಿ ಯುವಜನತೆ ಸಮಾಜ ವಿರೋಧಿ ಚಟುವಟಿಕೆಯಲ್ಲಿ ತೊಡಗುವುದನ್ನು ತಡೆಯಬಹುದು ಎಂದು ವಿಶ್ಲೇಷಿಸಿದರು. ಭಗತ್‌ಸಿಂಗ್ ನೆನಪಿನಲ್ಲಿ ಏರ್ಪಡಿಸಿದ ಅಧ್ಯಯನ ಗೋಷ್ಠಿಯಲ್ಲಿ ಅದಮಾರು ಶ್ರೀಪತಿ ಆಚಾರ್ಯ ಭಗತ್‌ಸಿಂಗ್‌ನ ಆಶಯವನ್ನು ಪ್ರಸ್ತಾಪಿಸುತ್ತ ದೇಶ ಸ್ವಾತಂತ್ರ್ಯವಾಗುವುದು ಎಂದರೆ ಸಮಾನತೆಯ ಸಮಾಜ ನಿರ್ಮಾಣ ಈ ದಿಸೆಯಲ್ಲಿ ರೈತ ಕಾರ್ಮಿಕರ ಆರ್ಥಿಕ ಸ್ವಾತಂತ್ರ್ಯ ಅತಿ ಅಗತ್ಯ ಎಂದು ಭಗತ್‌ಸಿಂಗ್ ನಂಬಿದ್ದರು ಎಂದು ವಿವರಿಸಿದರು.

ಇತ್ತೀಚಿನ ದಿನಗಳಲ್ಲಿ ಬೆಳಕೇ ಕಾಣುತ್ತಿಲ್ಲ ಸಮಾಜ ಕತ್ತಲಲ್ಲಿ ಮುಳುಗಿದೆ. ಸೌಹಾರ್ದ ಸಮಾನತೆಯ ಸಮಾಜ ಕಟ್ಟಲು ನಾವು ಸಣ್ಣ ದೀಪ ಹಚ್ಚಲು ಪ್ರಯತ್ನಿಸೋಣ ಎಂದು ಡಾ.ಜಿ.ಬಿ. ಮಯ್ಯರವರು ತಿಳಿಸಿದರು. ರವಿ ವಿ.ಎಂ. ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸಿದರು. ಸಮುದಾಯದ ಅಧ್ಯಕ್ಷರಾದ ಕೆ.ಪ್ರಭಾಕರನ್ ಸ್ವಾಗತಿಸಿದರು. ಕಾರ್ಯದರ್ಶಿ ಸದಾನಂದ ಬೈಂದೂರು ಕಾರ್ಯಕ್ರಮ ನಿರ್ವಹಣೆ ಮಾಡಿದರು ಉಪಾಧ್ಯಕ್ಷ ಜಿ.ವಿ.ಕಾರಂತ ವಂದಿಸಿದರು.



ಮೂರನೇ ಪರ್ಯಾಯದ ಬಲವರ್ಧನೆ ಬಿಜೆಪಿ-ಕಾಂಗ್ರೆಸ್‌ಗಳಲ್ಲಿ ನಡುಕ

ರಾಷ್ಟ್ರರಾಜಕಾರಣದಲ್ಲಿ ಮೂರನೇ ಪರ್ಯಾಯದ ಬಲವರ್ಧನೆಯಾಗುತ್ತಿದೆ. ಅದು ಕಾಂಗ್ರೆಸ್-ಬಿಜೆಪಿಗಳಲ್ಲಿ ಆತಂಕ ಮೂಡಿಸಿದೆ. ಹೀಗಾಗಿಯೇ ಕಾಂಗ್ರೆಸ್ - ಬಿಜೆಪಿಗಳು ಮೂರನೇ ಪರ್ಯಾಯದ ಕುರಿತು ತೀವ್ರವಾದ ಟೀಕೆಗಳಿಗೆ ಹಾಗೂ ಅವಹೇಳನಕ್ಕೆ ಮುಂದಾಗಿವೆ.

ಪ್ರಕಾಶ್ ಕಾರಟ್

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್-ಬಿಜೆಪಿಯೇತರ ಮೈತ್ರಿಕೂಟವು ಒಂದಾಗಿ ಸಮರ್ಥವಾಗಿ ಚುನಾವಣೆಯನ್ನು ಎದುರಿಸಲು ಸಾಧ್ಯವಾಗುತ್ತದೆ ಎಂಬುದಕ್ಕೆ ಇತ್ತೀಚಿನ ಬೆಳವಣಿಗೆಗಳು ಸಾಕ್ಷಿಯಾದವು. ಮಾರ್ಚ್-12 ರಂದು ಕರ್ನಾಟಕದ ದಾಬಸ್‌ಪೇಟೆಯಲ್ಲಿ ಸಮಾವೇಶಗೊಂಡಿದ್ದ ಬೃಹತ್ ರ್‍ಯಾಲಿ ಹಾಗೂ ಸಮಾವೇಶದಲ್ಲಿ ಏಳು ಪ್ರಮುಖ ಪಕ್ಷಗಳ ನಾಯಕರು ಪಾಲ್ಗೊಂಡ ತೃತೀಯ ರಂಗಕ್ಕೆ ಚಾಲನೆ ನೀಡಿದರು. ಜಾತ್ಯಾತೀತ ಜನತಾದಳ, ಎಐಎಡಿಎಂಕೆ, ಬಹುಜನ ಸಮಾಜ ಪಾರ್ಟಿ, ತೆಲುಗುದೇಶಂ, ತೆಲಂಗಾಣ ರಾಷ್ಟ್ರೀಯ ಸಮಿತಿ, ಸಿಪಿಐ(ಎಂ) ಹಾಗೂ ಸಿಪಿಐ ನಾಯಕರು ಪಾಲ್ಗೊಂಡ ಈ ಸಮಾವೇಶವು ಅಂತಿಮವಾಗಿ ಚುನಾವಣೆಗಾಗಿ ಕಾಂಗ್ರೆಸ್-ಬಿಜೆಪಿಯನ್ನು ಸೋಲಿಸುವುದು ಮತ್ತು ಮೂರನೇ ಪರ್ಯಾಯವನ್ನು ಕಟ್ಟುವ ನಿರ್ಣಯವನ್ನು ಕೈಗೊಂಡಿತು.

ಬಿಜೆಪಿ-ಕಾಂಗ್ರೆಸ್ ಸೋಲಿಸುವ ಸಮಾನಭಾವ

ಈ ಸಮಾವೇಶದ ಮೂರು ದಿನಗಳ ಬಳಿಕ ಮಾರ್ಚ್ 15 ರಂದು ಒಂಭತ್ತು ಪ್ರಮುಖ ಪಕ್ಷಗಳು ನವದೆಹಲಿಯಲ್ಲಿ ಸಭೆ ನಡೆಸಿದವು. ಈ ಸಭೆಯಲ್ಲಿ ನಾಲ್ಕು ಎಡಪಕ್ಷಗಳಲ್ಲದೆ, ಟಿಡಿಪಿ, ಜೆಡಿ(ಎಸ್), ಎಐಎಡಿಎಂಕೆ, ಟಿಆರ್‌ಎಸ್ ಮತ್ತು ಬಿಜು ಜನತಾದಳ ಪಾಲ್ಗೊಂಡು ಮುಂಬರುವ ಚುನಾವಣೆಯಲ್ಲಿ ವಿವಿಧ ರಾಜ್ಯಗಳಲ್ಲಿ ತಮ್ಮೊಳಗೆ ಆಗಬೇಕಾದ ಸ್ಥಾನ ಹೊಂದಾಣಿಕೆ ವಿಚಾರವಾಗಿ ಚರ್ಚೆ ನಡೆಸಿ ತಿರ್ಮಾನಕ್ಕೆ ಬಂದವು. ನಂತರ ಬಿಡುಗಡೆ ಮಾಡಲಾದ ಜಂಟಿ ಹೇಳಿಕೆಯಲ್ಲಿ ಜನತೆಯ ಕಲ್ಯಾಣ ಮತ್ತು ಪ್ರಗತಿಗಾಗಿ ಚುನಾವಣೆಯಲ್ಲಿ ಕಾಂಗ್ರೆಸ್-ಬಿಜೆಪಿಯನ್ನು ಸೋಲಿಸಿ ಬದಲಿ ಸರ್ಕಾರ ರಚಿಸಲು ಒಟ್ಟಾರೆಯಾಗಿ ಕೆಲಸ ಮಾಡುವ ಘೋಷಣೆ ಮಾಡಿದವು. ಅಲ್ಲದೆ ಈ ಸಭೆಯು ಗಮನಹರಿಸ ಬೇಕಾದ ಹಲವು 'ನೀತಿ' ಪ್ರಶ್ನೆಗಳ ಬಗ್ಗೆ ಕೂಡ ಚರ್ಚೆ ನಡೆದಿದೆ. ಅದೇ ದಿನ ಬಿಎಸ್‌ಪಿ ಪಕ್ಷದ ಅಧ್ಯಕ್ಷೆ ಕುಮಾರಿ ಮಾಯಾವತಿಯವರು ಅವರ ಪಕ್ಷದ ಚುನಾವಣಾ ಮನವಿಯನ್ನು ಬಿಡುಗಡೆ ಮಾಡಿದರು. ಈ ಮನವಿಯಲ್ಲಿ ಕಾಂಗ್ರೆಸ್-ಬಿಜೆಪಿಯನ್ನು ಸೋಲಿಸಲು ಮನವಿ ಮಾಡಿದ್ದಲ್ಲದೆ, ಕಾಂಗ್ರೆಸ್-ಬಿಜೆಪಿಯೇತರ ಪರ್ಯಾಯ ಸರ್ಕಾರ ರಚನೆಗಾಗಿ ತಮ್ಮ ಪಕ್ಷವು ದೃಢವಾಗಿ ಕೆಲಸ ಮಾಡುವ ಭರವಸೆಯನ್ನು ಅವರು ವ್ಯಕ್ತಪಡಿಸಿದರು.

ಮಾರ್ಚ್ 2ನೇ ವಾರದಲ್ಲಿ ನಡೆದ ಈ ಎಲ್ಲಾ ನಾಟಕೀಯ ಬೆಳವಣಿಗೆಗಳು, ಭಾರತದ ರಾಜಕೀಯವು ದ್ವಿಪಕ್ಷೀಯ ವ್ಯವಸ್ಥೆಯೊಳಗೆ ನಿರ್ಬಂಧಿಸಿಕೊಂಡಿಲ್ಲ ಎನ್ನುವ ಸಿಪಿಐ(ಎಂ) ನಿಲುವನ್ನು ಸಮರ್ಥಿಸಿದೆ. ಅಷ್ಟು ಮಾತ್ರವಲ್ಲದೆ, ಭಾರತದ ಆಳುವ ವರ್ಗಗಳು ಭಾರತದ ರಾಜಕೀಯ ಕೇವಲ ದ್ವಿಪಕ್ಷೀಯ ವ್ಯವಸ್ಥೆಗೆ ಮಾತ್ರವೇ ಆಯ್ಕೆಗೆ ಅವಕಾಶ ನೀಡಿದೆ ಎನ್ನುವ ವಾದವನ್ನು ಪ್ರಾಯೋಗಿಕವಾಗಿ ಅಸಾಧ್ಯವಾಗಿಸಿದೆ. ಕಾಂಗ್ರೆಸ್-ಬಿಜೆಪಿ ಎನ್ನುವ ಎರಡು ಬಂಡವಾಳಶಾಹಿ ಪ್ರಮುಖ ಪಕ್ಷಗಳಿಗೂ ನಮ್ಮ ದೇಶದ ಹಲವಾರು ಕಡೆಗಳಲ್ಲಿ ಮೂಲ ಜನಸಮುದಾಯದ ಬೆಂಬಲ ಮತ್ತು ಅದರ ಮೇಲಿನ ನಿಯಂತ್ರಣ ಹೊಂದಿಲ್ಲವೆನ್ನುವುದು ಅತ್ಯಂತ ಮಹತ್ವದ ಅಂಶವಾಗಿದೆ. ಇದಕ್ಕೆ ನಿದರ್ಶನವೆಂದರೆ ನಮ್ಮ ದೇಶದ ಪ್ರಮುಖ ಎರಡು ರಾಜ್ಯಗಳಾದ ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಟ್ಟಾರೆಯಾಗಿ ಅಲ್ಲಿನ ಕನಿಷ್ಠ ಮೂರನೇ- ಒಂದರಷ್ಟು ಸ್ಥಾನಗಳನ್ನು ಗೆಲ್ಲುತ್ತವೆ ಎನ್ನುವಂತಿಲ್ಲ. ಹೀಗೆ ಒಂದಾದ ನಂತರ ಒಂದು ರಾಜ್ಯಗಳನ್ನು ನೋಡುತ್ತಾ ಹೋದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಪ್ರಾತಿನಿತ್ಯವೂ ಸಣ್ಣ ಪ್ರಮಾಣದ್ದೇ ಆಗಿದೆ ಎನ್ನುವುದು ಗೊತ್ತಾಗುತ್ತದೆ.

ಪಾರ್ಲಿಮೆಂಟ್‌ನಲ್ಲಿ ಬಹುಮತಗಳಿಸಲು ಈ ಅಸಮರ್ಥ ಸಂಖ್ಯೆಯಿಂದ ಅಸಾಧ್ಯವಾದ ಕಾರಣ ದಿಂದಾಗಿಯೇ ಅವರು ಇತರರತ್ತ ಮೈತ್ರಿಗಾಗಿ ನೋಡುತ್ತಿದ್ದಾರೆ ಮತ್ತು ಆ ಕಾರಣದಿಂದಾಗಿಯೆ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ ಮತ್ತು ಬಿಜೆಪಿ ನೇತೃತ್ವದ ಮೈತ್ರಿಕೂಟ ಈ ಎರಡು ವ್ಯವಸ್ಥೆಗಳು ಮಾತ್ರವೇ ಪರ್ಯಾಯವೆಂಬಂತೆ ಪ್ರತಿಬಿಂಬಿಸಲಾಗುತ್ತಿದೆ.

ಇದೆಂತಹ ಕಾಳಜಿ

ಕಾಂಗ್ರೆಸ್-ಬಿಜೆಪಿಯೇತರ ಮೈತ್ರಿಕೂಟದ ಈ ಬೆಳವಣಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಪಾಳೆಯದಲ್ಲಿ ನಿದ್ದೆಗೆಡಿಸಿವೆ. ಹಾಗಾಗಿಯೇ ಕಾಂಗ್ರೆಸ್ ಪಕ್ಷವು ಮೂರನೇ ರಂಗವೆನ್ನುವುದು ಭಾರತದ ರಾಜಕೀಯದಲ್ಲಿ ಅತಿ ದೊಡ್ಡ ಮರಿಚಿಕೆ ಎಂದರೆ, ಬಿಜೆಪಿಯು ತೃತೀಯ ರಂಗವೆಂಬುದು 'ನಾಟಕ' ತಂಡವೆಂದು ಬೊಬ್ಬೆ ಹಾಕಿದೆ. ಬಿಜೆಪಿಗೆ ತೃತೀಯ ರಂಗದ ಉದಯವು ಭಾರೀ ಚಿಂತೆಗೀಡು ಮಾಡಿದೆ. ಯಾಕೆಂದರೆ 1999 ಮತ್ತು 2004ರಲ್ಲಿ ಅದರೊಂದಿಗಿದ್ದ ಜಾತ್ಯಾತೀತ ಪ್ರಾದೇಶಿಕ ಪಕ್ಷಗಳು ಈಗ ಅವರೊಂದಿಗೆ ಸೇರಿಕೊಳ್ಳಲು ತಯಾರಿಲ್ಲದಿರುವುದು. ಅಂತಹ ಎಲ್ಲಾ ಪ್ರಾದೇಶಿಕ ಪಕ್ಷಗಳು, ಕಾಂಗ್ರೆಸ್-ಬಿಜೆಪಿಗೆ ವಿರೋಧಿಯಾದ ರಂಗದ ಜೊತೆ ತಮ್ಮನ್ನು ಗುರ್ತಿಸಿಕೊಳ್ಳಲು ಬಯಸುತ್ತೇವೆ.

ಅದಕ್ಕೆ ಇತ್ತೀಚಿನ ಉದಾಹರಣೆಗಳಿವೆ. ಒರಿಸ್ಸಾದ ಬಿಜೆಡಿಯಿಂದ ಬಿಜೆಪಿ ಮೈತ್ರಿಕೂಟಕ್ಕೆ ಬಿದ್ದ ಭಾರಿ ಪೆಟ್ಟು. ಇನ್ನೂ ಕಾಂಗ್ರೆಸ್ ಪಕ್ಷವು ತೃತೀಯ ರಂಗದ ಮೇಲೆ ದಾಳಿ ನಡೆಸಲು ಪಕ್ಷದ ಹಿರಿಯ ಮುಖಂಡ ಪ್ರಣಬ್ ಮುಖರ್ಜಿಯನ್ನು ಮುಂದೆ ಬಿಟ್ಟಿದೆ. ಅವರು 2004ರ ಚುನಾವಣೆಯ ನಂತರವೇ ಯುಪಿಎ ಅಸ್ತಿತ್ವಕ್ಕೆ ಬಂದಿತ್ತು ಎಂಬ ಸತ್ಯವನ್ನು ಮರೆ ಮಾಚುತ್ತಾ, ಈಗ ಅಸ್ತಿತ್ವಕ್ಕೆ ಬಂದಿರುವ ತೃತೀಯ ರಂಗಕ್ಕೆ ಯಾವುದೇ ಕಾರ್ಯಕ್ರಮ ಎತ್ತ ಕಣ್ಣೋಟವಿಲ್ಲವೆಂದು ಹೇಳಿದ್ದೆ ಹೇಳುತ್ತಿದ್ದಾರೆ. ವಿಚಿತ್ರವಾದ ಸಂಗತಿ ಎಂದರೆ ಸ್ವತಃ ಯುಪಿಎಯೇ ಯಾವೊಂದು ಸಮಾನ ಕಾರ್ಯಕ್ರಮ ಮತ್ತು ಪ್ರಣಾಳಿಕೆಯಿಲ್ಲದೆ ಈ ಚುನಾವಣೆಯನ್ನು ಎದುರಿಸಲು ಹೊರಟಿದೆ. ಕಾಂಗ್ರೆಸ್ ಎನ್‌ಸಿಪಿ, ಆರ್‌ಜಿಡಿ ಮತ್ತು ಡಿಎಂಕೆಗಳು ಅವುಗಳದೇ ಆದ ಪ್ರತ್ಯೇಕ ಪ್ರಣಾಳಿಕೆಗಳನ್ನು ಹೊಂದುತ್ತಿವೆ.ಹೀಗಿದ್ದೂ ಯಾಕಾಗಿ ಪ್ರಣಬ್ ಮುಖರ್ಜಿಯವರು ಮೂರನೇ ರಂಗದವರ ಸಮಾನ ಕಾರ್ಯಕ್ರಮದ ಬಗ್ಗೆ ಅಷ್ಟೇಕೆ ಕಾಳಜಿ ವಹಿಸಿದ್ದಾರೆ. ತನ್ನ ಅತ್ಯಂತ ಅತಿ ಆತ್ಮೀಯ ಸಮಾಜವಾದಿ ಪಕ್ಷದೊಂದಿಗೆ ಸಹಿ ಯಾವೊಂದು ಕಾರ್ಯಕ್ರಮ ಹೊಂದಲು ಸಾಧ್ಯವಾಗಿಲ್ಲವೇಕೆ? ಅವರ ಮತ್ತೊಂದು ಅತ್ಯದ್ಭುತ ವಾದವೆಂದರೆ ತೃತೀಯ ರಂಗದಲ್ಲಿರುವ ಪಕ್ಷಗಳು ಬಹುಮತ ಪಡೆಯುವಷ್ಟು ಸ್ಥಾನಗಳಿಗೂ ಸ್ಪರ್ಧಿಸುತ್ತಿಲ್ಲವೆಂದು ಎನ್ನುವುದು.


ತೃತೀಯ ಪರ್ಯಾಯದ ಸಮಾವೇಶ - ದಾಬಸ್‌ಪೇಟೆ

ಇದು ನಿಜಕ್ಕೂ ಅಸತ್ಯದಿಂದ ಕೂಡಿದೆ. ಸದ್ಯ ಆಗಿರುವ ಸ್ಥಾನ ಹೊಂದಾಣಿಕೆ ಮತ್ತು ಗಮನದಲ್ಲಿಟ್ಟು ಹೇಳುವುದಾದರೆ ಎಡಪಕ್ಷಗಳು ಮಾತ್ರವೇ ಪಾರ್ಲಿಮೆಂಟ್‌ನಲ್ಲಿ ಬಹುಮತಕ್ಕೆ ಬೇಕಾದ ಶೇ.50 ರಷ್ಟು ಅಂದರೆ 150 ಸ್ಥಾನಗಳಿಗೆ ಸ್ಪರ್ಧಿಸುತ್ತಿವೆ ಇನ್ನೂ ಬಿಎಸ್‌ಪಿ ಸ್ಪರ್ಧಿಸುತ್ತಿರುವ ಕ್ಷೇತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಒಟ್ಟಾರೆ ಕಾಂಗ್ರೆಸ್ ಸ್ಪರ್ಧಿಸುತ್ತಿರುವ ಕ್ಷೇತ್ರಗಳಿಗಿಂತ ತೃತೀಯ ರಂಗವು ಸ್ಪರ್ಧಿಸುತ್ತಿರುವ ಕ್ಷೇತ್ರಗಳೇ ಹೆಚ್ಚಾಗುತ್ತವೆ.

ಕಾಂಗ್ರೆಸ್ ಸಹಾಯ ಬಿಜೆಪಿಗೆ

ತೃತೀಯ ರಂಗ ರಚನೆಯಿಂದಾಗಿ ಜಾತ್ಯಾತೀತ ಮತಗಳು ವಿಭಜನೆಗೊಂಡು ಅದರಲ್ಲಿನ ಕೋಮುವಾದಿ ಶಕ್ತಿಗಳಿಗೆ ಸಹಾಯವಾಗುತ್ತದೆ ಎಂದು ಕಾಂಗ್ರೆಸ್ ವಕ್ತಾರರು ಆರೋಪಿಸಿದ್ದಾರೆ. ವಾಸ್ತವಿಕ ಸತ್ಯವೆಂದರೆ ಎಡಪಕ್ಷಗಳ ಜೊತೆಗೂಡಿ ಮೈತ್ರಿಕೂಟ ರಚಿಸಿಕೊಳ್ಳುತ್ತಿರುವ ಪ್ರಾದೇಶಿಕ ಜಾತ್ಯಾತೀತ ಪಕ್ಷಗಳಿಂದಾಗಿ ಬಿಜೆಪಿಯ ಚುನಾವಣಾ ಆಸೆಗೆ ಪೆಟ್ಟುಬಿದ್ದಿದೆ. ಬಿಜೆಪಿಯು ಆಂಧ್ರ, ತಮಿಳುನಾಡು ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಒಂದೇ ಒಂದು ಮೈತ್ರಿಪಕ್ಷವನ್ನು ಹೊಂದಲು ಸಾಧ್ಯವಾಗಿಲ್ಲ. ಈ ರೀತಿ ದ್ವಿಪಕ್ಷೀಯ ವ್ಯವಸ್ಥೆ ಮಾತ್ರವೇ ಪರ್ಯಾಯ ಎಂದು ಪ್ರಚಾರ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವು ಬಿಜೆಪಿಗೆ ಸಹಾಯ ಮಾಡುತ್ತಿದೆ.

ವಾಸ್ತವ ಸನ್ನಿವೇಶ

ಕಾಂಗ್ರೆಸ್, ಬಿಜೆಪಿ ಪಕ್ಷಗಳೆರಡು ತೃತೀಯ ರಂಗವನ್ನು ಅಸ್ಥಿರ ಮತ್ತು ನಂಬಿಕೆ ಅರ್ಹವಲ್ಲದ ಮೈತ್ರಿಕೂಟವೆಂದು ಕರೆದಿವೆ. ಆದರೆ ಸತ್ಯವೆಂದರೆ ಕಾಂಗ್ರೆಸ್, ಬಿಜೆಪಿ ಗಳೆರಡು ತಮ್ಮೊಂದಿಗೆ ದೀರ್ಘಕಾಲ ಮೈತ್ರಿ ಹೊಂದುವ ಯಾವ ಪಕ್ಷಗಳನ್ನು ಹೊಂದಿರಲಿಲ್ಲ ಎನ್ನುವುದು ಇತ್ತೀಚಿನ ವಿದ್ಯಮಾನಗಳಿಂದ ವ್ಯಕ್ತಗೊಂಡಿದೆ. ಕಾಂಗ್ರೆಸ್ ಪಕ್ಷವೇ ತನ್ನ ಜನವರಿ ತಿಂಗಳ ಕೇಂದ್ರ ಕಾರ್ಯಕಾರಿ ಸಭೇ ನಂತರ, ರಾಷ್ಟ್ರಮಟ್ಟದಲ್ಲಿ ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಹೊಂದಾಣಿಕೆ ಏನಿದ್ದರೂ ಆಯಾ ಪ್ರದೇಶವಾರು ಎಂದು ಘೋಷಿಸಿಕೊಂಡಿದೆ. ಇದರಿಂದಾಗಿಯೇ ಯುಪಿಎ ತಳಹದಿ ಎಲ್ಲಿದೆ ಎನ್ನುವುದು ಗೊತ್ತಾಗುತ್ತದೆ. ಇದು ಯುಪಿಎ ಮೈತ್ರಿಕೂಟ ಪಕ್ಷಗಳು ಪ್ರಾದೇಶಿಕವಾಗಿ ಇತರೆ ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆಗೂ ಮುಕ್ತ ಅವಕಾಶ ಕಲ್ಪಿಸಿದೆ. ಅಲ್ಲದೆ ಯುಪಿಎ ಮೈತ್ರಿಕೂಟದೊಂದಿಗಿರುವ ಕೆಲವು ಪಕ್ಷಗಳು ಚುನಾವಣಾ ನಂತರದ ಸ್ಥಿತಿಯನ್ನಾಧರಿಸಿ ತಮ್ಮ ಮೈತ್ರಿಯನ್ನು ಬದಲಾಯಿಸುವ ಇಂಗಿತವನ್ನು ನೀಡಿವೆ. ಎನ್‌ಸಿಪಿ ಅಧ್ಯಕ್ಷ ಶರದ್‌ಪವಾರ್ ಈಗಾಗಲೇ ಕಾಂಗ್ರೆಸ್ ಬಿಜೆಪಿ ಬಗ್ಗೆ ಅಸಂತೃಪ್ತಿ ವ್ಯಕ್ತಪಡಿಸಿ 'ತೃತೀಯ ರಂಗವೂ ಅಧಿಕಾರಕ್ಕೆ ಬರಲಾಗುವುದಿಲ್ಲ ಎಂದು ಹೇಳಲಾಗದು' ಎಂದಿದ್ದಾರೆ.

ಇನ್ನೂ ಮುಂದುವರೆದು ಅವರು ನಮ್ಮ ಎನ್‌ಸಿಪಿಯು ಯಾರ ಜೀತದಾಳು ಅಲ್ಲ, ಎಂದು ಹೇಳಿದ್ದಾರೆ. ಇನ್ನು ಎನ್‌ಡಿಎಯು ತನ್ನ ದೀರ್ಘಕಾಲದ ಮಿತ್ರ ಬಿಜೆಡಿಯನ್ನು ಕಳೆದುಕೊಂಡು ಭಾರೀ ಹೊಡೆತ ತಿಂದಿದೆ. ಇನ್ನೂ ಅಸ್ಸಾಂ ಗಣ ಪರಿಷತ್

ಪುಟ 10ಕ್ಕೆ



ಕಾಂಗ್ರೆಸ್ ತಾನೇ ಸ್ವಂತ ಬಲದ ಮೇಲೆ ಬಹುಮತ ಗಳಿಸಿ ಸರ್ಕಾರ ರಚಿಸುವ ಲೆಕ್ಕಾಚಾರ ಮಾಡುತ್ತಾ ಭ್ರಮೆಯಲ್ಲಿ ತೇಲಾಡುತ್ತಿದೆ. ಹೀಗಾಗಿಯೇ ಎಡಪಕ್ಷಗಳ ಮೇಲೆ ಇಲ್ಲದ ಆರೋಪ ಮಾಡುತ್ತಾ ಮೂರನೇ ರಂಗದ ಕುರಿತು ಅಪಪ್ರಚಾರ ನಡೆಸುತ್ತಿದೆ. ಆದರೆ ನೆಲದ ವಾಸ್ತವ ಏನಿದೆ?

ಕಾಂಗ್ರೆಸ್ ಭ್ರಮೆಗಳು ಅರ್ಥವಿಲ್ಲದ ಆರೋಪಗಳು

ನಿತ್ಯಾನಂದ ಸ್ವಾಮಿ

ಯು.ಪಿ.ಎ. ಎಂಬ ಕೂಟ ಈಗ ಒಡೆದ ಮನೆಯಾಗಿದೆ. ಸದಸ್ಯ ಪಕ್ಷಗಳು ಒಂದೊಂದಾಗಿ ಕಾಲು ಕಿತ್ತಿವೆ. ಕಾಂಗ್ರೆಸ್ ಒಂದು ಮುಳುಗುತ್ತಿರುವ ಹಡಗಿನಂತೆ ಭಾಸವಾಗುತ್ತಿದೆ. ಅದರ ಮಿತ್ರಪಕ್ಷಗಳು ಯಾರೂ ಅದರ ಜೊತೆಯಲ್ಲಿ ಪ್ರಯಾಣ ಮಾಡಲು ಸಿದ್ಧವಿಲ್ಲ. ಉತ್ತರ ಪ್ರದೇಶ ಮತ್ತು ಬಿಹಾರ ಎರಡು ಅತಿ ದೊಡ್ಡ ರಾಜ್ಯಗಳು. ಈ ಎರಡು ರಾಜ್ಯಗಳಿಂದ 120 ಸಂಸತ್ ಸದಸ್ಯರು ಚುನಾಯಿತರಾಗಿ ಬರುತ್ತಾರೆ. ಉತ್ತರ ಪ್ರದೇಶದಲ್ಲಿ ಪ್ರಭಾವ ಹೊಂದಿರುವ ಸಮಾಜವಾದಿ ಪಕ್ಷ ಮತ್ತು ಬಿಹಾರ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಮತ್ತು ಲೋಕ ಜನಶಕ್ತಿ ಪಕ್ಷ (ಎಲ್‌ಜೆಪಿ) ಕಾಂಗ್ರೆಸ್‌ನೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗದೆ ಯು.ಪಿ.ಎ. ರಂಗವನ್ನು ತೊರೆದಿವೆ. ಆದರೂ ಸಹ ಕಾಂಗ್ರೆಸ್ ಭ್ರಮಾಲೋಕದಲ್ಲಿಯೇ ಇದ್ದು, ನೆಲದ ವಾಸ್ತವವನ್ನು ಅರಿಯಲು ನಿರಾಕರಿಸುತ್ತಿದೆ. ಅದು ತನ್ನ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ, ತಾನು ಮತ್ತೆ ಅಧಿಕಾರಕ್ಕೆ ಬರುವುದಾಗಿಯೂ, ಡಾ|| ಮನಮೋಹನ್‌ಸಿಂಗ್ ಅವರೇ ಮುಂದಿನ ಪ್ರಧಾನಿಯಾಗುವುದಾಗಿಯೂ ಘೋಷಿಸಿಕೊಂಡಿದೆ. ಎಲ್ಲ ರಾಜಕೀಯ ಪಕ್ಷಗಳಿಗೆ ಇಂತಹ ಭ್ರಮೆಗಳಲ್ಲಿ ವಿಹರಿಸುವ ಹಕ್ಕಿದೆ. ಆದರೆ ಒಂದು ಪ್ರಜಾಪ್ರಭುತ್ವದಲ್ಲಿ ಸಾರ್ವಭೌಮ ಅಧಿಕಾರ ಇರುವುದು ಜನರ ಕೈಯಲ್ಲಿ. ಚುನಾವಣೆಗಳ ಫಲಿತಾಂಶವನ್ನು ಜನರೇ ನಿರ್ಣಯಿಸುತ್ತಾರೆ.

ಕಾಂಗ್ರೆಸ್ ಆರೋಪಗಳು

ತೃತೀಯ ರಂಗವನ್ನು ಹುಟ್ಟು ಹಾಕುವುದರಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುವ ಎಡಪಕ್ಷಗಳು ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದವು. ಈ ಅವಧಿಯಲ್ಲಿ ಎಡಪಕ್ಷಗಳು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳದೇ ಅಧಿಕಾರವನ್ನು ಚಲಾಯಿಸಲು ಪ್ರಯತ್ನಿಸಿದವು ಎಂದು ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಆರೋಪಿಸಿದೆ. ಇದೊಂದು ಹುರುಳಿಲ್ಲದ ಆರೋಪ.

ಎಡಪಕ್ಷಗಳ ಪ್ರತಿನಿಧಿಗಳು, ಮುಖ್ಯವಾಗಿ ಪಶ್ಚಿಮಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಡಿ ಗೆದ್ದು ಬಂದವರಾಗಿರುತ್ತಾರೆ. ಕಳೆದ ಲೋಕಸಭೆಯಲ್ಲಿದ್ದ ಎಡಪಕ್ಷಗಳ ಒಟ್ಟು 61 ಸದಸ್ಯರಲ್ಲಿ 54 ಜನ ಸಂಸತ್ ಸದಸ್ಯರು ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಸೋಲಿಸಿ ಬಂದವರಾಗಿದ್ದರು. ಆದಾಗ್ಯೂ, ಎಡಪಕ್ಷಗಳು ಅತ್ಯಂತ ಜವಾಬ್ದಾರಿಯಿಂದ ಹಾಗೂ ಪ್ರಬುದ್ಧತೆಯಿಂದ ವರ್ತಿಸಿದವು. ಕೋಮುವಾದಿ ಶಕ್ತಿಗಳಿಂದ ದೇಶಕ್ಕೆ ಎದುರಾದ ಗಂಡಾಂತರವನ್ನು ಹಿಮ್ಮೆಟ್ಟಿಸಿ ದೇಶಕ್ಕೊಂದು ಸೆಕ್ಯುಲರ್ ಸರ್ಕಾರವನ್ನು ಒದಗಿಸುವ ಏಕೈಕ ಉದ್ದೇಶದಿಂದ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಹೊರಗಿನಿಂದ ಬೆಂಬಲಕೊಟ್ಟವು. ಇದು ಎಡಪಕ್ಷಗಳು ನಿರ್ವಹಿಸಿದ ಜವಾಬ್ದಾರಿ. ಈ ಜವಾಬ್ದಾರಿ ನಿರ್ವಹಣೆಗೆ ಬದಲಿಯಾಗಿ ಎಡಪಕ್ಷಗಳು ಯಾವುದೇ ಅಧಿಕಾರ ಅಥವಾ ಅಧಿಕಾರದ ಲಾಭ ಪಡೆಯಲು ಬಯಸಲಿಲ್ಲ. ಇಂತಹ ಜವಾಬ್ದಾರಿ ನಿರ್ವಹಣೆ ಇಂದಿನ ರಾಜಕೀಯದಲ್ಲಿ ಕಾಣಸಿಗುವುದು ಬಹಳ ಅಪರೂಪ. ತಾತ್ವಿಕ ಬದ್ಧತೆಯುಳ್ಳ ಎಡಪಕ್ಷಗಳಿಗೆ ಮಾತ್ರ ಇದು ಸಾಧ್ಯ. ಎಡಪಕ್ಷಗಳು



ಜವಾಬ್ದಾರಿಯನ್ನು ವಹಿಸಿಕೊಳ್ಳದೆ ಅಧಿಕಾರ ಚಲಾಯಿಸಲು ಪ್ರಯತ್ನಿಸಿದವು ಎಂಬ ಆರೋಪದಲ್ಲಿ ಹುರುಳಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಎಡಪಕ್ಷಗಳು ಅಧಿಕಾರವನ್ನು ವಹಿಸಿಕೊಳ್ಳದೆ ಜವಾಬ್ದಾರಿಯನ್ನು ನಿರ್ವಹಿಸಿವೆ.

ನಾಗರೀಕ ಪರಮಾಣು ಒಪ್ಪಂದವನ್ನು ಸ ದೇಶದ ಹಿತಗಳಿಗೆ ಅನುಗುಣವಾ ಅಂತಿಮಗೊಳಿಸಲಾಗಿದ್ದರೂ ಒಪ್ಪಂದದ ವಿ ಎಡಪಕ್ಷಗಳು ಯುಪಿಎ ಸರ್ಕಾರಕ್ಕೆ ನೀ ಬೆಂಬಲವನ್ನು ವಾಪಸ್ ಪಡೆದವು ಎಂದು ಕಾಂಗ್ರೆ ಆರೋಪಿಸಿದೆ. ಈ ಒಪ್ಪಂದವು ದೇಶ ಸಾರ್ವಭೌಮತೆಗೆ ಮತ್ತು ಸ್ವತಂತ್ರ ವಿದೇಶಾಂಗ ನೀ ಬಾಧಕವಾದ ಸಾಮ್ರಾಜ್ಯಶಾಹಿ ಅಮೇರಿಕಾದೊಂ ವ್ಯೂಹಾತ್ಮಕ ಸಂಬಂಧವನ್ನು ಬೆಸೆಯುವ ಯೋಜನೆ ಭಾಗವಾಗಿತ್ತು ಎಂಬುದನ್ನು ಮಾತ್ರ ಕಾಂಗ್ರೆ ಮರೆಮಾಚುತ್ತದೆ. ಈ ಒಪ್ಪಂದದ ಮೂ ಭಾರತವು ಅಮೇರಿಕಾದ ರಣನೀತಿಯ ಬೆಂಬಲಿಸುವಂತಾಗಿದೆ. ಅಂತರಾಷ್ಟ್ರೀ ವೇದಿಕೆಗಳಲ್ಲಿ ಭಾರತವು ಇರಾನ್ ವಿರುದ್ಧ ವ ಚಲಾಯಿಸಿದ್ದು ಮತ್ತು ಆಕ್ರಮಣಕಾ ಇಸ್ರೇಲ್‌ದೊಂದಿಗೆ ಭಾರತದ ನಿಕಟ ಸಂಪ ಸಹಕಾರಗಳು ಅಮೇರಿ ಸಾಮ್ರಾಜ್ಯಶಾಹಿಯೊಂದಿಗೆ ಭಾರತ ವ್ಯೂಹಾತ್ಮಕ ಮೈತ್ರಿಯ ಪರಿಣಾಮಗಳಾಗಿ

ಎಡಪಕ್ಷಗಳು ಯುಪಿಎ ಸರ್ಕಾರಕ್ಕೆ ಅದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದ ತಮ್ಮ ಬೆಂಬಲ ನೀಡಿದ್ದವು. ಈ ಅವಧಿಯ ಎಡಪಕ್ಷಗಳು ಈ ಸಾಮಾನ್ಯ ಕನಿಷ್ಠ ಅದ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಉಲ್ಲಂಘ ಮಾಡದಂತೆ ಒತ್ತಡ ಹೇರುತ್ತಾ ಬಂದಿ ಭಾರತ, ಅಮೇರಿಕ ಒಪ್ಪಂದಕ್ಕೆ ಸಹಿ ಹಾಕು ಮೂಲಕ ಮತ್ತು ಭಾರತೀಯರೆಲ್ಲರೂ ಜಾ ಬುಷ್‌ರನ್ನು ಪ್ರೀತಿಸುತ್ತಾರೆಂದು ಘೋಷಿಸು ಮೂಲಕ ಮನಮೋಹನಸಿಂಗ್ ಸರ್ಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಉಲ್ಲಂಘಿಸಿ

ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೀ ಹೇಳಲಾಗಿತ್ತು. "ವಿಶ್ವದಲ್ಲಿ ಬಹುಧ್ರುವೀಕರಣವ ಪ್ರೋತ್ಸಾಹಿಸುವ ಮತ್ತು ಏಕಧ್ರುವೀಕರಣದ ಎ ಪ್ರಯತ್ನಗಳನ್ನು ವಿರೋಧಿಸುವ ಸ್ವತಂತ್ರ ವಿದೇಶಾಂ ನೀತಿಯನ್ನು ಅನುಸರಿಸುವುದು" ಆದರ ಸಾಮ್ರಾಜ್ಯಶಾಹಿ ಅಮೇರಿಕಾವು ಇರಾಕ್ ಮೇ ಆಕ್ರಮಣ ಮಾಡಿ ತನ್ನ ದಮನಕಾ ಏಕಧ್ರುವೀಕರಣವನ್ನು ಜಾರಿಗೊಳಿಸುತ್ತಿರುವಾಗಲ ಯುಪಿಎ ಸರ್ಕಾರವು ಅಮೇರಿಕಾದೊಂದಿ ವ್ಯೂಹಾತ್ಮಕ ಮೈತ್ರಿಯ ಒಪ್ಪಂದಕ್ಕೆ ಸಹಿ ಮಾಡಿತು ಭಾರತದ ವಿದೇಶಾಂಗ ನೀತಿ ಅಮೇರಿಕಾ ಬಾಲಂಗೋಚಿಯಾಗುವಂತಾಯಿತು.

ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ ತಯಾರಿಸುತ್ತಿರುವಾಗಲೇ, ಅಮೇರಿಕಾ ದೊಂದಿಗ ವ್ಯೂಹಾತ್ಮಕ ಸಂಬಂಧದ ಕುರಿತಾದ ಅದರಲ್ಲಿ ಉಲ್ಲೇಖವನ್ನು ಎಡಪಕ್ಷಗಳ ಬಲವ ವಿರೋಧಿಸಿದ್ದರು. ಅದರ ಬದಲಾ "ಅಮೇರಿಕಾದೊಂದಿಗೆ ಸಂಬಂಧಗಳನ

ಒತ್ತಾಯ, ಒತ್ತಡದಿಂದಾದ 'ಸಾಧನೆ'ಗಳು

ಯುಪಿಎ ಸರ್ಕಾರದ ಸಾಧನೆಗಳೊಂದು ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಪಟ್ಟಿ ಮಾಡಿರುವ ಅಂಶಗಳು ಎಡಪಕ್ಷಗಳ ನಿರಂತರ ಒತ್ತಾಯ ಮತ್ತು ಒತ್ತಡಗಳ ಪ್ರತಿಫಲವಾಗಿವೆ.



ಎಡಪಕ್ಷಗಳು ಸಮನ್ವಯ ಸಮಿತಿಯಿಂದ ಹೊರಬರಲು ನಿರ್ಧರಿಸಿದಾಗಲೇ ಯುಪಿಎ ಸರ್ಕಾರ ಸಾರ್ವಜನಿಕ ರಂಗದ ಖಾಸಗೀಕರಣದ ತನ್ನ ಯೋಜನೆಯನ್ನು ಅದು ಕೈಬಿಟ್ಟಿದ್ದು. ಈ ಅವಧಿಯಲ್ಲಿ ಸಾರ್ವಜನಿಕ ರಂಗವನ್ನು ಬಲಹೀನಗೊಳಿಸುವ ಯಾವುದೇ ಕ್ರಮಗಳಿಗೆ ಎಡಪಕ್ಷಗಳು ಅಸ್ಪದಕೊಡಲಿಲ್ಲ. ಬದಲಾಗಿ, ಅನೇಕ ರೋಗಗ್ರಸ್ತ ಸಾರ್ವಜನಿಕ ರಂಗದ ಘಟಕಗಳನ್ನು ಪುನಃಶ್ಚೇತನಗೊಳಿಸಲು ಸಾಧ್ಯವಾಯಿತು. ಇದಲ್ಲದೇ, ಯುಪಿಎ ಸರ್ಕಾರ ತನ್ನ ವಿನಾಶಕಾರಿ ಎಡಪಕ್ಷಗಳು ಉದಾರೀಕರಣ ಸುಧಾರಣೆಗಳನ್ನು ಮುಂದುವರೆಸದಂತೆ ಎಡಪಕ್ಷಗಳು ತಡೆಯೊಡ್ಡಿದ್ದವು. ಇದರಿಂದಾಗಿಯೇ ಪ್ರಸಕ್ತ ವಿಶ್ವ ಆರ್ಥಿಕ ಹಿಂಜರಿತದ ವಿನಾಶಕಾರಿ ಪರಿಣಾಮಗಳನ್ನು ಸ್ವಲ್ಪಮಟ್ಟಿಗಾದರೂ ತಡೆಹಿಡಿಯಲು ಸಾಧ್ಯವಾಯಿತು.

ಬುಡಕಟ್ಟು ಜನರು ಮತ್ತು ಇತರ ಅರಣ್ಯವಾಸಿಗಳ ಅರಣ್ಯ ಹಕ್ಕು ಮಸೂದೆ ಕಾಯ್ದೆಯಾಗಿ ಬಂದಿದ್ದು ಎಡಪಕ್ಷಗಳ ಸತತ ಹೋರಾಟದಿಂದ...

...ಜಾರಿಗೊಳಿಸುವ ಸಂದರ್ಭದಲ್ಲಿ, ಪ್ರಾದೇಶಿಕ ಹಾಗೂ ವಿಶ್ವದ ಯಾವುದೇ ಪ್ರಶ್ನೆಯಲ್ಲಿ ಭಾರತದ ಸ್ವತಂತ್ರ ವಿದೇಶಾಂಗ ನೀತಿಯ ನಿಲುವುಗಳನ್ನೇ ಅನುಸರಿಸಲಾಗುವುದು"ಎಂದು ಬರೆಯಲಾಗಿತ್ತು. ಈ ಒಪ್ಪಂದದ ಆಧಾರದಲ್ಲೇ ಎಡಪಕ್ಷಗಳು ಯುಪಿಎ ಸರ್ಕಾರಕ್ಕೆ ಬೆಂಬಲ ನೀಡಿದ್ದವು. ಆದರೆ, ಅಧಿಕಾರಕ್ಕೆ ಬಂದ ಬಳಿಕ ಯುಪಿಎ ಸಕಾರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನೇ ಉಲ್ಲಂಘಿಸಿ ಸಾಮ್ರಾಜ್ಯಶಾಹಿ ಅಮೇರಿಕದೊಂದಿಗೆ ವ್ಯೂಹಾತ್ಮಕ ಸಂಬಂಧವನ್ನು ಬೆಳೆಸುವ ತನ್ನ ಈ ಮೊದಲ ಅಪೇಕ್ಷೆಯನ್ನೇ ಜಾರಿಗೊಳಿಸಲು ಮುಂದಾಯಿತು. ಹೀಗೆ ಯುಪಿಎ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ದ್ರೋಹ ಬಗೆದ ಕಾರಣಕ್ಕಾಗಿ ಎಡಪಕ್ಷಗಳು ತಮ್ಮ ಬೆಂಬಲವನ್ನು ವಾಪಸ್ ಪಡೆಯುವಂತಾಯಿತು. ಇದು ನಿಜ ಸಂಗತಿ.

ಅಲ್ಲಿ ಬಿಜೆಪಿ ಗೆ ಜಾಗವೆಲ್ಲಿ?

ಎಡಪಕ್ಷಗಳು ಮತ್ತು ಅವುಗಳ ಪರ್ಯಾಯ ಕೂಟವೇ ಬಿಜೆಪಿ ಬೆಳವಣಿಗೆಗೆ ಕಾರಣವಾಗಿದೆ ಎಂಬುದು ಕಾಂಗ್ರೆಸಿನ ಇನ್ನೊಂದು ಆರೋಪ. ಇದೊಂದು ಆಧಾರರಹಿತ, ಕುಟಿಲ ಆರೋಪವಾಗಿದೆ. ಎಡಶಕ್ತಿಗಳು ನಿರ್ಣಾಯಕವಾಗಿರುವ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಬಿಜೆಪಿಗೆ ಒಂದೇ ಒಂದು ಪಾರ್ಲಿಮೆಂಟ್ ಸ್ಥಾನವಿಲ್ಲ, ಒಂದೇ ಒಂದು ವಿಧಾನಸಭಾ ಸ್ಥಾನವನ್ನು ಗೆಲ್ಲಲು ಸಾಧ್ಯವಾಗಿಲ್ಲ. ತದ್ವಿರುದ್ಧವಾಗಿ, ಕಾಂಗ್ರೆಸ್ ಮೃದು ಹಿಂದುತ್ವ ಧೋರಣೆಯನ್ನು ಅನುಸರಿಸುವ ಮೂಲಕ ಇಡೀ ಉತ್ತರ ಭಾರತದಲ್ಲಿ ಬಿಜೆಪಿಗೆ ತನ್ನ ನೆಲವನ್ನು ಬಿಟ್ಟುಕೊಡುತ್ತಾ ಬಂದಿದೆ. ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಕತ್ತಿ ಮಸಿಯಲು ಹಿಂದುತ್ವ ಸಂಘಟನೆಗಳು ನಡೆಸುವ ತ್ರಿಶೂಲದೀಕ್ಷೆ ಇತ್ಯಾದಿ... ...ದೂ ಸಮಾಜೋತ್ಸವಗಳಲ್ಲಿ ಕಾಂಗ್ರೆಸ್ ಮುಖಂಡರು ಯಾವುದೇ ಸಂಕೋಚವಿಲ್ಲದೆ ಭಾಗವಹಿಸುತ್ತಿದ್ದಾರೆ. ಯುಪಿಎ ಸರ್ಕಾರದ ಅಧಿಕಾರಾವಧಿಯಲ್ಲೇ ಕರ್ನಾಟಕದಲ್ಲಿ, ಉತ್ತರಾಂಚಲ್, ಪಂಜಾಬ್ ಮತ್ತು ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ತನ್ನ ಸರ್ಕಾರಗಳನ್ನು ಕಳೆದುಕೊಂಡು ಬಿಜೆಪಿ ಅಧಿಕಾರಕ್ಕೆ ಬರುವಂತಾಗಿದೆ. ಹಾಗಾದರೆ ಬಿಜೆಪಿ ಬೆಳವಣಿಗೆಗೆ ನೀರೆರೆಯುತ್ತಿರುವುದು ಯಾರು?



ಪರ್ಯಾಯ ರಂಗದ ಸರ್ಕಾರಗಳು ಅಸ್ಥಿರವೇ ?

ಪರ್ಯಾಯ ರಂಗದ ಸರ್ಕಾರ ಸಹಜವಾಗಿಯೇ ಅಸ್ಥಿರವಾಗಿದೆ ಎಂಬುದು ಕಾಂಗ್ರೆಸ್ಸಿನ ಮತ್ತೊಂದು ಆರೋಪ. ಹೌದು ಇದುವರೆಗಿನ ಅನುಭವಗಳ ಪ್ರಕಾರ ಪರ್ಯಾಯ ಸರ್ಕಾರಗಳು ತಮ್ಮ ಅವಧಿಯನ್ನು ಪೂರ್ಣಗೊಳಿಸಲು ಶಕ್ತವಾಗಿಲ್ಲ. ಇದಕ್ಕೆ ಮುಖ್ಯವಾಗಿ ಹೊರಗಿನಿಂದ ಬೆಂಬಲಿಸುತ್ತಿದ್ದ ಪ್ರಮುಖ ಪಕ್ಷಗಳು ಉಂಟು ಮಾಡಿದ ಅಸ್ಥಿರತೆಯೇ ಕಾರಣವಾಗಿದೆ. 1989ರಲ್ಲಿ ವಿಪಿ.ಸಿಂಗ್ ಸರ್ಕಾರಕ್ಕೆ ಎಡಪಕ್ಷಗಳ ಹಾಗೂ ಬಿಜೆಪಿಯ ಬೆಂಬಲ ಅಗತ್ಯವಾಗಿತ್ತು. ಬಿಜೆಪಿಗೆ ಸರ್ಕಾರದಲ್ಲಿ ಭಾಗಿಯಾಗುವ ಆಸೆಯಿತ್ತು. ಆದರೆ ಎಡ ಪಕ್ಷಗಳು ಅದನ್ನು ಬಲವಾಗಿ ವಿರೋಧಿಸಿದ ಕಾರಣದಿಂದ ಬಿಜೆಪಿಗೆ ಸರ್ಕಾರದಲ್ಲಿ ಸೇರ್ಪಡೆ ಆಗಲು ಸಾಧ್ಯವಾಗಲಿಲ್ಲ. ಅಡ್ವಾಣಿಯವರ ಪ್ರಚೋದನಕಾರಿ ರಥಯಾತ್ರೆಯ ವಿವಾದದ ಸಂದರ್ಭದಲ್ಲಿ ಬಿಜೆಪಿ ವಿ.ಪಿ.ಸಿಂಗ್ ಸರ್ಕಾರಕ್ಕೆ ನೀಡಿದ ಬೆಂಬಲವನ್ನು ವಾಪಸ್ ಪಡೆದು ಸರ್ಕಾರವನ್ನು ಕೆಡವಿತು. ಆಗ ಕಾಂಗ್ರೆಸ್ ಚಂದ್ರಶೇಖರ್ ಅವರ ಸರ್ಕಾರವನ್ನು ಬೆಂಬಲಿಸಿತು. ಆದರೆ, ರಾಜೀವ್‌ಗಾಂಧಿಯವರ ಮೇಲೆ ಇಬ್ಬರು ಪೋಲೀಸರು ಬೇಹುಗಾರಿಕೆ ನಡೆಸುತ್ತಿದ್ದಾರೆ ಎಂಬ ಕ್ಷುಲ್ಲಕ ನೆಪವೊಡ್ಡಿ ಸರ್ಕಾರಕ್ಕೆ ನೀಡಿದ ಬೆಂಬಲವನ್ನು ಕಾಂಗ್ರೆಸ್ ವಾಪಸ್ ಪಡೆಯಿತು. 1996ರಲ್ಲಿ ಕಾಂಗ್ರೆಸ್ ಬಹುಮತ ಪಡೆಯಲು ವಿಫಲವಾದಾಗ, ಸಂಯುಕ್ತರಂಗ ಸರ್ಕಾರಕ್ಕೆ ಅದು ಬಾಹ್ಯಬೆಂಬಲ ಘೋಷಿಸಿ ಅವಧಿ ಮುಗಿಯುವವರೆಗೂ ಬೆಂಬಲವನ್ನು ಮುಂದುವರೆಸುವ ಮಾತುಕೊಟ್ಟಿತ್ತು. ಆಗ ಬಿಜೆಪಿ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದನ್ನು ಗಮನಿಸಿ, ಬಿಜೆಪಿಯನ್ನು ಹೊರಗಿಟ್ಟು, ದೇಶಕ್ಕೆ ಒಂದು ಸೆಕ್ಯುಲರ್ ಸರ್ಕಾರವನ್ನು ಒದಗಿಸುವ ಉದ್ದೇಶದಿಂದ ಈ ಸಂಯುಕ್ತ ರಂಗ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಎಡಪಕ್ಷಗಳು ಬಹಳ ಪರಿಶ್ರಮಪಟ್ಟಿದ್ದವು. ವಿಶ್ವಾಸಮತ ಯಾಚನೆಯಲ್ಲಿ 13 ದಿನಗಳ



ವ್ಯಾಪಕ ಕೋಮುಗಲಭೆ ಸೃಷ್ಟಿಸಿ ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ ಸರ್ಕಾರವನ್ನು ಕೆಡವಿ ಬಿಜೆಪಿಗೆ ಪ್ರೇರಣೆಯಾದ ರಥಯಾತ್ರೆ

ವಾಜಪೇಯಿ ಸರ್ಕಾರ ಉರುಳಿದಾಗ ಸಂಯುಕ್ತರಂಗ ಸರ್ಕಾರ ಅಧಿಕಾರಕ್ಕೆ ಬಂದಿದ್ದನ್ನು ಇಲ್ಲಿ ಸ್ಮರಿಸಬಹುದು. ಕಾಂಗ್ರೆಸ್ ಪಕ್ಷವೇ ಸಂಯುಕ್ತರಂಗ ಸರ್ಕಾರವನ್ನು ದುರ್ಬಲಗೊಳಿಸಲು ಆರಂಭಿಸಿತು. ಅದರ ಬಾಹ್ಯ ಬೆಂಬಲವನ್ನು ಬಳಸಿಕೊಂಡು ಪ್ರಧಾನಮಂತ್ರಿಯನ್ನು ಬದಲಾಯಿಸುವಂತೆ ಕಾಂಗ್ರೆಸ್ ಒತ್ತಡ ಹೇರಿತು. ನಂತರ ರಾಜೀವ್‌ಗಾಂಧಿ ಹತ್ಯೆಯಲ್ಲಿ ಡಿಎಂಕೆ ಪಾತ್ರವಿದೆ ಎಂದು ಆರೋಪಿಸಿ, ತನ್ನ ಬೆಂಬಲವನ್ನು ವಾಪಸ್ ತೆಗೆದುಕೊಂಡಾಗ ಸಂಯುಕ್ತ ರಂಗ ಸರ್ಕಾರ ಬಿದ್ದು ಹೋಯಿತು. ಆದರೆ ಈಗ ಅದೇ ಡಿಎಂಕೆ ಪಕ್ಷವನ್ನು ಯುಪಿಎ ಪಾಲುದಾರ ಪಕ್ಷವಾಗಿ ಸೇರಿಸಿಕೊಂಡು ಕಾಂಗ್ರೆಸ್ ತನ್ನ ನೇತೃತ್ವದ ಯುಪಿಎ ಸರ್ಕಾರದ 5 ವರ್ಷದ ಅವಧಿಯನ್ನು ಪೂರ್ಣಗೊಳಿಸಿದ್ದು ವಿಚಿತ್ರವಾಗಿದೆ. ಹೀಗೆ ಕಾಂಗ್ರೆಸ್ ದ್ರೋಹ ಮಾಡದೆ ಇದ್ದಿದ್ದರೆ, ಬಿಜೆಪಿಗೆ ಎನ್.ಡಿ.ಎ.ಕೂಟವನ್ನು ರಚನೆ ಮಾಡಲೂ ಆಗುತ್ತಿರಲಿಲ್ಲ. 1998ರಲ್ಲಿ ಸರ್ಕಾರ ರಚಿಸಲೂ ಸಾಧ್ಯವಾಗುತ್ತಿರಲಿಲ್ಲ. ಕಾಂಗ್ರೆಸ್ ದೇಶದ ಜನತೆಗೆ ನೀಡಿದ ಭರವಸೆಯನ್ನು ಕಾಪಾಡಿದ್ದರೆ, ಸಂಯುಕ್ತ ರಂಗ ಸರ್ಕಾರವು 2001ರವರೆಗೂ ಅಧಿಕಾರದಲ್ಲಿ ಇರುತ್ತಿತ್ತು. ಸಂಯುಕ್ತ ರಂಗದ ಸರ್ಕಾರವನ್ನು ಕೆಳಗಿಳಿಸುವಲ್ಲಿ, ಹಿಂದೆ ವಿ.ಪಿ.ಸಿಂಗ್ ಸರ್ಕಾರವನ್ನು ಕೆಳಗಿಸುವಾಗ ಮಾಡಿದಂತೆ ಕಾಂಗ್ರೆಸ್ ಪಕ್ಷವು ಬಿಜೆಪಿ ಜೊತೆಗೂಡಿ ಮತ ಹಾಕಿತು. ಹಾಗಾದರೆ ಬಿಜೆಪಿಯ ಚುನಾವಣಾ ಬೆಳವಣಿಗೆಗೆ ಯಾರು ಕಾರಣ?

ಈ ಹಿಂದಿನ ಕಾಂಗ್ರೇಸೇತರ, ಬಿಜೆಪಿಯೇತರ ಸರ್ಕಾರಗಳ ಅಸ್ಥಿರತೆಗೆ ಬಾಹ್ಯ ಬೆಂಬಲ ನೀಡಿದ ಕಾಂಗ್ರೆಸ್ ಅಥವಾ ಬಿಜೆಪಿ ಪಕ್ಷಗಳೇ ಕಾರಣವಾಗಿವೆ. ಈ ಸಮಸ್ಯೆಗೆ 2009ರ ಚುನಾವಣೆಯಲ್ಲಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗಬೇಕಾದರೆ ಈ ಪರ್ಯಾಯ ಸೆಕ್ಯುಲರ್ ರಂಗಕ್ಕೆ ಸ್ವಂತ ಬಹುಮತ ಸಿಗುವಂತಾಗಬೇಕು, ಇದು ಅಸಾಧ್ಯವೇನಲ್ಲ. 14ನೇ ಲೋಕಸಭೆ ತನ್ನ ಅವಧಿಯನ್ನು ಮುಗಿಸುವಾಗ ಇದ್ದ ಕಾಂಗ್ರೆಸ್ ಮತ್ತು ಬಿಜೆಪಿಯ ಎಲ್ಲ ಲೋಕಸಭಾ ಸದಸ್ಯರನ್ನು ಒಟ್ಟಿಗೆ ಹಾಕಿದರೂ ಅದು ಬಹುಮತಕ್ಕಿಂತ ಕಮ್ಮಿ ಎಂಬುದನ್ನು ಗಮನಿಸಬೇಕು. ಕಾಂಗ್ರೆಸ್‌ನ್ನು ಮತ್ತು ಬಿಜೆಪಿಯನ್ನು ಹೊರಗಿಟ್ಟು ಬಹುಮತ ಪಡೆಯಲು ಸಾಧ್ಯವಿದೆ ಎಂಬುದನ್ನು ಅದು ತೋರಿಸುತ್ತದೆ. ಇಂದಿನ ಬೆಳವಣಿಗೆಗಳು ಅದೇ ದಿಕ್ಕಿನಲ್ಲಿ ಸಾಗುತ್ತಿರುವುದು ಆಶಾದಾಯಕವಾಗಿದೆ.

ತೃತೀಯ ರಂಗಕ್ಕೆ ಪರ್ಯಾಯ ಧೋರಣೆಯಿಲ್ಲವೇ?

ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ತೃತೀಯ ರಂಗಕ್ಕೆ ಯಾವುದೇ ಪರ್ಯಾಯ ಧೋರಣೆಗಳಿಲ್ಲ ಎಂದು ಆರೋಪಿಸಿದೆ. ಯುಪಿಎ ಯಾವ ಧೋರಣೆಗಳನ್ನು ಜನರ ಮುಂದಿಟ್ಟಿದೆ? ಬಿಜೆಪಿ ನೇತೃತ್ವದ ಎನ್‌ಡಿಎ ಯಾವುದಾದರೂ ಧೋರಣೆಗಳನ್ನು ಜನರ ಮುಂದೆ ಇಟ್ಟಿದೆಯಾ? ಎಲ್ಲ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ಮತ್ತು ಆ ಮೂಲಕ ತಾವು ಅಧಿಕಾರಕ್ಕೆ ಬಂದರೆ ಜಾರಿಗೊಳಿಸಬಯಸುವ ಕಾರ್ಯಕ್ರಮಗಳನ್ನು ಜನರ ಮುಂದಿಡುತ್ತವೆ. ಈ ಹಿಂದೆ ಅಧಿಕಾರಕ್ಕೆ ಬಂದ ಎಲ್ಲ ಮೈತ್ರಿಕೂಟದ ಸಮಿಶ್ರ ಸರ್ಕಾರಗಳು ಚುನಾವಣೆಗಳ ನಂತರವಷ್ಟೇ ರಚನೆಯಾಗಿದ್ದವು. 1996ರ ಸಂಯುಕ್ತರಂಗ, 1998ರ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ(ಎನ್‌ಡಿಎ) ಮತ್ತು 2004ರ ಸಂಯುಕ್ತ ಪ್ರಗತಿಪರ ಮೈತ್ರಿಕೂಟ (ಯುಪಿಎ) ಸರ್ಕಾರಗಳು ಚುನಾವಣಾ ಫಲಿತಾಂಶ ಹೊರಬಿದ್ದ ನಂತರವೇ ರಚನೆಯಾಗಿದ್ದವು. ಮೈತ್ರಿಕೂಟದ ರಚನೆಯಾದ ನಂತರ ಸಾಮಾನ್ಯ ಕಾರ್ಯಕ್ರಮವನ್ನು ತಯಾರಿಸಿ ಅದನ್ನು ಮೈತ್ರಿಕೂಟದ ಪಕ್ಷಗಳು ಅಂಗೀಕರಿಸುತ್ತವೆ. ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮವೂ ಸಹ ಇದೇ ರೀತಿಯಲ್ಲಿ ಅಂಗೀಕರಿಸಲ್ಪಟ್ಟಿತು. ಆದ್ದರಿಂದ ತೃತೀಯ ರಂಗಕ್ಕೆ ಯಾವುದೇ ಧೋರಣೆಗಳ ಕಾರ್ಯಕ್ರಮವಿಲ್ಲ ಎಂದು ಕಾಂಗ್ರೆಸ್ ಪಕ್ಷ ಆರೋಪಿಸುವುದರಲ್ಲಿ ಏನೂ ಅರ್ಥವಿಲ್ಲ.

ಒಂದು ಕಾಂಗ್ರೇಸೇತರ-ಬಿಜೆಪಿಯೇತರ ಸೆಕ್ಯುಲರ್ ಪರ್ಯಾಯ ಸರ್ಕಾರವನ್ನು ರಚಿಸುವತ್ತ ಪ್ರಯತ್ನಗಳು ದೇಶದಲ್ಲಿ ಒಂದು ಮಂಥನ ಪ್ರಕ್ರಿಯೆಯನ್ನು ಹುಟ್ಟುಹಾಕಿದೆ. ಯುಪಿಎ ಮತ್ತು ಎನ್‌ಡಿಎಗಳಲ್ಲಿ ಉಂಟಾಗಿರುವ ಕಿತ್ತಾಟಗಳನ್ನು ರಾಜಕೀಯ ಸಮಯ ಸಾಧನಕತನವೆಂದು ಬಣ್ಣಿಸಲಾಗುತ್ತಿದ್ದರೂ, ಅನೇಕ ಪ್ರಾದೇಶಿಕ ಪಕ್ಷಗಳ ನಾಯಕತ್ವದ ಮೇಲೆ ಅವುಗಳ ಬೆಂಬಲಿಗ ಸಮೂಹಗಳು ಪರ್ಯಾಯ ಧೋರಣೆಗಳಿಗಾಗಿ ಹೆಚ್ಚುತ್ತಿರುವ ಒತ್ತಡಗಳೇ ಪ್ರಮುಖ ಕಾರಣವಾಗಿದೆ. ತಮ್ಮ ಬದುಕಿನ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಪರ್ಯಾಯ ಧೋರಣೆಗಳು ಅಗತ್ಯವಾಗಿ ಬೇಕಾಗಿವೆ ಎಂಬುದನ್ನು ಜನತೆ ಹೀಗೆ ವ್ಯಕ್ತಪಡಿಸುತ್ತಿದೆ. ಇದುವೇ ಕಾಂಗ್ರೆಸ್ ಮತ್ತು ಬಿಜೆಪಿಯ ಹಲವಾರು ಮಿತ್ರ ಪಕ್ಷಗಳು ಚುನಾವಣೆಯಲ್ಲಿ ಅವುಗಳಿಂದ ದೂರ ಸರಿಯುತ್ತಿರುವುದರ ಕಾರಣವಾಗಿದೆ.

ಕೋಮುವಾದಿ ಶಕ್ತಿಗಳನ್ನು ನಿಯಂತ್ರಿಸಿ ದುರ್ಬಲಗೊಳಿಸುವುದು, ಲಾಭಕ್ಕಿಂತ ಜನರ ಹಿತಗಳೇ ಪ್ರಧಾನವಾಗುವ ಆರ್ಥಿಕ ಧೋರಣೆಗಳು, ಸಾಮಾಜಿಕ ನ್ಯಾಯವನ್ನು ಮತ್ತು ಅಲ್ಪಸಂಖ್ಯಾತರ ಹಿತವನ್ನು ಸಾಧಿಸುವ ಕಾರ್ಯಕ್ರಮಗಳು, ಭಾರತಕ್ಕೆ ವಿಶ್ವದಲ್ಲೇ ಒಂದು ಹೆಮ್ಮೆಯ ಸ್ಥಾನವನ್ನು ಕಲ್ಪಿಸುವ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವ ಮೂಲಕ ದೇಶದ ಆರ್ಥಿಕ ಮತ್ತು ರಾಜಕೀಯ ಸಾರ್ವಭೌಮತೆಯನ್ನು ಕಾಪಾಡಿ ಬಲಪಡಿಸುವ ಧೋರಣೆಗಳೇ ಪರ್ಯಾಯ ಧೋರಣೆಗಳಾಗಿ ಬೇಕಾಗಿದೆ. ಇಂತಹ ಪರ್ಯಾಯ ಧೋರಣೆಗಳನ್ನು ಜಾರಿಗೊಳಿಸಲು ಬದ್ಧವಾದ ಪರ್ಯಾಯ ಸೆಕ್ಯುಲರ್ ಸರ್ಕಾರದಿಂದ ಮಾತ್ರ, ಜನಗಳ ಬದುಕು ಉತ್ತಮಗೊಳ್ಳುವುದರೊಂದಿಗೆ ದೇಶದ ಭವಿಷ್ಯ ಉಜ್ವಲಗೊಳ್ಳಲು ಸಾಧ್ಯ.

ಸೌಹಾರ್ದತೆಯೆಡೆಗೆ ನಮ್ಮ ನಡಿಗೆ...

ಸಾಹಿತಿ - ಚಿಂತಕರು - ಕಲಾವಿದರ 'ಮಂಗಳೂರು ಚಲೋ'

ಓಲೆ ಹತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹತ್ತಿ ಉರಿದೆಡೆ ನಿಲಬಹುದೇ ಎಂಬ ಶರಣವಾಣಿಯಂತೆ ಈ ಹೊತ್ತು ಮಂಗಳೂರಿನ ಕರಾವಳಿ ತೀರಕ್ಕೆ ತೀರವೇ ಹಿಂದೂ ಕೋಮುವಾದಿಗಳ ದ್ವೇಷಾಗ್ನಿ ಸಿಕ್ಕು ಧಗಧಗಿಸುತ್ತಿದೆ. ಪ್ರತಿಕ್ಷಣವೂ ಅಲ್ಲಿನ ಕ್ರೈಸ್ತರು, ಮುಸ್ಲೀಮರು ಇನ್ನುಳಿದ ಯಾರೇ ಅಲ್ಪಸಂಖ್ಯಾತರಿರಲಿ, ಒಟ್ಟಾರೆ ಹಿಂದೂ ಎಂದು ಗುರುತಿಸಿಕೊಳ್ಳಲಾಗದ ಯಾವುದೇ ಸಮುದಾಯವಿರಲಿ ಅವರೆಲ್ಲ ಭಜರಂಗದಳ, ಶ್ರೀರಾಮಸೇನೆ, ವಿಶ್ವಹಿಂದೂ ಪರಿಷತ್, ಸಂಘ ಪರಿವಾರದ ಗೂಂಡಾ ಪಡೆಗಳ ಅಮಾನವೀಯ ದಾಳಿಗೆ ತುತ್ತಾಗುತ್ತಿದ್ದಾರೆ. ಕರ್ನಾಟಕದಲ್ಲಿ ಕೋಮುವಾದಿ ಬಿಜೆಪಿ ಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿದಂದಿನಿಂದಲೂ ಮಂಗಳೂರಿನ ಸುತ್ತಮುತ್ತಲ ಪ್ರದೇಶದಲ್ಲಿ ಜನಾಂಗೀಯ ದ್ವೇಷ, ಅಸಹನೆಗಳು ಪರಾಕಾಷ್ಠೆಗೆ ಏರಿವೆ. ವಿಧರ್ಮಿಯ ವಿದ್ಯಾರ್ಥಿಗಳು ಪರಸ್ಪರ ಮಾತಾಡುವಂತಿಲ್ಲ. ಶಾಲೆ, ಕಾಲೇಜು, ಬಸ್ಸು, ಹೊಟೇಲು, ಸಿನೆಮಾ ಕಡಲ ಕಿನಾರೆ ಹೀಗೆ ಯಾವುದೇ ಸಾರ್ವಜನಿಕ ಸ್ಥಳದಲ್ಲಿಯೇ ಆಗಲಿ ಅಥವಾ ಖಾಸಗಿ ಮನೆ, ಹಟ್ಟಿ, ಸಭೆ, ಸಮಾರಂಭಗಳಲ್ಲಿ ಕ್ರೈಸ್ತರು, ಮುಸ್ಲೀಮರು, ಹಿಂದೂಗಳು ಒಟ್ಟಾರೆ ವಿಧರ್ಮಿಯರು ಪರಸ್ಪರ ಆತ್ಮೀಯವಾಗಿ ಬೆರೆಯುವಂತಿಲ್ಲ, ಮಾತಾಡುವಂತಿಲ್ಲ, ಅಷ್ಟೇ ಏಕೆ ಎಂಥ ಎಮರ್‌ಜೆನ್ಸಿ ಕಠಿಣ ಪ್ರಸಂಗಗಳಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವಂತಿಲ್ಲ. ಹಾಗೇನಾದರೂ ಬೇರೆ ಬೇರೆ ಧರ್ಮದವರು ಕೂಡಿ ಕುಳಿತಿದ್ದು, ಮಾತಾಡಿದ್ದು, ಸುಮ್ಮನೆ ಮುಗಳ್ನಕ್ಕದ್ದು ಅಂತಾದರೆ ಸಾಕು. ಹಿಂದೂ ಗೂಂಡಾ ಬೇಹುಗಾರರು ಅವರನ್ನು ಅಟ್ಟಾಡಿಸಿ ಹೊಡೆಯುತ್ತಾರೆ. ಅಂಥವರ ಹುಟ್ಟಡಗಿಸುವುದಾಗಿ ಅಟ್ಟಹಾಸಗೈಯ್ಯುತ್ತಾರೆ. ಇಂಥ ನೀಚ ಪಾಶವೀ ಕೃತ್ಯವನ್ನು ಸಂಸ್ಕೃತಿ ರಕ್ಷಕರು ಎಂದು ಕರೆದುಕೊಳ್ಳುತ್ತಿರುವ ರಾಕ್ಷಸರು ಸರಕಾರಿ ಯಂತ್ರದ ದಿವ್ಯ ಕೃಪಾಕಟಾಕ್ಷದಲ್ಲಿ ಪೋಷಿಸಿಕೊಂಡು ಬರುತ್ತಿದ್ದಾರೆ. ಪಬ್ ದಾಳಿಯ ಸಂದರ್ಭದಲ್ಲಿ ಮಹಿಳೆಯರನ್ನು ಅಟ್ಟಾಡಿಸಿಕೊಂಡು ಹೊಡೆದದ್ದನ್ನು ಮುತಾಲಿಕ್‌ರಂಥ ಮನೋರೋಗಿಗಳು ಪೌರುಷ್ಯವೆಂಬಂತೆ ಬಿಂಬಿಸಿಕೊಳ್ಳುತ್ತಾರೆ.



ದ್ವೇಷ ಪ್ರಸಾರ

ಇಂದು ಸಂತ, ಸ್ವಾಮಿಜಿಗಳ ವೇಷ ತೊಟ್ಟುಕೊಂಡು ಆಷಾಢಭೂತಿಗಳು ರಾಮ ಕೃಷ್ಣ, ಹರಿ ಹರರ ಘೋಷಣೆಗಳೊಂದಿಗೆ ದ್ವೇಷವೇ ಧರ್ಮದ ತಿರುಳು ಎಂದು ಅರಚುತ್ತಿದ್ದಾರೆ. ಇತರ ಧರ್ಮಿಯರನ್ನು ಹಿಂಸಿಸುವುದೇ ರಾಮಭಕ್ತಿ, ನೆರೆ ಹೊರೆಯವರನ್ನು ಗುಮಾನಿಯಿಂದ ನೋಡುವುದೇ ಜಾಣತನ. ಹಿಂದೂ ಅಲ್ಲದವರನ್ನು ಸಂಹರಿಸುವುದೇ ಪುಣ್ಯ ಪ್ರಾಪ್ತಿಯ ಸಂಗತಿ ಎಂದೆಲ್ಲ ಅಮಾಯಕ, ಮುಗ್ಧ, ಜನಸಾಮಾನ್ಯರಲ್ಲಿ ಬಿಂಬಿಸುತ್ತಿರುವುದರಿಂದ ನಾಡೆಂಬ ನಾಡು ಉರಿಯುತ್ತಿರುವ ಅಗ್ನಿಕುಂಡವಾಗಿದೆ. ಅಲ್ಪಸಂಖ್ಯಾತರಂತೂ ಮಂಗಳೂರಿನಲ್ಲಿ ಕೈಯಲ್ಲಿ ಜೀವ ಹಿಡಿದು ಬದುಕುತ್ತಿದ್ದಾರೆ. ಅವರು ನಂಬುವ ದೇವರುಗಳು, ಅವರ ಸಂಸ್ಕೃತಿ, ಉಡುಗೆ, ತೊಡುಗೆ, ಅವರ ಸಾಹಿತ್ಯ ಕಲೆ, ತಿನ್ನುವ ಆಹಾರ ಹೀಗೆ ಎಲ್ಲ ಎಲ್ಲವೂ ಅಪಮಾನಕ್ಕೆ, ತುಚ್ಛೀಕರಣಕ್ಕೆ ಒಳಗಾಗುತ್ತಿವೆ. ಅಷ್ಟಕ್ಕೂ ಇದೆಲ್ಲವೂ ಧರ್ಮ ಭೀರುತ್ವ ಮತ್ತು ದೇಶಭಕ್ತಿಯ ಮುಖವಾಡದೊಂದಿಗೆ ಸಕ್ರೀಯವಾಗಿದೆ ಎಂಬುದೇ ಈ ಹೊತ್ತಿನ ತೀರ ಅಪಾಯದ ಸಂಗತಿಯಾಗಿದೆ.

ಸಂಘ ಪರಿವಾರಿಗಳು ಕರ್ನಾಟಕದ ಮಂಗಳೂರನ್ನು ಗುಜರಾತನ್ನಾಗಿ ಮಾಡ ಬೇಕೆಂಬ ಹುನ್ನಾರಿನೊಂದಿಗೆ ದಿನಕ್ಕೊಂದು ದೊಂಬಿ, ಗಲಭೆ ನಡೆಸುತ್ತ ಯಶಸ್ವಿಯಾಗುವ ಕನಸು ಕಾಣುತ್ತಿದ್ದಾರೆ. ಅಮ್ನೇಶಿಯಾ ಪಬ್‌ದಾಳಿ, ಶಾಸಕರ ಪುತ್ರಿಯ ಮೇಲೆ ಹಲ್ಲೆ, ವಿದ್ಯಾರ್ಥಿಗಳನ್ನು ಥಳಿಸುತ್ತಿರುವುದು, ಪುತ್ತೂರಿನಲ್ಲಿ ದಾಂಧಲೆ, ಚರ್ಚ್ ಮೇಲೆ ನಿರಂತರ ದಾಳಿಗಳು ಒಂದೇ ಎರಡೇ ಪಟ್ಟಿ ಮಾಡಲು ಸಾಧ್ಯವಾಗದಷ್ಟು ದುರ್ಘಟನೆಗಳು. ಹಿಂದೂಗಳಲ್ಲದವರನ್ನು ಮತ್ತು ಪ್ರಗತಿಪರರನ್ನು ದೇಶ ಬಿಟ್ಟು ಓಡಿಸುತ್ತೇವೆ. ಅವರೆಲ್ಲ ನಾವು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು. ಇಲ್ಲವಾದರೆ ಅವರ ಸಮಾಧಿ ಮಾಡುತ್ತೇವೆ ಎಂಬ ಹಿಟ್ಲರಿಜಂ ವಾದ. ಅಕ್ಷರಶ: ಕ್ರೌರ್ಯ ತುಂಬಿದ ಸರ್ವಾಧಿಕಾರಿ ಧೋರಣೆಯಾಗಿದೆ. ಅಭಿಪ್ರಾಯ ಸ್ವಾತಂತ್ರ್ಯ. ಸಮಾನತೆ, ಪ್ರಜಾತಾಂತ್ರಿಕ ಮೌಲ್ಯಗಳು ಅಪಾಯಕ್ಕೆ ಗುರಿಯಾಗಿವೆ. ಕೋಮುವಾದಿಗಳ ಜನಾಂಗೀಯ ದ್ವೇಷವು ಮೇರೆ ಮೀರಿ ಅಟ್ಟಹಾಸಗೈಯ್ಯುತ್ತಿರುವಾಗ ಮಂಗಳೂರಿನ ಜನಸಾಮಾನ್ಯರು, ವಿದ್ಯಾವಂತರು, ಕಲಾಕಾರರು, ಸಾಹಿತಿಗಳು, ಆತಂಕಕ್ಕೆ ಒಳಗಾಗಿದ್ದಾರೆ. ಇಂಥ ಅಸಹಾಯಕ, ಕ್ಲಿಷ್ಟ ಸಂದಿಗ್ಧ ಸನ್ನಿವೇಶದಲ್ಲಿ ಮಂಗಳೂರಿನ ಜನತೆಯಲ್ಲಿ ಆತ್ಮವಿಶ್ವಾಸ ತುಂಬಲೆಂದು ಅದೇ ಊರಿನ ಮಾನವತಾವ ವೇದಿಕೆಯವರು ಸೌಹಾರ್ದತೆಯೆಡೆಗೆ ನಮ್ಮ ನಡಿಗೆ



ಎಂಬ ಮಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಂಡಿದ್ದರು.


ಕಾಲದ ಜರೂರಿ

ಕಾಲದ ಜರೂರಿಯನ್ನು, ಚಾರಿತ್ರಿಕ ಹೊಣೆಗಾರಿಕೆಯನ್ನು ಅರಿತುಕೊಂಡ ಪ್ರಜ್ಞಾವಂತ ಪ್ರಗತಿಪರ ಕವಿ ಕಲಾವಿದರೆಲ್ಲ ನಾಡಿನ ವಿವಿಧ ಜಿಲ್ಲೆಗಳಿಂದ ಸ್ವಯಂ ಪ್ರೇರಿತವಾಗಿ ದಿನಾಂಕ : 14.3.2009 ರಂದು ಮಂಗಳೂರಿಗೆ ಧಾವಿಸಿ ಬಂದಿದ್ದರು. ಸಿರುಗುಪ್ಪ, ಗುಲ್ಬರ್ಗಾ, ರಾಯಚೂರು, ಶಿವಮೊಗ್ಗ, ಮೈಸೂರು, ಮಂಡ್ಯ, ಕೋಲಾರ ಮುಂತಾದ ಜಿಲ್ಲೆಗಳಿಂದ ನೂರಾರು ಜನರು ಮಂಗಳೂರಿನ ಜನತೆಗೆ ನೈತಿಕ ಬೆಂಬಲ ನೀಡಲೆಂದು, ನಿಮ್ಮ ಎದೆಗೆ ನಮ್ಮಕರುಳುಬಳ್ಳಿಯ ಸಂಬಂಧ ಜೋಡಿಸಲೆಂದು ಬಂದಿದ್ದೇವೆ ಎಂಬ ಘೋಷಣೆಗಳು ಗಗನದೆತ್ತರಕ್ಕೆ ಅನುರಣಿಸಿ ಶಾಂತಿಯ ರಂಗೋಲಿ ಬರೆದಿದ್ದವು. ಅಂದು ಮಧ್ಯಾಹ್ನ 4 ಗಂಟೆಗೆ ಪ್ರಾರಂಭವಾದ ಸೌಹಾರ್ದ ನಡಿಗೆಯಲ್ಲಿ ಖ್ಯಾತ ರಂಗ ನಿರ್ದೇಶಕ ಪ್ರಸನ್ನ, ಸಾಹಿತಿ ರಮಜಾನ್‌ದರ್ಗಾ, ಡಾ.ಮೀನಾಕ್ಷಿ ಬಾಳಿ, ಧಾರವಾಹಿ ನಿರ್ದೇಶಕ ಬಿ.ಸುರೇಶ, ಸಾಣೆಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಲಾಕಾರರಾದ ಪಿಚ್ಚಳ್ಳಿ ಶ್ರೀನಿವಾಸ, ಜನಾರ್ಧನ್, ರಾಮದಾಸ್, ಎಂ.ಎಸ್. ಮೂರ್ತಿ, ಸಮುದಾಯದ ಪ್ರೊ.ಆರ್.ಕೆ.ಹುಡಗಿ, ಸುರೇಂದ್ರ, ಕೆ.ಎಸ್.ಮೂರ್ತಿ, ಕೆ.ಎಸ್. ವಿಮಲಾ, ಕೆ.ನೀಲಾ ಜನವಾದಿ ಮಹಿಳಾ ಸಂಘಟನೆಯ ಕುಮಾರಿ, ಹೇಮಾ, ಸುಕನ್ಯಾ ಹೀಗೆ ಅನೇಕರು ಪಾಲ್ಗೊಂಡಿದ್ದರು. ಮಂಗಳೂರಿನ ಬೀದಿಗಳುದ್ದಕ್ಕೂ ಸೌಹಾರ್ದ ನಡಿಗೆ ಹಾಕಿ ಮಾನವೀಯತೆ ಪರ ಘೋಷಣೆಗಳನ್ನು ಕೂಗುತ್ತ ಸ್ಥಳೀಯರ ಹೃದಯದಲ್ಲಿ ಆತ್ಮಸ್ಥೈರ್ಯ, ಆತ್ಮಬಲ ತುಂಬುವ ಕೆಲಸ ಮಾಡಿದರು.

ನಂತರ ಮುಖ್ಯವೃತ್ತದಲ್ಲಿ ಸಮಾಜವೇಶಗೊಂಡು "ಒಂದು ಚೂರಿಯ ಕಥೆ"ಎಂಬ ಬೀದಿ ನಾಟಕವನ್ನು ಪ್ರದರ್ಶಿಸಿದರು. ಕಟ್ಟುತ್ತೇವೆ ನಾವು ಕಟ್ಟುತ್ತೇವೆ, ಓ ನನ್ನ ಚೇತನ ಆಗು ನೀ ಅನಿಕೇತನ, ಭ[illegible] ಮಾಡಬ್ಯಾಡಿರೋ ಮುಂತಾದ ಕ್ರಾಂತಿಗೀತ[illegible] ಪಿಚ್ಚಳ್ಳಿ ಶ್ರೀನಿವಾಸ, ಜನಾರ್ಧನ್‌ರು ಉಚ್ಚಕಂಠಸಿರಿಯಿಂದ ಸಾಧರಪಡಿಸಿ ಸಭ[illegible] ಮಂತ್ರಮುಗ್ಧಗೊಳಿಸಿದರು. ನಂತರ ಬಹಿರ[illegible] ನಡೆಯಿತು. ಶಾಂತಿಸಂದೇಶ ಸಾರುವ[illegible] ಪಾರಿವಾಳಗಳನ್ನು ಬಾನಂಗಳಕ್ಕೆ ಉದ್ಘಾಟಕ[illegible] ಪ್ರಸನ್ನ ಮತ್ತು ಪಂಡಿತಾರಾಧ್ಯ ಶಿವಾಚಾ[illegible] ಹಾರಿಬಿಟ್ಟರು. ಗೋಧ್ರಾ ಗಲಭೇ ವೇಳೆ ಸಂಭ[illegible] ಮನಕಲಕುವ ಸನ್ನಿವೇಶಗಳನ್ನು ಕುರಿತು ರವಿಕು[illegible] ರವಿಶಂಕರ ಬಿ ನೆಗೆಟಿವ್ ಎಂಬ ಹನಿಕ[illegible] ಸಂಕಲನವನ್ನು ಬಿಡುಗಡೆ ಮಾಡಲಾಯಿತು. [illegible] ಸಂದರ್ಭದಲ್ಲಿ ರಂಗಕರ್ಮಿ ಪ್ರಸನ್ನ ಉದ್ಘಾ[illegible] ಭಾಷಣ ಮಾಡುತ್ತ ಮಂಗಳೂರಿನಲ್ಲಿ ನಡೆಯುತ್ತಿ[illegible] ಅಹಿತಕರ ಘಟನೆಗಳ ಕುರಿತು ಬುದ್ಧಿಜೀ[illegible] ಪ್ರಗತಿಪರರರು ಎಚ್ಚೆತ್ತುಕೊಂಡು ಆತ್ಮವಿಮ[illegible] ಮಾಡಿಕೊಳ್ಳಬೇಕಿದೆ ಎಂದರು. ಮೀನಾಕ್ಷಿ [illegible] ಕರ್ನಾಟಕದ ಸೌಹಾರ್ದ ಪರಂಪರೆಯನ್ನು ತತ್ವ[illegible] ವಚನ, ಕವನಗಳ ಮೂಲಕ ಒತ್ತಿ ಹೇಳಿದ[illegible] ಸ್ವಾಮಿಜಿಯವರು ಈ ಸಂದರ್ಭದಲ್ಲಿ ಧಾವಿ[illegible] ಮುಖಂಡರು ವಹಿಸಬೇಕಾದ ಜವಾಬ್ದಾರಿ ಕು[illegible] ಎಚ್ಚರಿಸಿದರು. ಬಿ.ಸುರೇಶ ಅವರು ಕೋಮುವಾ[illegible] ಅಟ್ಟಹಾಸವನ್ನು ತೀವ್ರವಾಗಿ ಖಂಡಿ[illegible] ಕಾಶಿನಾಥ ಅಂಬಲಗಿ, ಪ್ರೊ. ಹುಡಗಿಯ[illegible] ಕೋಮುವಾದಿಗಳಿಗೆ ಎಚ್ಚರಿಕೆ ನೀಡಿ[illegible] ವಾಸುದೇವ ಉಚ್ಚಿಲ ಕಾರ್ಯಕ್ರಮ ನಿರೂಪಿಸಿದ[illegible]

ಬೆಂಗಳೂರಿನಲ್ಲೂ ಪ್ರತಿಭಟ[illegible]

ಕರಾವಳಿ ತೀರದ ಕಾನೂನು ಸುವ್ಯವಸ್ಥೆ ತೀ[illegible] ಹದಗೆಟ್ಟಿರುವುದನ್ನು ರಾಜ್ಯಪಾಲರ ಗಮನ[illegible] ತರಲು ಬೆಂಗಳೂರು ನಗರದಲ್ಲಿ ಸಾಹಿ[illegible] ಕಲಾವಿದರ ಒಕ್ಕೂಟವು 20.03.2009 ರಂದು [illegible] ಮಹಾತ್ಮಗಾಂಧಿ ರಸ್ತೆಯ ಗಾಂಧಿಪ್ರತಿಮೆಯ [illegible] ಎದುರು ಧರಣಿ ನಡೆಸಿ ರಾಜ್ಯಪಾಲರಿಗೊಂದು [illegible] ಮನವಿ ಪತ್ರ ಸಲ್ಲಿಸಲಾಯಿತು. ಅದರ [illegible] ನೇತೃತ್ವವನ್ನು ಕಲಾವಿದರಾದ ಬಿ.ಸುರೇಶ [illegible] ಶ್ರೀನಿವಾಸ ಜಿ.ಕಪ್ಪಣ್ಣ, ಕೆ.ನಾಗರಾಜಮೂರ್ತಿ [illegible] ಟಿ.ಸುರೇಂದ್ರರಾವ್, ಎಸ್.ಜಿ.ಸಿದ್ದರಾಮಯ್ಯ [illegible] ಸಿ.ಚಂದ್ರಶೇಖರ್, ಎಂ.ಎಸ್.ಮೂರ್ತಿ[illegible] ಮುಂತಾದವರು ವಹಿಸಿದ್ದರು. ದೊಡ್ಡ [illegible] ಸಂಖ್ಯೆಯಲ್ಲಿ ಸಾಹಿತಿ ಕಲಾವಿದರು ಧರಣಿಯ[illegible] ಭಾಗವಹಿಸಿದ್ದರು.



ಆರ್ಥಿಕ ಕುಸಿತದ ಹೆಣ್ಣು ಮುಖ

ಆರ್ಥಿಕ ಕುಸಿತದಿಂದ ಏಶ್ಯಾದಲ್ಲೇ ಸುಮಾರು ಮೂರು ಕೋಟಿ ಜನ ನಿರುದ್ಯೋಗಿಗಳಾಗಬಹುದು. ಹಿಂದಿನ ಬಿಕ್ಕಟ್ಟು (ಮುಖ್ಯವಾಗಿ 1997 ರ) ಅನುಭವದ ಆಧಾರದ ಮೇಲೆ ಇದಕ್ಕೊಂದು ಹೆಣ್ಣು ಮುಖ ಇದೆ ಎಂದು ಕಂಡು ಬಂದಿದೆ. ಅದನ್ನು ಎದುರಿಸವಲ್ಲಿ ಪರಿಹಾರ ರೂಪಿಸುವಲ್ಲಿ, ಈಗಿನ ಕುಸಿತದಲ್ಲಿ ಅದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಎನ್ನುತ್ತದೆ ಎಂದು ಐ.ಎಲ್.ಓ. (ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ) ಅಧ್ಯಯನ ವರದಿ.

1997 ರ ಬಿಕ್ಕಟ್ಟಿನಲ್ಲಿ ಥಾಯ್ಲೆಂಡಿನಲ್ಲಿ ಬಟ್ಟೆ ಕೈಗಾರಿಕೆಯಲ್ಲಿ ಕೆಲಸ ಕಳೆದುಕೊಂಡವರಲ್ಲಿ ಶೇ. 95 ಮತ್ತು ಆಟಿಗೆ ಕೈಗಾರಿಕೆಯಲ್ಲಿ ಶೇ.88. ದಕ್ಷಿಣ ಕೊರಿಯಾದಲ್ಲಿ ಹಣಕಾಸು ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಶೆ. 86 ಮಹಿಳೆಯರು ಉದ್ಯೋಗ ಕಳೆದುಕೊಂಡರು. ಇದಕ್ಕೆ ಕಾರಣ ಮಹಿಳೆಯರ ಉದ್ಯೋಗ ಅವಕಾಶಗಳು ತಾತ್ಕಾಲಿಕ, ಕಾಂಟ್ರಾಕ್ಟ್, ಅಭದ್ರ, ಕಡಿಮೆ ಶಿಕ್ಷಣ-ಕೌಶಲ್ಯ ಇರುವ ಕ್ಷೇತ್ರಗಳಲ್ಲಿ ಇರುವುದು. ಈಗಿನ ಬಿಕ್ಕಟ್ಟಿನಲ್ಲೂ ಬೇಡಿಕೆ ಕುಸಿತಕ್ಕೆ ಒಳಗಾಗಿರುವ ಬಟ್ಟೆ, ಇಲೆಕ್ಟ್ರಾನಿಕ್ಸ್, ಹೊಟೇಲ್, ಇತರ ಸೇವೆಗಳ ಕೆಳಗಣ ಹಂತಗಳಲ್ಲಿ ಮಹಿಳೆಯರು ಇದ್ದಾರೆ. ಅವರು ಉದ್ಯೋಗ ಕಳೆದುಕೊಳ್ಳುವುದರಲ್ಲಿ ಮೊದಲಿಗರಾಗಿರುವ ಸಾಧ್ಯತೆ ಹೆಚ್ಚು.



ಅಂಗವಿಕಲ ಮಹಿಳೆಯರ ಸಮಸ್ಯೆಗಳಿಗೂ ಸ್ಪಂದನವಿಲ್ಲ. ದುಡಿಯುವ ಮಹಿಳೆಯ ಸಮಸ್ಯೆಗಳಿಗೂ ಇಲ್ಲ

ಅದೇ ರೀತಿಯಲ್ಲಿ ಮಹಿಳೆಯರು ಉದ್ಯೋಗ ಕಳೆದುಕೊಳ್ಳುವುದರಿಂದ ಕುಟುಂಬಗಳ ಮತ್ತು ಆ ಮೂಲಕ ಸಮಾಜದ ಮೇಲೆ ಅಗುವ ಪರಿಣಾಮ ಸಹ ಬೇರೆ ಪ್ರಮಾಣದಲ್ಲಿ ಇರುತ್ತದೆ. 1997 ರ ಬಿಕ್ಕಟ್ಟಿನಲ್ಲಿ ಫಿಲಿಪ್ಪೀನ್ಸ್ ನಲ್ಲಿ ಪುರುಷರು ನಿರುದ್ಯೋಗಿಗಳಾಗಿದ್ದರಿಂದ ಶೇ. 67 ಕುಟುಂಬಗಳ ಆದಾಯ ಕಡಿಮೆ ಆಯಿತು. ಇದಕ್ಕೆ ಹೋಲಿಸಿದರೆ ಮಹಿಳೆಯರು ನಿರುದ್ಯೋಗಿಗಳಾಗಿದ್ದರಿಂದ ಶೇ. 94 ಕುಟುಂಬಗಳ ಆದಾಯ ಕಡಿಮೆ ಆಯಿತು. ಇದಕ್ಕೆ ಕಾರಣ ಹೆಚ್ಚಿನ ಮಹಿಳಾ ಉದ್ಯೋಗಿಗಳು ಬಡ ಕುಟುಂಬಗಳಿಂದ ಬಂದಿದ್ದು ಕಡಿಮೆ ವೇತನ ಹೊಂದಿರುವವರು. ಕಡಿಮೆ ಉಳಿತಾಯ, ಆಸ್ತಿ ಹೊಂದಿರುವವರು. ವೇತನ ಕಡಿತ ಅಥವಾ ನಷ್ಟದ ಪರಿಣಾಮ ತಡೆದುಕೊಳ್ಳುವ ಶಕ್ತಿ ಇರುವುದಿಲ್ಲ. ಸರ್ಕಾರಗಳು ಆರ್ಥಿಕ ಬಿಕ್ಕಟ್ಟಿನ ಪರಿಹಾರಕ್ಕೆ ಕೈಗೊಳ್ಳುವ ಪ್ಯಾಕೇಜುಗಳು (ಹೆದ್ದಾರಿ ಮೂಲ ರಚನೆ ನಿರ್ಮಾಣ ಇತ್ಯಾದಿ) ಸೃಷ್ಟಿಸುವ ಉದ್ಯೋಗಗಳು ಪುರುಷರಿಗೆ ಹೋಗುವ ಸಾಧ್ಯತೆ ಹೆಚ್ಚು.

ಇಂದಿನ ಬಿಕ್ಕಟ್ಟಿಗೆ ಪರಿಹಾರ ನೀತಿ ರೂಪಿಸುವಾಗ ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಐ.ಎಲ್.ಓ. ವರದಿ ಹೇಳುತ್ತದೆ. ○

ಮೂರನೇ ಪರ್ಯಾಯದ ಅಭ್ಯರ್ಥಿ ಪಟ್ಟಿ ಬಿಡುಗಡೆ

ಜನತಾದಳ ವರಿಷ್ಠ ಎಚ್.ಡಿ.ದೇವೇಗೌಡ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಜೆಡಿಎಸ್ ಹಾಗೂ ಎಡಪಕ್ಷಗಳ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಯುಗಾದಿಯ ದಿನದಂದು ಬಿಡುಗಡೆ ಗೊಳಿಸಿದರು. ರಾಜ್ಯದ ಒಟ್ಟು 18 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಘೋಷಿಸಲಾಗಿದೆ. 2 ಕ್ಷೇತ್ರ - ದಕ್ಷಿಣ ಕನ್ನಡ, ಉಡುಪಿ- ಚಿಕ್ಕಮಗಳೂರು ಕ್ಷೇತ್ರಗಳಲ್ಲಿ ಎಡಪಕ್ಷಗಳು ಸ್ಪರ್ಧಿಸುತ್ತಿವೆ. ಘೋಷಿತ ಅಭ್ಯರ್ಥಿಗಳ ಹೆಸರು ಮತ್ತು ಕ್ಷೇತ್ರಗಳ ಪಟ್ಟಿ ಈ ರೀತಿ ಇದೆ.

1. ಬೆಂಗಳೂರು ಗ್ರಾಮಾಂತರ : ಎಚ್.ಡಿ.ಕುಮಾರಸ್ವಾಮಿ
2. ಬೆಂಗಳೂರು ದಕ್ಷಿಣ : ಪ್ರೊ. ರಾಧಾಕೃಷ್ಣ
3. ಬೆಂಗಳೂರು ಸೆಂಟ್ರಲ್ : ಜಮೀರ್ ಅಹ್ಮದ್ ಖಾನ್
4. ಬೆಂಗಳೂರು ಉತ್ತರ: ಸುರೇಂದ್ರಬಾಬು
5. ಹಾಸನ : ಎಚ್.ಡಿ.ದೇವೇಗೌಡ
6. ಮಂಡ್ಯ : ಚೆಲುವನಾರಾಯಣ ಸ್ವಾಮಿ
7. ಕೊಪ್ಪಳ: ಇಕ್ಬಾಲ್ ಅನ್ಸಾರಿ
8. ಮೈಸೂರು : ಜೇವಿಜಯ
9. ಚಾಮರಾಜನಗರ: ಕೋಟೆ ಶಿವಣ್ಣ
10. ಬೀದರ್ : ಸುಭಾಷ್ ಜೀಳಗಿ
11. ಕೋಲಾರ : ಚಂದ್ರಣ್ಣ
12. ತುಮಕೂರು: ಮುದ್ದಹನುಮೇಗೌಡ
13. ಚಿಕ್ಕಬಳ್ಳಾಪುರ: ಮನೋಹರ್
14. ಉತ್ತರ ಕನ್ನಡ : ವಿ.ಡಿ. ಹೆಗ್ಡೆ
15. ಗುಲ್ಬರ್ಗಾ: ಬಾಬು ಹೊನ್ನ ನಾಯಕ್
16. ಚಿತ್ರದುರ್ಗ: ರತ್ನಾಕರ ಬಾಬು

ಎಡಪಕ್ಷಗಳ ಅಭ್ಯರ್ಥಿಗಳು

1. ದಕ್ಷಿಣ ಕನ್ನಡ : ಬಿ. ಮಾಧವ (ಸಿಪಿಐ-ಎಂ)
2. ಉಡುಪಿ-ಚಿಕ್ಕಮಗಳೂರು: ರಾಧಾ ಸುಂದರೇಶ್ (ಸಿಪಿಐ)

ಇನ್ನುಳಿದ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಏಪ್ರಿಲ್ 2 ರಂದು ಪ್ರಕಟಿಸಲಾಗುವುದು ಎಂದು ಜೆಡಿಎಸ್ ಪಕ್ಷದ ವಕ್ತಾರರು ತಿಳಿಸಿದ್ದಾರೆ.

ದೇವೇಗೌಡರಲ್ಲದೆ ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಜಿ.ಎನ್.ನಾಗರಾಜ್, ಮಾರುತಿ ಮಾನ್ಪಡೆ, ಜಿ.ಸಿ.ಬಯ್ಯಾರೆಡ್ಡಿ, ಸಿಪಿಐ ರಾಜ್ಯ ಕಾರ್ಯದರ್ಶಿ ಡಾ॥ ಸಿದ್ದನಗೌಡ ಪಾಟೀಲ್, ಎಂ.ಸಿ.ನರಸಿಂಹನ್, ಜೆಡಿ(ಎಸ್) ನ ಚಲುವನಾರಾಯಣ ಸ್ವಾಮಿ ಇತರರು ಹಾಜರಿದ್ದರು. ○

ಇದ್ದದ್ದು ಇದ್ದಾಂಗ...

"ಮುಸ್ಲೀಮರ ಅಂಗಡಿಗಳಲ್ಲಿ ವ್ಯಾಪಾರ ಬಹಿಷ್ಕರಿಸಿ"

ದೇಶದಲ್ಲಿ ಸಮಾನ ಕಾನೂನು ಜಾರಿ, ರಾಮಮಂದಿರ ನಿರ್ಮಾಣ, ಗೋಹತ್ಯೆ ನಿಷೇಧ, ಜಾರಿಯಾಗಬೇಕಾದರೆ ಎಲ್ಲಾ ಹಿಂದೂಗಳು ಮುಸ್ಲೀಮರ ಅಂಗಡಿಗಳಲ್ಲಿ ವ್ಯಾಪಾರ ಮಾಡುವುದನ್ನು ನಿಲ್ಲಿಸಬೇಕು...... ಚುನಾವಣೆ ಹಾಗೂ ನೇಮಕಾತಿಗೆ ಜಾತಿ ಅಳತೆಗೋಲು ಪ್ರಮುಖವಾಗುತ್ತಿರುವುದು ಅಪಾಯಕಾರಿ ನೀತಿ. ನೆಹರೂ ಕುಟುಂಬದ ಏಕೈಕ ಗಂಡು ವರುಣ್, ಆತ ಹಿಂದುಗಳ ಪರವಾಗಿ ನೀಡಿದ ಹೇಳಿಕೆಯಲ್ಲಿ ತಪ್ಪೇನಿದೆ?"


ಪ್ರಮೋದ್ ಮುತಾಲಿಕ್
ಶ್ರೀರಾಮಸೇನಾ ಮುಖಂಡ

★

"ಮುಸ್ಲೀಂ ಓಟು ಬೇಡ"

"ಮುಸ್ಲೀಮರು ಮೆರವಣಿಗೆ ತೆಗೆಯಲು ನಾನು ಅವಕಾಶ ಕೊಡುವುದಿಲ್ಲ. ಚುನಾವಣಾ ಆಯೋಗವು ನನ್ನ ಮೇಲೆ ಬೇಕಾದರೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಿ, ನನ್ನ ಮೇಲೆ 63 ಕ್ರಿಮಿನಲ್ ಮೊಕದ್ದಮೆಗಳಿವೆ. ನನಗೇನು ಹೆದರಿಯಿಲ್ಲ. ಅಲ್ಪಸಂಖ್ಯಾತರ ಒಂದೇ ಒಂದು ಓಟೂ ಇಲ್ಲದೇ ನಾನು ಚುನಾವಣೆ ಗೆಲ್ಲುತ್ತೇನೆ."

ಅನಂತಕುಮಾರ್ ಹೆಗಡೆ
ಬಿಜೆಪಿ ಸಂಸದ ಉತ್ತರಕನ್ನಡ ಕ್ಷೇತ



ತಿಮ್ಮಪ್ಪ ವಜ್ರಬಂಡಿ ಇನ್ನಿಲ್ಲ

ಎಸ್ಎಫ್ಐ ನೇತೃತ್ವದ ವಿದ್ಯಾರ್ಥಿ ಚಳುವಳಿಯ ಮೂಲಕ ಜನಪರ ಚಳುವಳಿ ಪ್ರವೇಶಿಸಿದ ಕಾಂ. ತಿಮ್ಮಪ್ಪ ವಜ್ರಬಂಡಿ ಅನಾರೋಗ್ಯಕ್ಕೆ ತುತ್ತಾಗಿ ಅಕಾಲಿಕವಾಗಿ ದುರಂತ ಸಾವನ್ನಪ್ಪಿದ ಸುದ್ದಿ ನಿಜಕ್ಕೂ ಅಘಾತಕಾರಿಯಾಗಿದೆ. ತಿಮ್ಮಪ್ಪ ವಜ್ರಬಂಡಿಯವರು ವೃತ್ತಿಯಿಂದ ಶಿಕ್ಷಕರಾಗಿ ಅದೇ ಕಾಲಕ್ಕೆ ಹಲವು ಜನ ಚಳುವಳಿಗಳ ಒಡನಾಡಿಯಾಗಿದ್ದರು. ಶಿಕ್ಷಕರ ಸಂಘಟನೆ, ಸರ್ಕಾರಿ ನೌಕರರ ಚಳುವಳಿ, ಯುವಜನ ಚಳುವಳಿ ಹೀಗೆ ಅವರು ತೊಡಗಿಸಿಕೊಂಡು ಶ್ರಮಿಸಿದ ಚಳುವಳಿಗಳು ಹಲವು. ಮಾರ್ಚ್ 10 ರಂದು ನಮ್ಮನ್ನು ಅಗಲಿದ ಸಂಗಾತಿಗೆ ಜನಶಕ್ತಿಯು ಶ್ರದ್ಧಾಂಜಲಿ ಸಲ್ಲಿಸುತ್ತದೆ.

- ಸಂ

ನಿಲ್ಲದ ರೈತರ ಆತ್ಮಹತ್ಯೆ - ತಗ್ಗದ ಬಿಕ್ಕಟ್ಟು ಕೃಷಿಯಲ್ಲಿ ಯು.ಪಿ.ಎ. ಫೇಲ್

ಮಾರ್ಕ್ಸ್ ಕಾರ್ಡ್ ಇಲ್ಲಿದೆ !

ಯು.ಪಿ.ಎ. ಸರ್ಕಾರ ಹಿಂದೆ ಕಂಡರಿಯದ ಅಗಾಧ ಕೃಷಿ ಸಂಕಟ ಮತ್ತು ಬಿಕ್ಕಟ್ಟಿನ ಹಿನ್ನೆಲೆಯಲ್ಲಿ 2004 ರಲ್ಲಿ ಅಧಿಕಾರ ವಹಿಸಿಕೊಂಡಿತ್ತು. ಅದು ಅಂಗೀಕರಿಸಿದ ರಾಷ್ಟ್ರೀಯ ಸಮಾನ ಕನಿಷ್ಟ ಕಾರ್ಯಕ್ರಮದ ಕೃಷಿ ಸಂಬಂಧಿತ ಅಂಶಗಳ ಬಗ್ಗೆ ಕೊಟ್ಟ ಆಶ್ವಾಸನೆಗಳನ್ನು ಜಾರಿ ಮಾಡುವಲ್ಲಿ ಅದು ಕಳೆದ ಐದು ವರ್ಷಗಳಲ್ಲಿ ಎಷ್ಟು ಸಫಲವಾಗಿದೆ ? ಸಫಲತೆಗಿಂತ ವೈಫಲ್ಯವೆಂದರೆ ಹೆಚ್ಚು ಸರಿಯಾದೀತು. ಎಲ್ಲಾ ಅಂಶಗಳನ್ನು ಗಮನಿಸಿದರೆ ಕೃಷಿಯಲ್ಲಿ ಯು.ಪಿ.ಎ. ಫೇಲ್ ಆಗಿದೆ ! ವಿವರವಾದ ಮಾರ್ಕ್ಸ್ ಕಾರ್ಡ್ ಇಲ್ಲಿದೆ. ಕನಿಷ್ಟ ಕಾರ್ಯಕ್ರಮದ ಆಶ್ವಾಸನೆ ಮತ್ತು ಯು.ಪಿ.ಎ. ವೈಫಲ್ಯದಿಂದ ಇಂದಿನ ಸ್ಥಿತಿ ಇಲ್ಲಿವೆ.

ಮುಂದುವರೆದ ರೈತರ ಆತ್ಮಹತ್ಯೆಗಳು : ದೇಶಕ್ಕೇ ನಾಚಿಕೆಗೇಡು

ಆಶ್ವಾಸನೆ 1 : ರೈತರ ಆತ್ಮಹತ್ಯೆಗಳನ್ನು ಕೊನೆಗಾಣಿಸುತ್ತೇವೆ"

ಇಂದಿನ ಸ್ಥಿತಿ:

ಯು.ಪಿ.ಎ. ಆಡಳಿತದ ಮೊದಲ ನಾಲ್ಕುವರ್ಷಗಳಲ್ಲೇ 69 ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡರು. ಅಂದರೆ ಪ್ರತೀ 30 ನಿಮಿಷಕ್ಕೆ ಒಬ್ಬ ರೈತನ ಆತ್ಮಹತ್ಯೆ ಆಯಿತು. ಮಹಿಳಾ ರೈತರ ಆತ್ಮಹತ್ಯೆಗಳು ಇದರಲ್ಲಿ ಸೇರಿಲ್ಲ. ಕಳೆದ ಆರು ವರ್ಷಗಳ ವಾರ್ಷಿಕ ಆತ್ಮಹತ್ಯೆ ಸಂಖ್ಯೆ ಅದರ ಹಿಂದಿನ ಅವಧಿಗಿಂತ ಹೆಚ್ಚು.

ರೈತರ ಆತ್ಮಹತ್ಯೆ ವ್ಯಾಪಕವಾಗಿದ್ದ ಪ್ರದೇಶಗಳಿಗೆ ಕೊಡಲಾದ ಅಬ್ಬರದ ಪ್ರಚಾರ ಪಡೆದ ಪ್ಯಾಕೇಜು ವಿದರ್ಭಕ್ಕೆ ಮಾತ್ರ ಸೀಮಿತವಾಗಿತ್ತು. ಹಲವು ಮಿತಿಗಳಿದ್ದ ಅದೂ ವಿಫಲವಾಗಿದೆ.

ರಿಜಲ್ಟ್ : ಯು.ಪಿ.ಎ. ಫೇಲ್

ಸಾಲದ ಶೂಲ ಮತ್ತು ವಿಫಲವಾದ ಸಾಲ ಮನ್ನಾ

ಆಶ್ವಾಸನೆ 2 :

ಗ್ರಾಮೀಣ ಸಹಕಾರೀ ಸಾಲ ವ್ಯವಸ್ಥೆ ಸುಧಾರಿಸುತ್ತೇವೆ. ಗ್ರಾಮೀಣ ಸಾಲವನ್ನು ಮುಂದಿನ ಮೂರು ವರ್ಷಗಳಲ್ಲಿ ಇಮ್ಮಡಿ ಮಾಡ್ತೇವೆ. ಸಣ್ಣ ರೈತರಿಗೆ ಬ್ಯಾಂಕಿನ ಸಾಲದ ಪ್ರಮಾಣವನ್ನು ಹೆಚ್ಚಿಸ್ತೇವೆ.


ರೈತರ ಸಾಲದ ಮತ್ತು ಹೆಚ್ಚಿನ ಬಡ್ಡಿ ದರದ ಹೊರೆ ಕಡಿಮೆ ಮಾಡುತ್ತೇವೆ. ಬೆಳೆ ಮತ್ತು ಪಶು ವಿಮೆ ಪರಿಣಾಮಕಾರಿ ಮಾಡುತ್ತೇವೆ.

ಇಂದಿನ ಸ್ಥಿತಿ:

ಕಳೆದ ರಾಷ್ಟ್ರೀಯ ಸಮೀಕ್ಷೆ (2003) ಪ್ರಕಾರ ಶೇ. 48.6 ರೈತ ಕುಟುಂಬಗಳು ಸಾಲದ ಹೊರೆಯಿಂದ ಬಳಲುತ್ತಿವೆ. 1991 ರಲ್ಲಿ ಇದು ಶೇ. 26 ಇತ್ತು. ಕಳೆದ ಐದು ವರ್ಷಗಳಲ್ಲಿ ಸಾಲದ ಹೊರೆ ಇನ್ನೂ ಹೆಚ್ಚಿದೆ.

ಯು.ಪಿ.ಎ. ಆಡಳಿತದ ನಾಲ್ಕನೇ ವರ್ಷದಲ್ಲಿ ಬಂದ ಸಾಲ ಮನ್ನಾ ಯೋಜನೆ ವಿಳಂಬ ಮತ್ತು ಹಲವು ಮಿತಿಗಳಿಂದ ವಿಫಲವಾಯಿತು. ಬ್ಯಾಂಕು ಸಾಲ ಪಡೆಯದ ಶೇ.83.8 ರಷ್ಟು ರೈತ ಕುಟುಂಬಗಳಿಗೆ ಸಾಲ ಕೊಡುವ ಸಾಹುಕಾರರ ಮಾರ್ವಾಡಿ ಮುಂತಾದ ಖಾಸಗಿ ಸಾಲವನ್ನು ಅದು ಮನ್ನಾ ಮಾಡಲಿಲ್ಲ. ಎರಡು ಹೆಕ್ಟೇರಿನ ಮಿತಿಯಿಂದಾಗಿ ಒಣ ಮತ್ತು ಅರೆ-ಒಣ ಪ್ರದೇಶಗಳ ದೊಡ್ಡ ಪ್ರಮಾಣದ ರೈತರ ಸಾಲ ಮನ್ನಾ ಆಗಲಿಲ್ಲ. ಒಂದು ಕಂತು ಕಟ್ಟಿದರೂ ಮನ್ನಾ ನಿರಾಕರಿಸುವ ಮೂಲಕ ಹಲವು ಪ್ರಾಮಾಣಿಕ ರೈತರು ಸಾಲ ಮನ್ನಾದಿಂದ ವಂಚಿತರಾದರು.

ಬಡ್ಡಿ ದರವನ್ನು ಶೇ. 7 ರಿಂದ ಶೇ. 4 ಕ್ಕೆ ಇಳಿಸುವ, ರಾಷ್ಟ್ರೀಯ ಕೃಷಿ ವಿಮೆ ಸ್ಕೀಮ್ ಮೂಲಕ ಎಲ್ಲಾ ಬೆಳೆಗಳಿಗೆ ಸಾರ್ವತ್ರಿಕ ವಿಮೆ ಜಾರಿ ಮಾಡಲು - ಸ್ವಾಮಿನಾಥನ್ ಕೃಷಿ ಕಮಿಶನ್ ಶಿಫಾರಸುಗಳನ್ನು ಜಾರಿ ಮಾಡುವುದು ದೂರ ಉಳಿಯಿತು. ಅಂಗೀಕರಿಸಲೂ ಯು.ಪಿ.ಎ. ಸರ್ಕಾರ ನಿರಾಕರಿಸಿತು.


ರೈತ ಕುಟುಂಬವೊಂದರ ಸಾಮೂಹಿಕ ಆತ್ಮಹತ್ಯೆ

ರಿಜಲ್ಟ್ : ಯು.ಪಿ.ಎ. ಫೇಲ್

ಕೃಷಿ ಬೆಳವಣಿಗೆ ಮತ್ತು ಹೂಡಿಕೆ

ಆಶ್ವಾಸನೆ 3 :

ಕೃಷಿ ಸಂಶೋಧನೆ, ಪ್ರಸಾರ, ಗ್ರಾಮೀಣ ಮೂಲ ಸೌಕರ್ಯ ಮತ್ತು ನೀರಾವರಿಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಗಮನಾರ್ಹವಾಗಿ ಏರಿಸ್ತೇವೆ. ನೀರಾವರಿಗೆ ಅತ್ಯಂತ ಹೆಚ್ಚಿನ ಆದ್ಯತೆ ಕೊಡ್ತೇವೆ.

ಒಣ ಮತ್ತು ಅರೆ-ಒಣ ಪ್ರದೇಶಗಳಲ್ಲಿ ಕೃಷಿಗೆ ವಿಶೇಷ ಕಾರ್ಯಕ್ರಮ ಮಾಡ್ತೇವೆ. ವಾಟರ್ ಶೆಡ್ ಮತ್ತು ವೇಸ್ಟ್ ಲ್ಯಾಂಡ್ ಕಾರ್ಯಕ್ರಮ ದೊಡ್ಡ ಪ್ರಮಾಣದಲ್ಲಿ ಜಾರಿಗೆ ತರ್ತೇವೆ.

ಇಂದಿನ ಸ್ಥಿತಿ:

ಕೃಷಿಗೆ ಹನ್ನೊಂದನೇ ಪಂಚವಾರ್ಷಿ ಯೋಜನೆಯಲ್ಲಿ ಪ್ರತೀ ಜಿಲ್ಲೆಗೆ ಮುಂದಿನ ಐ ವರ್ಷಗಳ ಕಾಲ ಪ್ರತೀ ವರ್ಷ 10 ಕೋಟಿ. ಬಜೆ ನಲ್ಲಿ ಕೃಷಿ ಖಾತೆಗೆ ಕೊಟ್ಟ ಹಣ ಕೇವಲ ಒ ಖರ್ಚಿನ ಶೇ. 1.12. ಒಟ್ಟು ಉತ್ಪಾದನೆ (ಜಿ.ಡಿ. ಯ ಶೇ. 0.18. ಕೃಷಿ ಖಾತೆಯ ಹೊಸ ಬಂಡವಾ ಹೂಡಿಕೆ 2001-02 ರಲ್ಲಿ ಒಟ್ಟು ಖಚಿ ಪ್ರಮಾಣವಾಗಿ ಶೇ. 10.3 ರಿಂದ 2008-09 ಶೇ. 2.62 ಇಳಿದಿದೆ. ಇದು ಏನಕ್ಕೂ ಸಾಲ ಹೂಡಿಕೆ.

ಕೃಷಿಯಲ್ಲಿ ಹೂಡಿಕೆ 7 ನೇ ಪಂಚವಾರ್ಷಿ ಯೋಜನೆಯಲ್ಲಿ ಶೇ. 5.8 ರಿಂದ 11 ಯೋಜನೆಯಲ್ಲಿ ಶೇ. 3.7 ಕ್ಕೆ ಇಳಿದಿದೆ.

ಒಣ ಪ್ರದೇಶಗಳ ಕೃಷಿ, ವಾಟರ್ ಶೆಡ್ ಮ ವೇಸ್ಟ್ ಲ್ಯಾಂಡ್ ಕಾರ್ಯಕ್ರಮಗಳು ಬರಿ ಘೋಷಣೆಗಳಾಗಿ ಉಳಿದಿವೆ.

ಕೃಷಿ ಸಂಶೋಧನೆಯನ್ನು ಬಲಗೊಳಿಸುವ ಬದ ಇಂಡೋ-ಅಮೆರಿಕನ್ ಜ್ಞಾನ 'ಕಾರ್ಯಕ್ರಮ ಹೆಸರಲ್ಲಿ ದೈತ್ಯ ಜಾಗತಿಕ ಕೃಷಿ ಬ.ಕ. (ಬಹುರಾಷ್ಟ್ರೀ ಕಂಪನಿ)ಗಳಿಗೆ ನಮ್ಮ ಕೃಷಿ ಸಂಶೋಧನಾ ಸಂಸ್ಥೆಗಳ ತೆರೆಯಲಾಗಿದೆ. ಈ ಕಾರ್ಯಕ್ರಮದ ಬೋರ್ಡ್ ಮೊನ್ಸಾಂಟೊ ಮತ್ತು ವಾಲ್-ಮಾರ್ಟ್ ನಂತ ಕಂಪನಿಗಳು ಇವೆ. ಇವರು ನಮ್ಮ ಕೃ ಸಂಶೋಧನೆಯನ್ನು ಯಾವ ದಿಕ್ಕಿನಲ್ಲಿ ಒಯ್ತಾರೆ ಅ ಹೇಳಬೇಕಿಲ್ಲ.

ರಿಜಲ್ಟ್ : ಯು.ಪಿ.ಎ. ಫೇಲ್

ಕೃಷಿ ಬೆಳೆಗಳು ಮತ್ತು ಖರೀದಿ

ಆಶ್ವಾಸನೆ 4 :

ಆಮದಿನಿಂದ ಮತ್ತು ಜಾಗತಿಕ ಮಾರುಕಟ್ಟೆಯ ಬೆಲೆಗಳ ಕುಸಿತದಿಂದ ಎಲ್ಲಾ ರೈತರಿಗೆ ಪರಿಣಾಮಕಾ

ಎಡ ಸರ್ಕಾರಗಳು ಫಸ್ಟ್ ಕ್ಲಾಸ್ ! ಮಾರ್ಕ್ಸ್ ಕಾರ್ಡ್ ಇಲ್ಲಿದೆ

ಯು.ಪಿ.ಎ. ಸರ್ಕಾರದ ಇಂತಹ ಅಗಾಧ ವೈಫಲ್ಯತೆ, ಅವುಗಳ ಜನ-ವಿರೋಧೀ ನೀತಿಗಳ ಮಿತಿ ಮತ್ತು ಸಂಪನ್ಮೂಲಗಳ ಕೊರತೆಯ ನಡುವೆಯೂ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳ ಸಿ.ಪಿ.ಐ.(ಎಂ) ನಾಯಕತ್ವದ ಎಡ ಸರ್ಕಾರಗಳು ರೈತ ಮತ್ತು ಕೃಷಿ ಕೂಲಿಕಾರರ ಹಿತ ಕಾಯುವುದರಲ್ಲಿ ಮತ್ತು ಕೃಷಿಯ ಸಂಕಟ ಕಡಿಮೆ ಮಾಡುವುದರಲ್ಲಿ ಸಫಲವಾಗಿವೆ. ಇಲ್ಲಿದೆ ಎಡ ಸರ್ಕಾರಗಳ ಮಾರ್ಕ್ಸ್ ಕಾರ್ಡ್:

ಕೇರಳದ ಎಲ್.ಡಿ.ಎಫ್. ಸರ್ಕಾರದ ವಿಶೇಷ ಕ್ರಮಗಳ ನಂತರ ರೈತರ ಆತ್ಮಹತ್ಯೆಗಳು ಹೆಚ್ಚು ಕಡಿಮೆ ನಿಂತವು. ಸಾಲ ಪರಿಹಾರ ಕಮಿಶನ್ ಸ್ಥಾಪನೆ, ಸಂಕಟಕ್ಕೊಳಗಾದ ಜಿಲ್ಲೆಗಳಲ್ಲಿ ಕೃಷಿ ಸಾಲದ ಬಡ್ಡಿ ದರವನ್ನು ಶೇ. 2 ಕ್ಕೆ ಇಳಿಸಿದ್ದು, ವೈನಾಡ್ ಜಿಲ್ಲೆಯಲ್ಲಿ ರೂ. 25 ಸಾವಿರದ ವರೆಗೆ ಎಲ್ಲಾ ಸಾಲಗಳನ್ನು ಮನ್ನಾ ಮಾಡಿದ್ದು - ಇಂತಹ ಕ್ರಮಗಳು.

60 ಸಾವಿರ ಭೂ ಹೀನ ಬಡವರಿಗೆ ಭೂ ಪಟ್ಟಾ ನೀಡಲಾಯಿತು. 3300 ಆದಿವಾಸಿ ಕುಟುಂಬಗಳೂ ಸೇರಿದ್ದವು. ಆಕ್ರಮಣಕ್ಕೆ ಒಳಗಾದ 12 ಸಾವಿರ ಎಕ್ರೆ ಭೂಮಿ ವಶ ಪಡಿಸಿಕೊಳ್ಳಲಾಯಿತು.

ಕೇರಳ ಪೆನ್ಶನ್ ಸ್ಕೀಮ್ 5.6 ಲಕ್ಷ ಕೃಷಿ ಕೂಲಿಕಾರರಿಗೆ ತಿಂಗಳ ರೂ. 250 ಪೆನ್ಶನ್ ಒದಗಿಸುತ್ತದೆ. 16 ಲಕ್ಷ ಕೃಷಿ ಕೂಲಿಕಾರರು ಕೇರಳ ಕೃಷಿ ಕೂಲಿಕಾರರ ಯೋಗಕ್ಷೇಮ ಬೋರ್ಡ್ ಜತೆ ರಿಜಿಸ್ಟರ್ ಆಗಿದ್ದಾರೆ.

ಕೇರಳದ ಭತ್ತದ ಬೆಂಬಲ ಬೆಲೆ - ಕ್ವಿಂಟಲ್ ಗೆ ರೂ. 1100 - ದೇಶದಲ್ಲೇ ಅತಿ ಹೆಚ್ಚು.

ಪಶ್ಚಿಮ ಬಂಗಾಳದ ಕೃಷಿ ಬೆಳವಣಿಗೆ ದರ ಶೇ. 5.14 ದೇಶದ ಸರಾಸರಿ ಶೇ. 4.5 ಕ್ಕಿಂತ ಹೆಚ್ಚು.

ಪಶ್ಚಿಮ ಬಂಗಾಳ ದೇಶದ ಭೂಸುಧಾರಣೆಯ ಫಲಾನುಭವಿಗಳಲ್ಲಿ ಸಿಂಹಪಾಲು (ಶೇ. 54.5, 29.7 ಲಕ್ಷ ಜನ) ಪಡೆದಿದೆ.

ದೇಶದಲ್ಲಿ 1990 ರ ದಶಕದಲ್ಲಿ ನಡೆದ ಭೂಸ್ವಾಧೀನ ಪೂರ್ಣವಾಗಿ ಮತ್ತು ಕೃಷಿ ಭೂ ಮರು ಹಂಚಿಕೆಯಲ್ಲಿ ಶೇ. 40 ಪಶ್ಚಿಮ ಬಂಗಾಳದಲ್ಲಿ ಆಗಿದೆ. 2006-07 ರಲ್ಲಿ 30 ಸಾವಿರ ಎಕ್ರೆ ಭೂಮಿಯನ್ನು ಭೂಹೀನರಲ್ಲಿ ಹಂಚಿಕೆ ಮಾಡಲಾಯಿತು.

ಪಶ್ಚಿಮ ಬಂಗಾಳದ ಭೂಸುಧಾರಣೆ ಕಾರ್ಯಕ್ರಮದ ಎಲ್ಲಾ ಫಲಾನುಭವಿಗಳ ಸಂಖ್ಯೆ 50 ಲಕ್ಷಕ್ಕೂ ಹೆಚ್ಚು.

ಆಹಾರ ಧಾನ್ಯಗಳ ಉತ್ಪಾದನೆಯ ಬೆಳವಣಿಗೆ ದರದಲ್ಲಿ ಪಶ್ಚಿಮ ಬಂಗಾಳ (ಶೇ. 6) 17 ದೊಡ್ಡ ರಾಜ್ಯಗಳಲ್ಲಿ ಮೊದಲ ಸ್ಥಾನದಲ್ಲಿದೆ. ಭತ್ತ, ತರಕಾರಿಗಳು ಮತ್ತು ಮೀನು ಉತ್ಪಾದನೆಯಲ್ಲಿ ಅದು ಮೊದಲ ಸ್ಥಾನದಲ್ಲಿದೆ.

ತ್ರಿಪುರಾ ಅರಣ್ಯ ಪ್ರದೇಶಗಳಿಂದ ಯಾವುದೇ ಕಾರಣದಿಂದ ಆದಿವಾಸಿಗಳ ಉಚ್ಚಾಟನೆ ಆಗದಂತೆ ತಡೆಯಲಾಗಿದೆ. ಆದಿವಾಸಿಗಳ ಭೂಒಡೆತನ ರಕ್ಷಿಸಲಾಗಿದೆ ಮತ್ತು ಅವರಿಗೆ ಕೃಷಿಯಲ್ಲಿ ವಿಶೇಷ ತರಬೇತಿ ನೀಡಲಾಗಿದೆ. 15 ಸಾವಿರ ಆದಿವಾಸಿ ಕುಟುಂಬಗಳಿಗೆ ಮನೆ ಒದಗಿಸಲಾಗಿದೆ.

ಸಿ.ಪಿ.ಐ.(ಎಂ)ಗೆ ನಿಮ್ಮ ಮತ-ಬದಲಿ ಜಾತ್ಯತೀತ ಸರ್ಕಾರಕ್ಕಾಗಿ-ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಿ

→

ಣೆ ಕೊಡ್ತೇವೆ.

ಡೀ ದೇಶದ ರೈತರಿಗೆ ನ್ಯಾಯಯುತೆ ಮತ್ತು ಭದಾಯಕ ಬೆಲೆಗಳು ಸಿಗುವಂತೆ ಮಾಡ್ತೇವೆ. ಡ ಮತ್ತು ಹಿಂದುಳಿದ ಜಿಲ್ಲೆ-ಪ್ರದೇಶಗಳಿಗೆ ಕೃಷಿ ರೀದಿ ಮತ್ತು ಮಾರಾಟದ ಸರ್ಕಾರಿ ಸಂಘಟನೆಗಳು ಶೇಷ ಗಮನ ಕೊಡುತ್ತವೆ. ವ್ಯಾಪಾರದ ಷರತ್ತುಗಳು ಗೆ ಅನುಕೂಲವಾಗಿರುವಂತೆ ನೋಡಿಕೊಳ್ತೇವೆ. **ಬ್ಬು ರೈತರು ಸೇರಿದಂತೆ ಎಲ್ಲಾ ರೈತರ ಬಾಕಿ ಗನೇ ತೀರಿಸ್ತೇವೆ.**

ಇಂದಿನ ಸ್ಥಿತಿ:

ಕೃಷಿ ಆಮದಿನ ಮೇಲೆ ಪ್ರಮಾಣಾತ್ಮಕ ನಿರ್ಬಂಧ ತ್ತು ಆಮದು ಸುಂಕ ಹೇರಬೇಕು. ಬೆಲೆ ಸ್ಥಿರೀಕರಣ ಧಿ ಸ್ಥಾಪಿಸಬೇಕು, ಕನಿಷ್ಟ ಬೆಂಬಲ ಬೆಲೆ ಬೆಳೆಯ ರ್ಚಿನ ಕನಿಷ್ಟ ಒಂದು ವರೆ ಪಟ್ಟು ಇರಬೇಕು - ಂಬ ಸ್ವಾಮಿನಾಥನ್ ಆಯೋಗದ ಶಿಫಾರಸನ್ನು ರ್ಲಕ್ಷಿಸಿದ್ದರಿಂದ ರೈತರು ಜಾಗತಿಕ ಮತ್ತು ಸ್ಥಳೀಯ ಾರುಕಟ್ಟೆಯ ಬೆಲೆಗಳ ಏರಿಳಿತಕ್ಕೆ ಪೂರ್ಣ ತ್ತಿದ್ದಾರೆ.

ಒಂದು ಅಧ್ಯಯನ ಹೇಳಿದಂತೆ "ಕಳೆದ ಹತ್ತು ರ್ಷಗಳಲ್ಲಿ ಒಂದೇ ಒಂದು ಬೆಳೆಗೆ ಬೆಂಬಲ ಬೆಲೆ ೈತರ ಖರ್ಚಿನಷ್ಟೂ ಇರಲಿಲ್ಲ; ..ಎಲ್ಲಾ ಬೆಳೆಗಳೂ ಷ್ಟದಲ್ಲೇ ಬೆಳೆಯಲಾಗುತ್ತಿದೆ. ನಷ್ಟದ ಪ್ರಮಾಣ . 38 ರಿಂದ ಶೆ. 50 ರಷ್ಟಿದೆ. ಕಬ್ಬು ಬೆಲೆಯ ನಷ್ಟ ಮಾತ್ರ ಶೇ. 12 ರಷ್ಟಿದೆ."

ಬಡ ಮತ್ತು ಹಿಂದುಳಿದ ಜಿಲ್ಲೆ-ಪ್ರದೇಶಗಳಿಗೆ ೃಷಿ ಖರೀದಿಯ ವಿಸ್ತಾರ ಆಗದೆ ರೈತರು ್ಯಾಪಾರಿಗಳಿಗೆ ಅವರು ಕೇಳಿದ ಬೆಲೆಗೆ ಮಾರಿಕೊಳ್ಳುವ ಪರಿಸ್ಥಿತಿ ಮುಂದುವರೆದಿದೆ.

ಭತ್ತ ಮತ್ತು ಗೋದಿಗೆ ಬೆಳೆಯ ಖರ್ಚಿನ ಕನಿಷ್ಟ ಂದು ವರೆ ಪಟ್ಟು ಕ್ವಿಂಟಾಲ್ ಗೆ ರೂ. 1500 ಇದೆ. ಆದರೆ ಬೆಂಬಲ ಬೆಲೆ - ಭತ್ತಕ್ಕೆ ರೂ. 900, ೋಧಿಗೆ ರೂ. 1050. 2006-07 ರಲ್ಲಿ ಬೆಂಬಲ ಬೆಲೆ ಕ್ವಿಂಟಾಲ್ ಗೆ ರೂ. 850 ಇದ್ದಾಗ, ಸರ್ಕಾರ ರೂ. 1400-1600 ಬೆಲೆಯಲ್ಲಿ ಆಮದು ಮಾಡಿತು.

ಕಬ್ಬು ಬೆಲೆ ಕುಸಿತದಿಂದ ಕಬ್ಬು ಬೆಳೆ ಬೆಳೆಯುವ ಗಳು ಕಡಿಮೆಯಾಗಿವೆ. ಸರ್ಕಾರಿ ಸಮಿತಿ ಶಿಫಾರಸು ಮಾಡಿದ ಕ್ವಿಂಟಾಲ್ ಗೆ ರೂ. 125 ಬದಲು ರೂ. 81 ಮುಂದುವರೆದಿರುವುದು ಇದಕ್ಕೆ ಕಾರಣ. ಫೆಬ್ರುವರಿಯಲ್ಲೇ ಸಕ್ಕರೆ ಮಿಲ್ಲುಗಳು ಮುಚ್ಚಿವೆ.

ಜಾಗತಿಕ ಮಾರುಕಟ್ಟೆಯ ಬೆಲೆಗಳ ಏರಿಳಿತದಿಂದ ಕಾಫಿ ಮುಂತಾದ ಪ್ಲಾಂಟೇಶನ್ ಬೆಳೆಗಳು ಮತ್ತು ಸಂಬಾರು ಪದಾರ್ಥಗಳ ಬೆಳೆಗಾರರನ್ನು ರಕ್ಷಿಸುವ ಕೆಲಸವನ್ನು ಇಂತಹ ಬೆಳೆಗಳ ಬೋರ್ಡುಗಳು ಮಾಡಲಿಲ್ಲ. ಬೋರ್ಡು ಇಲ್ಲದ ಬೆಳೆಗಳಿಗೆ ಬೋರ್ಡು ರಚಿಸುವ ಸಲಹೆಯನ್ನು ನಿರ್ಲಕ್ಷಿಸಲಾಗಿದೆ.

ರಿಜಲ್ಟ್ : ಯು.ಪಿ.ಎ. ಫೇಲ್

ಕೃಷಿ ಉತ್ಪಾದನೆ ವೆಚ್ಚ

ಆಶ್ವಾಸನೆ 5 :

ರೈತರ ಆದಾಯ ಕಡಿತ ಮಾಡುವ ಎಲ್ಲಾ ನಿಯಂತ್ರಣಗಳನ್ನು ತೆಗಿತೇವೆ. ಕೃಷಿ ಒಳಹರಿವು ಕೊಡುವ ಸಂಘಟನೆಗಳ ಕಾರ್ಯದಲ್ಲಿ ರೈತರ ಮಾತು ನಡೆಯುವಂತೆ ಮಾಡ್ತೇವೆ.

ಇಂದಿನ ಸ್ಥಿತಿ:

ಯೂರಿಯಾ ಬೆಲೆ ನಾಲ್ಕು ಪಟ್ಟು, DAP ಬೆಲೆ ಐದು ಪಟ್ಟು, AID ಬೆಲೆ ನಾಲ್ಕು ಪಟ್ಟು ಆಗಿದೆ. ಕೃಷಿ ಉತ್ಪಾದನೆ ವೆಚ್ಚ ಕಳೆದ ಐದು ವರ್ಷಗಳಲ್ಲಿ ಐದು ಪಟ್ಟು ಆಗಿದೆ.

ಎಡ ಪಕ್ಷಗಳ ಸತತ ವಿರೋಧ ಇಲ್ಲದಿದ್ದರೆ ಬೀಜ ಮಸೂದೆ ಕಾನೂನು ಆಗಿ ದೈತ್ಯ ಕಂಪನಿಗಳ ಸೊತ್ತು ಆಗಿ ಅದರ ಬೆಲೆಗಳೂ ಗಗನಕ್ಕೆ ಏರುತ್ತಿದ್ದವು.

ರೈತರು ಬಳಸುವ ಡಿಸೀಲ್‌ಗಿಂತ ಒಂದು ಹಂತದಲ್ಲಿ (ಎಡ ಪಕ್ಷಗಳ ತೀವ್ರ ಒತ್ತಡದಿಂದ ಸಣ್ಣ ಬೆಲೆ ಕಡಿತ ಮಾಡುವ ಮೊದಲು) ವಿಮಾನದ ವಿಶೇಷ ತೈಲದ ಬೆಲೆ ಅದಕ್ಕೆ ಕೊಟ್ಟ ಸಬ್ಸಿಡಿಯಿಂದಾಗಿ ಕಡಿಮೆಯಿತ್ತು!

ಆಹಾರ ಕಾಳುಗಳ ತಲಾ ಉತ್ಪಾದನೆ 1995 ರಲ್ಲಿ 192 ಕೆ.ಜಿ.ಯಿಂದ 174 ಕ್ಕೆ ಇಳಿದಿದೆ. ಬೇಳೆಗಳ ತಲಾ ಉತ್ಪಾದನೆ 1995 ರಲ್ಲಿ 15 ಕೆ.ಜಿ.ಯಿಂದ 12 ಕ್ಕೆ ಇಳಿದಿದೆ.

ರಿಜಲ್ಟ್ : ಯು.ಪಿ.ಎ. ಫೇಲ್

ಭೂರಹಿತ ಬಡವರು

ಆಶ್ವಾಸನೆ 6 :

ಭೂರಹಿತರಿಗೆ ಭೂಮಿ ಕೊಡ್ತೇವೆ. ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ ಕಾನೂನು ಪೂರ್ಣವಾಗಿ ಜಾರಿ ಮಾಡ್ತೇವೆ. ಕೃಷಿ ಕೂಲಿಕಾರರ ರಕ್ಷಣೆಗೆ ಸಮಗ್ರ ಕಾನೂನು ತರ್ತೇವೆ. ರೆವಿನ್ಯೂ ಆಡಳಿತವನ್ನು ಆಧುನಿಕೀಕರಿಸಿ ಭೂ ಒಡೆತನದ ಸ್ಪಷ್ಟ ಚಿತ್ರಣ ದೊರೆಯುವಂತೆ ಮಾಡ್ತೇವೆ.

ಇಂದಿನ ಸ್ಥಿತಿ:

2003 ರ ಸಮೀಕ್ಷೆ ಶೇ. 32 ಕುಟುಂಬಗಳು ಭೂರಹಿತವಾಗಿವೆ ಎಂದಿದೆ. 1992 ರ ಸಮೀಕ್ಷೆಯಲ್ಲಿ ಇದು ಶೇ. 22 ಇತ್ತು. ಕೃಷಿ ಕ್ಷೇತ್ರದ ಸಂಕಟಗಳಿಂದ ಸಣ್ಣ ಮತ್ತು ಬಡ ರೈತರು ಭೂಮಿ ಮಾರುವಂತಾಗಿದೆ. ಭೂ ಒಡೆತನದ ಮಿತಿಯ ಕಾನೂನುಗಳ ಜಾರಿಯಲ್ಲಿ ಯಾವುದೇ ಪ್ರಗತಿ ಇಲ್ಲ. ಸಾಲದ್ದಕ್ಕೆ ಕಾನೂನುಗಳಲ್ಲಿ ಇದ್ದ ಭೂ ಒಡೆತನದ ಮಿತಿಯನ್ನು ಮತ್ತು ನಿರ್ಬಂಧಗಳನ್ನು ಇನ್ನಷ್ಟು ಸಡಿಲಸಲಾಗುತ್ತಿದೆ.

ಕೊನೆಯ ದಿನ ಮಾರುಕಟ್ಟೆ-ಆಧಾರಿತ ಭೂ-ಸ್ವಾಧೀನ ಕಾನೂನು ತರುವ ಹುನ್ನಾರ ಎಡ ಪಕ್ಷಗಳ ಪ್ರತಿರೋಧದಿಂದ ವಿಫಲವಾಯಿತು. ಈ ಕಾನೂನು ಬಂದರೆ ಭೂ ಬಳಕೆ ಬಗ್ಗೆ ಜನರ ಸರ್ಕಾರಗಳ ಹಕ್ಕು, ಭೂ-ಸ್ವಾಧೀನಕ್ಕೆ ಪರಿಹಾರ, ಪುನರ್ವಸತಿ ಮುಂತಾದ ಹಕ್ಕುಗಳನ್ನು ಇಲ್ಲವಾಗಿಸುತ್ತಿತ್ತು.

ಕೃಷಿಯಲ್ಲಿ ಕೆಲಸದ ಲಭ್ಯತೆ 80 ರ ದಶಕದಲ್ಲಿ ಸರಾಸರಿ ವಾರ್ಷಿಕ ತಲಾ 122 ದಿನಗಳಿಂದ, 80 ರ ದಶಕದಲ್ಲಿ 100 ದಿನಗಳಿಗೆ ಇಳಿದು, ಈಗ 57 ದಿನಗಳಿಗೆ ಕುಸಿದಿದೆ.

2003 ರ ಸಮೀಕ್ಷೆ ಪ್ರಕಾರ 80.6 ಕೋಟಿ ಜನ ರೂ. 20 ದಿನದ ಖರ್ಚಿನಲ್ಲಿ ಬದುಕುತ್ತಿದ್ದಾರೆ. 23.9 ಕೋಟಿ ಜನ ರೂ. 9 ದಿನದ ಖರ್ಚಿನಲ್ಲಿ ಬದುಕುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಭೂರಹಿತ ಕೃಷಿ ಕೂಲಿಕಾರರು.

ಕನಿಷ್ಟ ಕೂಲಿ, ಮನೆ ಸೈಟು ಕೊಡುವ, ಭೂ ಸುಧಾರಣೆ ಜಾರಿ ಮಾಡುವ ಕೃಷಿ ಕೂಲಿಕಾರರ ಬಗ್ಗೆ ಸಮಗ್ರ ಕಾನೂನು ರಚಿಸಬೇಕು, ಆಹಾರ ಆಮದಿನ ಮೇಲೆ ಆಧಾರಿತ ದೇಶದ ಆಹಾರ ಭದ್ರತೆಯ ನೀತಿ ಅನುಸರಿಸಬಾರದು ಎಂಬ ಸ್ವಾಮಿನಾಥನ್ ಕಮಿಶನ್ ಶಿಫಾರಸುಗಳನ್ನೂ ಸರ್ಕಾರ ನಿರ್ಲಕ್ಷಿಸಿದೆ.

ರಿಜಲ್ಟ್ : ಯು.ಪಿ.ಎ. ಫೇಲ್

ಉದ್ಯೋಗ ಗ್ಯಾರಂಟಿ ಕಾನೂನು

ಆಶ್ವಾಸನೆ 7 : ಗ್ರಾಮೀಣ ಪ್ರದೇಶದ ಬಡವರಿಗೆ ಉದ್ಯೋಗ ಕೊಡುವ ಯೋಜನೆ ಮಾಡ್ತೇವೆ.

ಇಂದಿನ ಸ್ಥಿತಿ:

ಕಾಂಗ್ರೆಸ್ ರೇಗಾ ಕಾನೂನು ತನ್ನ ಸಾಧನೆ ಅಂತ ಹೇಳಿಕೊಳ್ಳುತ್ತಿದೆ. ನಿಜವಾಗಿಯೂ ಕಾಂಗ್ರೆಸ್‌ನ ಸೀಮಿತ ಉದ್ದೇಶದ ಅರೆಮನಸ್ಸಿನ ದುರ್ಬಲ ಕರಡನ್ನು ಎಡ ಪಕ್ಷಗಳು ಮತ್ತು ಈ ಬಗ್ಗೆ ಕಾಳಜಿ ವಹಿಸಿದ ಹಲವು ಸಂಘಟನೆಗಳು ದೊಡ್ಡ ರೀತಿಯಲ್ಲಿ ಬದಲಾಯಿಸಿದವು. ರೇಗಾದ ಈ ಕೆಳಗಿನ ಅಂಶಗಳು ಸಿ.ಪಿ.ಐ.(ಎಂ) ನ ಸಾಧನೆ :

- ■ ಬಿ.ಪಿ.ಎಲ್ (ಸರ್ಕಾರದ ಬಡತನದ ರೇಖೆ ಕೆಳಗಿರುವವರು) ಕುಟುಂಬಗಳಿಗೆ ಮಾತ್ರ ಇದ್ದದ್ದನ್ನು ಸಾರ್ವತ್ರಿಕಗೊಳಿಸಿದ್ದು
- ■ ಪೂರ್ಣ ಗ್ರಾಮೀಣ ಭಾರತಕ್ಕೆ ಸಮಯಬದ್ಧ ವಿಸ್ತರಣೆ; 'ಸ್ವಿಚ್ ಆಫ್' ಮಾಡಲಾಗದ ಗ್ಯಾರಂಟಿ
- ■ ಎಲ್ಲ ಸಂದರ್ಭದಲ್ಲಿ ಕನಿಷ್ಟ ಕೂಲಿ; ಪರಿಸ್ಥಿತಿ ನೋಡಿಕೊಂಡು ಕೆಲಸದ ನಿಗದಿ
- ■ ಕೇಂದ್ರ ಸರ್ಕಾರದಿಂದ ಯೋಜನೆಯ ದೊಡ್ಡ ಭಾಗದ ಹಣ ಒದಗಿಸುವಿಕೆ
- ■ ಅರ್ಧ ಹಣ ಪಂಚಾಯತ್‌ಗಳ ಮೂಲಕ

ಯೋಜನೆಯ ಕಾಮಗಾರಿಗಳ ಪಟ್ಟಿಯಲ್ಲಿ ವಿಕೇಂದ್ರೀಕರಣ ಮತ್ತು ಆಯ್ಕೆಗೆ ಅವಕಾಶ

ಐದು ಅಥವಾ ಹೆಚ್ಚು ಮಹಿಳೆಯರು ಇದ್ದಲ್ಲಿ ಶಿಶುಪಾಲನೆ (ಕ್ರೆಶ್) ಸೌಲಭ್ಯ

ಕಡ್ಡಾಯ ನಿರುದ್ಯೋಗ ಅಲೋವೆನ್ಸ್ ಪಾವತಿ

ಕಾನೂನು ಮಂಜೂರು ಆದ ನಂತರ ಸರ್ಕಾರ ಯೋಜನೆಯ ವೆಚ್ಚ ಕಡಿತ ಮಾಡಲು, ಕಾರ್ಮಿಕರ ಪಾಲು ಕಡಿಮೆ ಮಾಡಲು ಪ್ರಯತ್ನ ಮಾಡಿತು.

2007-08 ರಲ್ಲಿ ಯೋಜನೆಯನ್ನು 330 ಜಿಲ್ಲೆಗಳಿಂದ 596 ಜಿಲ್ಲೆಗಳಿಗೆ ವಿಸ್ತರಿಸಿದರೂ ಯೋಜನಾ ನಿಧಿ 12 ಸಾವಿರ ಕೋಟಿಯಿಂದ 14.4 ಸಾವಿರ ಕೋಟಿಗೆ ಮಾತ್ರ ಏರಿತು.

ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಕನಿಷ್ಟ ಕೂಲಿ ಏರಿಸದಂತೆ ತಾಕೀತು ಮಾಡಿ ಪತ್ರ ಬರೆಯಿತು.

ಐ.ಎಲ್.ಓ. ನಿಯಮಗಳನ್ನು ಉಲ್ಲಂಘಿಸಿ ದಿನದ ಕೆಲಸವನ್ನು 7 ರಿಂದ 9 ಗಂಟೆಗೆ ಏರಿಸಿತು.

ಕಾರ್ಮಿಕ-ಪರವಾದ ಬದಲಾವಣೆಗಳನ್ನು ಮಾಡಿದ ರಾಜ್ಯ ಸರ್ಕಾರಗಳನ್ನು ಶಿಕ್ಷಿಸುವ ಪ್ರಯತ್ನ ಮಾಡಿತು

ಕೂಲಿಯ ದರವನ್ನು ಸ್ಥಗಿತಗೊಳಿಸಲು ಮೇ-ಜೂನ್ 2008 ರಲ್ಲಿ ಮಾಡಿದ ಪ್ರಯತ್ನವನ್ನು ಎಡ ಪಕ್ಷಗಳು ವಿಫಲಗೊಳಿಸಿದರೂ, ಜನವರಿ 2009 ರಲ್ಲಿ ಅದನ್ನು ಹೇರಿತು

ರಿಜಲ್ಟ್ : ಯು.ಪಿ.ಎ. ಜಸ್ಟ್ ಪಾಸ್ (ಎಡ ಪಕ್ಷಗಳ ಕಾಪಿ ಹೊಡೆದು, ಅದೂ ಸರಿಯಾಗಿ ಕಾಪಿ ಹೊಡೆಯಲಾಗದೆ !)

ಮೂರನೇ ಪರ್ಯಾಯದ ಬಲವರ್ಧನೆ.......

ಪುಟ 7 ರಿಂದ

ಬಿಜೆಪಿಯೊಂದಿಗೆ ಸ್ಥಾನ ಹೊಂದಾಣಿಕೆಗೆ ಬರಲು ಸಾಧ್ಯವಾಗಿದ್ದರೂ ತಾನು ಎನ್‌ಡಿಎ ಭಾಗವಾಗಿಲ್ಲ ಎಂಬುದನ್ನು ಘೋಷಿಸಿಕೊಂಡಿದೆ.

ಹಾಗಿದ್ದಾಗ್ಯೂ, ಕಾಂಗ್ರೆಸ್ ಪಕ್ಷ ದೇಶ ಮತ್ತು ಜನತೆಯ ಹಿತವನ್ನು ಪರಿಗಣಿಸದೆ ಕೇವಲ ಬಿಜೆಪಿ ಮೈತ್ರಿಕೂಟದಲ್ಲಿ ಉಂಟಾಗಿರುವ ಅತೃಪ್ತಿಯನ್ನು ಬಳಸಿ ಕೊಳ್ಳುವ ವಿಶ್ವಾಸದಲ್ಲಿ ತನ್ನನ್ನು ಮುಳುಗಿಸಿಕೊಂಡಿದೆ. ಅದಕ್ಕೆ ಈ ಒಂದು ಅಂಶವೇ ಉದಾಹರಣೆಯಾಗಿದೆ. ಗ್ರೆಸ್ ಪಕ್ಷವು ಮತ್ತು ಸರ್ಕಾರ ಹಣದುಬ್ಬರವು ಡಿಮೆಯಾಗಿದೆ ಎಂದು ತನ್ನನ್ನು ತಾನು ಬೆನ್ನು ಚಪ್ಪರಿಸಿಕೊಂಡು ಸಂತೋಷಪಡುತ್ತಿದೆ. ಸಗಟು ವ್ಯಾಪಾರದಲ್ಲಿನ ಹಣದುಬ್ಬರದ ಬೆಲೆ ಸೂಚ್ಯಾಂಕವು ಶೇ.4 ಕ್ಕಿಂತ ಕೆಳಗಿದೆ. ಆದರೆ ಆಹಾರ ಪದಾರ್ಥಗಳ ಬೆಲೆಗಳಲ್ಲಿ ವಿಪರೀತ ಏರಿಕೆ ಕಂಡಿದೆ ಗ್ರಾಹಕ ವ್ಯವಹಾರಗಳ ಇಲಾಖೆಯ "ಬೆಲೆ ನಿಯಂತ್ರಣ ವಿಭಾಗದ" ಪ್ರಕಾರವೇ ಅಕ್ಕಿ, ಬೇಳೆ, ಈರುಳ್ಳಿ, ಸಕ್ಕರೆ ಚಹಾ ಮೊದಲಾದ ಬೆಲೆಗಳು ಮಾರುಕಟ್ಟೆಯಲ್ಲಿ ಅತ್ಯಂತ ತುಟ್ಟಿಯತಾಗಿವೆ. ಫೆಬ್ರವರಿ 28 ಕ್ಕೆ ಅಂತ್ಯಗೊಂಡ ವಾರದಲ್ಲಿ ಸಗಟು ವ್ಯಾಪಾದಲ್ಲಿರುವ ಹಣದುಬ್ಬರದ ಪ್ರಮಾಣವೇ ಶೇ.7.5 ರಷ್ಟಿದೆ ಎಂದು ಗುರ್ತಿಸಲಾಗಿತ್ತು. ಈ ಪ್ರಮಾಣವು ಚಿಲ್ಲರೆ ಮಾರಾಟದಲ್ಲಿ ಇನ್ನು ಹಲವು ಪಟ್ಟು ಹೆಚ್ಚಾಗುತ್ತಿದೆ. ಈ ಲೆಕ್ಕಾಚಾರಗಳ ಪ್ರಕಾರವೇ ದೆಹಲಿಯಲ್ಲಿ ಮಾತ್ರವೇ ಅಕ್ಕಿಯ ಬೆಲೆ 2008 ಮಾರ್ಚ್ ಮತ್ತು 2009 ರ ಮಾರ್ಚ್ ನಡುವೆ ಶೇ.22 ಹೆಚ್ಚಾಗಿದೆ. ಸಕ್ಕರೆ ಶೇ.47 ರಷ್ಟು ಬೇಳೆ ಶೇ.31 ರಷ್ಟು ಮತ್ತು ಈರುಳ್ಳಿಯ ಬೆಲೆ ಶೇ.111 ರಷ್ಟು ಪ್ರಮಾಣದಲ್ಲಿ ಹೆಚ್ಚಳವಾಗಿವೆ.

ಆಗೊಮ್ಮೆ ಸರ್ಕಾರವೇ ಈ ಹಣದುಬ್ಬರದ ದರ ಇಳಿಕೆಗೆ ತೃಪ್ತಿದಾಯಕ ಕ್ರಮವನ್ನು ತೆಗೆದುಕೊಂಡಿದೆ ಎಂದು ಪ್ರಚಾರ ಮಾಡುತ್ತಿದೆ. ಆದರೆ ವಾಸ್ತವಾಂಶವೆಂದರೆ, ಲಕ್ಷಾಂತರ ಉದ್ಯೋಗಗಳು ಜಾಗತೀಕ, ಆರ್ಥಿಕ ಕುಸಿತದ ಪರಿಣಾಮದಿಂದಾಗಿ ನಾಶಗೊಂಡಿವೆ. ಕೃಷಿ ಕ್ಷೇತ್ರದ ಬಿಕ್ಕಟ್ಟು, ಬೆಲೆಯೇರಿಕೆ, ನಿರುದ್ಯೋಗ ಮತ್ತು ಜನತೆಯ ಜೀವನಮಟ್ಟದ ಕುಸಿತದ ಬಗ್ಗೆ ಆಳುವ ಕಾಂಗ್ರೆಸ್ಸಿಗರು ನಿರ್ಲಕ್ಷ್ಯ ವಹಿಸಿದ್ದಾರೆ. ಇದಕ್ಕಾಗಿ ಅವರು ಬಾರೀ ಬೆಲೆ ತೆರಬೇಕಾಗುತ್ತದೆ.

ಕಾಲವೀಗ ಬಂದಿದೆ

ಒಂದೇ ತೆರನಾದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿರುವ ಕಾಂಗ್ರೆಸ್ ಬಿಜೆಪಿಗಳನ್ನು ತಿರಸ್ಕರಿಸಿ ಪರ್ಯಾಯವನ್ನು ಆಯ್ಕೆ ಮಾಡುವ ಕಾಲವೀಗ ಬಂದಿದೆ. ಎಡಪಕ್ಷಗಳು ಪೂರ್ಣ ಪ್ರಮಾಣದ ಪರ್ಯಾಯ ನೀತಿಗಳ ವೇದಿಕೆ ನಿರ್ಮಾಣಕ್ಕಾಗಿ ಕೆಲಸ ಮಾಡುತ್ತಿವೆ. ಸಿಪಿಐ(ಎಂ) ಪಕ್ಷವು ಜನಪರವಾದ ಆರ್ಥಿಕ ನೀತಿಗಳು, ಧರ್ಮ ನಿರಪೇಕ್ಷತೆಯ ಬಲವಾದ ರಕ್ಷಣೆಗೆ ಬದ್ಧವಾದ, ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಸ್ವತಂತ್ರ ವಿದೇಶಾಂಗ ನೀತಿಯ ಆಧಾರದಲ್ಲಿ ಕೆಲಸ ಮಾಡಲು ಬಯಸುವ ಪಕ್ಷಗಳ ಒಂದು ವೇದಿಕೆಯಡಿಯಲ್ಲಿ ಆ ಎಲ್ಲಾ ಪಕ್ಷಗಳನ್ನು ಒಂದುಗೂಡಿಸುವ ಕೆಲಸಕ್ಕೆ ಮುಂದಾಗಿದೆ. ಆ ಮೂಲಕ ಪರ್ಯಾಯದ ಆಯ್ಕೆಯೊಂದನ್ನು ಜನತೆಯ ಮುಂದಿಡಲಾಗಿದೆ. ಮುಂಬರುವ ಈ ಚುನಾವಣೆ ಪ್ರಚಾರದಲ್ಲಿ ಈ ಪರ್ಯಾಯ ನೀತಿಗಳನ್ನು ಜನತೆಯ ಮುಂದಿಡಲು ನಿರ್ಧರಿಸಿದ್ದೇವೆ.



ಚುನಾವಣೆ ಸಮೀಕ್ಷೆಗಳು

ಏನಾಗಬಹುದೆಂಬ ಅಂದಾಜುಗಳೋ ಏನಾಗಬೇಕೆಂಬ ಬಯಕೆಗಳೋ ?


ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿವೆ. ದಿನೇ ದಿನೇ ಬಲಗೊಳ್ಳುತ್ತಿರುವ ತೃತೀಯ ಪರ್ಯಾಯದ ಗುಂಪು ಒಂದು ಕಡೆ, ಯುಪಿಎ, ಮತ್ತು ಎನ್‌ಡಿಎಗಳು ಭಾಗಿದಾರ ಪಕ್ಷಗಳನ್ನು ಕಳೆದುಕೊಂಡು ಛಿದ್ರವಾಗುತ್ತಾ ದುರ್ಬಲವಾಗುತ್ತಿರುವುದು ಮತ್ತೊಂದು ಕಡೆ.

ಲೋಕಸಭೆಯ ಫಲಿತಾಂಶ ಹೇಗಿರಬಹುದು? ಯಾರು ಸರ್ಕಾರ ರಚಿಸಬಹುದು? ಯಾರ ಯಾರ ಬಲಾಬಲ ಏನಿರಬಹುದು ಎಂಬ ಕುತೂಹಲ. ಜನರಲ್ಲಿ ಸಹಜ. ಈಗಾಗಲೇ ಮುಖ್ಯವಾಗಿ ಎರಡು ಸಮೀಕ್ಷೆಗಳು ಮಾಧ್ಯಮಗಳಲ್ಲಿ ವರದಿಯಾಗಿವೆ. ಒಂದು ಸಿಎನ್‌ಎನ್-ಐಬಿಎನ್ ಪ್ರಾಯೋಜಕತ್ವದಲ್ಲಿ ಸಿಎಸ್‌ಡಿಎಸ್ ಎಂಬ ಏಜೆನ್ಸಿ ನಡೆಸಿರುವ ಸಮೀಕ್ಷೆ. ಇದು ಜನವರಿ 2ನೇ ವಾರದಲ್ಲಿ ಜನರನ್ನು ಸಂದರ್ಶಿಸಿದೆಯಂತೆ. ಮತ್ತೊಂದು ಸ್ಟಾರ್ ನ್ಯೂಸ್ ಪ್ರಾಯೋಜಕತ್ವದ ಎ.ಸಿ.ನೈಲ್‌ಸೆನ್ ಎಂಬ ಏಜೆನ್ಸಿ ನಡೆಸಿರುವ ಸಮೀಕ್ಷೆ. ಈ ಸಂಸ್ಥೆ ಮಾರ್ಚ್ 2 ವಾರದಲ್ಲಿ ಜನರನ್ನು ಸಂದರ್ಶಿಸಿದೆಯಂತೆ.

ಹೆಚ್ಚಿನ ಸಾರಿ ಇಂತಹ ಸಮೀಕ್ಷೆಗಳು ದೇಶದ ರಾಜಕೀಯ ವಾಸ್ತವ ಏನು? ಜನರ ಒಲವು ನಿಜಕ್ಕೂ ಯಾವ ಕಡೆಗಿದೆ. ಜನಾದೇಶ ಏನಾಗಬಹುದು ಎಂಬುದನ್ನು ಪತ್ತೆ ಹಚ್ಚುವುದಕ್ಕಿಂತ ಏನಾಗಬೇಕೆಂಬ ಬಗ್ಗೆ ತಮ್ಮ ಬಯಕೆ ಏನು, ಜನಾದೇಶ ಏನಾಗಿರಬೇಕೆಂಬುದು ತಮ್ಮ ಆಕಾಂಕ್ಷೆಯಾಗಿದೆ ಎಂಬುದನ್ನು ಸಾರುತ್ತವೆ.

2004ರ ಲೋಕಸಾ ಚುನಾವಣೆಯಲ್ಲಿ ಹಲವು ಸಮೀಕ್ಷೆಗಳು ಎನ್.ಡಿ.ಎ.ಗೆ ಬರುತ್ತವೆಂದು ಬಿಂಬಿಸಿದ ಸ್ಥಾನಗಳಲ್ಲಿ ಅರ್ಧದಷ್ಟು ಸ್ಥಾನಗಳೂ ಬರಲಿಲ್ಲ ಎಂಬುದನ್ನು ಜನರು ಇನ್ನೂ ಮರೆತಿಲ್ಲ. ಇಂತಹ ಸಮೀಕ್ಷೆಗಳ ಹಿಂದೆ ಯಾರಿರುತ್ತಾರೆ ಎಂಬುದನ್ನು ಊರಿಸುವುದೂ ಸ್ವಲ್ಪ ಪ್ರಜ್ಞಾವಂತರಾದವರಿಗೆ ಕಷ್ಟವೇನಲ್ಲ, ಇರಲಿ.

ಈಗ ಹಾಲಿ ಸಮೀಕ್ಷೆಗಳಿಗೆ ಬರೋಣ. ಮಾರ್ಚ್ ಎರಡನೇ ವಾರದಲ್ಲಿ ನಡೆದಿದೆ ಎನ್ನಲಾದ ಎಸಿನೈಲ್‌ಸೆನ್ ಸಮೀಕ್ಷೆಯು ಯುಪಿಎ ಒಕ್ಕೂಟಕ್ಕೆ 257 ಸ್ಥಾನಗಳು ಬರುತ್ತವೆಂದೂ ಎನ್‌ಡಿಎ ಕೂಟಕ್ಕೆ 185 ಸ್ಥಾನಗಳು ಬರುತ್ತವೆಂದೂ ಮೂರನೇ ಪರ್ಯಾಯದ ಪಕ್ಷಗಳಿಗೆ ಕೇವಲ 96 ಸ್ಥಾನಗಳನ್ನು ನೀಡಿದೆ.


ಮಹಾರಾಷ್ಟ್ರದ ನಾಸಿಕ್‌ನಲ್ಲಿ ಸಿಪಿಐ(ಎಂ) ಬೃಹತ್ ರ‍್ಯಾಲಿ

ಸಿಎಸ್‌ಡಿಎಸ್ ಸಂಸ್ಥೆಯಾದರೂ ಯುಪಿಎ ಒಕ್ಕೂಟಕ್ಕೆ 215 ರಿಂದ 235, ಎನ್‌ಡಿಎ ಒಕ್ಕೂಟಕ್ಕೆ 165-185, ತೃತೀಯ ಪರ್ಯಾಯ ಅಂತ ಆದು ಆಗ ಗುರುತಿಸುವ ಪಕ್ಷಗಳಿಗೆ 120 ರಿಂದ 150 ಸ್ಥಾನಗಳನ್ನು ನೀಡಿದೆ. ಈ ಸಮೀಕ್ಷೆ ನಡೆದ ಮೇಲೆ ಬಿಜೆಡಿ-ಎನ್‌ಡಿಎ ತೊರೆದಿದೆ. ಒಂದು ಸ್ವಾಗತಾರ್ಹ ವಿಷಯ ಎಂದರೆ ಈ ಎರಡೂ ಸಮೀಕ್ಷೆಗಳು ಯುಪಿಎಗಾಗಲೀ, ಎನ್‌ಡಿಎಗಾಗಲೀ ಬಹುಮತ ಬರುವುದಿಲ್ಲ ಎಂಬ ವಾಸ್ತವವನ್ನು ಗುರುತಿಸಲೇ ಬೇಕಾಗಿ ಬಂದಿರುವುದು.

ಎಸಿನೈಲ್‌ಸನ್ ಸಮೀಕ್ಷೆ ಪ್ರಕಾರ ಮೂರನೇ ಪರ್ಯಾಯದೊಂದಿಗೆ ಗುರುತಿಸಿಕೊಂಡಿರುವ ಬಿಎಸ್‌ಪಿಗೆ ಬರಬಹುದಾದ ಸ್ಥಾನ 21. ಸಿಪಿಐ(ಎಂ)ಗೆ ದೊರೆಯಬಹುದಾದ ಸ್ಥಾನ 25. ಬಹುಶಃ ಇದು ಸಂಸ್ಥೆಯ ಅಥವಾ ಸಂಸ್ಥೆ ಹಿಂದೆ ನಿಂತಿರುವವರ ಬಯಕೆ ಇರಬಹುದು.

2004 ಚುನಾವಣೆಯಲ್ಲಿ ಬಿಎಸ್‌ಪಿ 19 ಸ್ಥಾನ ಪಡೆದಿತ್ತು. ಆ ನಂತರದ ಬೆಳವಣಿಗೆಯಲ್ಲಿ 16 ವರ್ಷಗಳ ನಂತರ ಇದೇ ಪ್ರಥಮ ಬಾರಿ ಉತ್ತರ ಪ್ರದೇಶದಲ್ಲಿ ಸ್ಪಷ್ಟ ಬಹುಮತ ಹೊಂದಿರುವ ಪಕ್ಷವೊಂದು ಅಧಿಕಾರಕ್ಕೆ ಬಂದಿದೆ. ಬಿಎಸ್‌ಪಿ ಪಕ್ಷದ ಸರ್ಕಾರ ಅಲ್ಲೀಗ ಅಧಿಕಾರದಲ್ಲಿದೆ. 2004ರ ಬಿಎಸ್‌ಪಿ, 2009ರ ಬಿಎಸ್‌ಪಿ ಬಹುತೇಕ ಒಂದೇ ಎಂಬಂತೆ ಈ ಸಮೀಕ್ಷೆ ಬಿಂಬಿಸುತ್ತಿರುವುದು ನೋಡಿದರೆ ಇವರ ಪೂರ್ವಾಗ್ರಹಗಳು ಯಾವ ರೀತಿಯದ್ದು ಎಂಬುದು ಗೊತ್ತಾಗಿ ಬಿಡುತ್ತದೆ.

ಜನವಿರೋಧಿ ಜಾಗತೀಕರಣ, ಉದಾರೀಕರಣ, ನೀತಿಗಳ ಮೂಲಕ ಕಾಂಗ್ರೆಸ್ ಪಕ್ಷ, ಅದೇ ಜಾಗತೀಕರಣ ನೀತಿಗಳೂ ಮತ್ತು ಕೋಮುವಾದಿ ವಿಭಜನಕಾರಿ ನೀತಿಗಳಿಂದಾಗಿ ಬಿಜೆಪಿ ಹೀಗೆ ಈ ಎರಡೂ ಪಕ್ಷಗಳೂ ಹೆಚ್ಚು ಹೆಚ್ಚಾಗಿ ಜನರ ತಿರಸ್ಕಾರಕ್ಕೆ

ಪುಟ 15ಕ್ಕೆ


ಯುಪಿಎ ಎಂಬುದು ಉಳಿದಿದೆಯೇ?! ಈ ಪ್ರಶ್ನೆ ಈಗ ಎದುರಾಗುತ್ತಿದೆ

ಇದುವರೆಗೆ ಯುಪಿಎ ಒಕ್ಕೂಟದ ಭಾಗವಾಗಿದ್ದ ತಮಿಳುನಾಡಿನ ಪಿ.ಎಂ.ಕೆ. ಪಕ್ಷವು ಯುಪಿಎ ತೊರೆದು ಎಐಎಡಿಎಂಕೆ ಯೊಂದಿಗೆ ಮೈತ್ರಿಗೆ ಮುಂದಾಗಿದೆ.

120 ಲೋಕಸಭಾ ಸ್ಥಾನಗಳಿರುವ ಉತ್ತರ ಪ್ರದೇಶ, ಬಿಹಾರದಲ್ಲಿ ಕಾಂಗ್ರೆಸ್‌ಗೆ ಈಗ ಮಿತ್ರರೇ ಇಲ್ಲ. ಎಸ್‌ಪಿ-ಕಾಂಗ್ರೆಸ್ ಸೀಟು ಹೊಂದಾಣಿಕೆ ಎಂದೋ ಮುರಿದು ಬಿದ್ದಿದೆ. ಬಿಹಾರದಲ್ಲಿ ಕಾಂಗ್ರೆಸ್-ಲಾಲೂ ಅವರ ಆರ್‌ಜೆಡಿ, ಪಾಸ್ವಾನ್ ಅವರ ಎಲ್‌ಜೆಪಿಯೊಂದಿಗೆ ಕೂಡ ಸೀಟು ಹೊಂದಾಣಿಕೆ ಮಾಡಿಕೊಳ್ಳುವಲ್ಲಿಯೂ ಕಾಂಗ್ರೆಸ್ ವಿಫಲವಾಗಿದೆ.

ಎಸ್.ಪಿ., ಆರ್‌ಜೆಡಿ, ಎಲ್‌ಜೆಪಿ, ಪಕ್ಷಗಳು ಸೇರಿಕೊಂಡು ಹೊಸ ಜಾತ್ಯತೀತ ರಂಗವೊಂದನ್ನು ಹುಟ್ಟು ಹಾಕುವುದಾಗಿ ಹೇಳುತ್ತಿವೆ. ಈ ರಂಗಕ್ಕೆ ಮಹಾರಾಷ್ಟ್ರದ ಎನ್‌ಸಿಪಿಯನ್ನು ಸೇರಿಸಿಕೊಳ್ಳುವುದಾಗಿ ಅವು ಹೇಳುತ್ತಿವೆ ಎಂಬ ವರದಿಗಳಿವೆ. ಇದೆಲ್ಲದರ ಅರ್ಥ ಏನು?

ಚುನಾವಣೆ ನಂತರ ಖಂಡಿತ, ಎನ್‌ಡಿಎ, ಯುಪಿಎಗಳು ಈಗಿನ ಸ್ಥಿತಿಯಲ್ಲಿ ಇರಲಾರವು. ಚುನಾವಣೆಗೆ ಮೊದಲೂ ಹಲವು ಬದಲಾವಣೆಗಳು ಆಗುತ್ತವೆ ಎಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ನಾಯಕರು ಹೇಳಿದ್ದ ಮಾತು ನಿಜವಾಗುತ್ತಾ ನಡೆದಿದೆ.



ಚುನಾವಣಾ ಫಲಿತಾಂಶಗಳು ಬಂದ ಮೇಲೆ ಮೂರನೇ ಪರ್ಯಾಯದ ಪಕ್ಷಗಳು ಮೊದಲ ಸ್ಥಾನದಲ್ಲಿ ಇರುತ್ತವೆ. ನಂತರದ ಸ್ಥಾನದಲ್ಲಿ ಕಾಂಗ್ರೆಸ್ ಹಾಗೂ ಅಳಿದುಳಿದ ಯುಪಿಎ, ಆನಂತರದ ಸ್ಥಾನದಲ್ಲಿ ಅಳಿದುಳಿದ ಎನ್‌ಡಿಎ ಇರುತ್ತದೆ ಎಂಬ ಪ್ರಕಾಶ್‌ಕಾರಟ್‌ರವರು ಮಾತು ನಿಜವಾಗುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ.

ಮಹಾರಾಷ್ಟ್ರ : ಎನ್‌ಸಿಪಿಯ... ಕಾಂಗ್ರೆಸ್‌ನೊಂದಿಗೆ ಮೈತ್ರಿ ಶಿವಸೇನೆಯೊಂದಿಗೆ ಸರಸ

ಮಹಾರಾಷ್ಟ್ರದಲ್ಲಿ ಕೊನೆಗೂ ಕಾಂಗ್ರೆಸ್ ... ಎನ್‌ಸಿಪಿ ಪಕ್ಷಗಳು ಸೀಟು ಹಂಚಿಕೆ ಹೊಂ... ಅಂತಿಮಗೊಳಿಸಿಕೊಂಡವು ಎಂಬ ... ಬಂದಿದೆ. ಒಟ್ಟು 48 ಲೋಕಸಭಾ ಸ್ಥಾನ... 22 ರಲ್ಲಿ ಎನ್‌ಸಿಪಿ 26 ರಲ್ಲಿ ಕಾಂಗ್ರೆಸ್... ಸ್ಪರ್ಧಿಸುವುದಂತೆ.

ಇಷ್ಟಾಯಿತು ಎಂದು ಕಾಂಗ್ರೆಸ್ ನಿಟ್ಟು... ಬಿಡುವಂತೇನೂ ಇಲ್ಲ. ಎನ್‌ಸಿಪಿಯೊಂ... ಮೈತ್ರಿ ಅದಕ್ಕೆ ಅಷ್ಟೊಂದು ಸಲೀ... ಅಲ್ಲ. ಮಹಾರಾಷ್ಟ್ರದ ಶಿವಸೇ... ಜೊತೆ ಎನ್‌ಸಿಪಿ ಸಾ... ಚೆಲ್ಲಾಟವಾಡಿತು. ಶರದ್ ಪವ... ಬಾಳಠಾಕ್ರೆ ಮತ್ತು ಗುಪ್ತವಾಗಿ ... ನಡೆಸಿದ್ದೂ ಆಯಿತು. ಕೊ... ಎನ್‌ಸಿಪಿ ಕಾಂಗ್ರೆಸ್‌ನೊಂದಿಗೆ ... ಅಂತಿಮಗೊಳಿಸಿತು.

ಅತ್ತ ಕಡೆ ಶಿವಸೇನೆ... ಎನ್‌ಸಿಪಿಯೊಂದಿಗೆ ಚೆಲ್ಲಾಟ... ಕೊನೆಗೆ ಬಿಜೆಪಿಯೊಂದಿಗೆ ... ಅಂತಿಮಗೊಳಿಸಿಕೊಂಡಿದೆ. ಇಷ್ಟಾದ... ಬಿಜೆಪಿಗೆ ತಲೆ ನೋವು ತಪ್ಪಿದ್ದಲ್ಲ. ... ಮಹಾರಾಷ್ಟ್ರದ ಪ್ರತಿಭಾ ಪಾಟೀಲ್ ಅ... ರಾಷ್ಟ್ರಾಧ್ಯಕ್ಷರ ಹುದ್ದೆಗೆ ಸ್ಪರ್ಧಿಸಿದಾಗ ಶಿವ... ಎನ್‌ಡಿಎ ತೀರ್ಮಾನಕ್ಕೆ ಬದ್ಧವಾಗ... ಮಹಾರಾಷ್ಟ್ರದವರು ಎಂಬ ಕಾರಣಕ್ಕೆ ಪ್ರ... ಪಟೇಲ್‌ರನ್ನು ಬೆಂಬಲಿಸಿತು. ಈಗ ಶ... ಪವಾರ್ ಅವರು ಮಹಾರಾಷ್ಟ್ರದವರೊ... ದೇಶಕ್ಕೆ ಎಂದೂ ಪ್ರಧಾನಿ ಆಗಿಲ್ಲ. ಹ... ರಾಜ್ಯಗಳ ಸರದಿಯ ನಂತರ ... ಮಹಾರಾಷ್ಟ್ರದವರೇ ಆದ ತಾವೇ ... ಪ್ರಧಾನಿಯಾಗಬಾರದು ಎಂಬ ಪ್ರಶ್ನೆ... ಬಹಿರಂಗವಾಗಿಯೇ ಎತ್ತಿದ್ದಾರೆ. ಈ ಮಾ... ಶಿವಸೇನೆಯೂ ಬೆಂಬಲ ಸೂಚಿ... ಮಾತಾಡಿದೆ.

ಗುಪ್ತ ಒಪ್ಪಂದ

ಶಿವಸೇನೆ-ಎನ್‌ಸಿಪಿಗಳ ನಡುವೆ ಗ... ಒಪ್ಪಂದವಾಗಿದೆಯೆಂದೂ ಎನ್‌ಸಿಪಿ... ಕಾಂಗ್ರೆಸ್‌ನೊಂದಿಗೆ ಮೈತ್ರಿ ಹೊಂದಿದ್ದ... ಕಾಂಗ್ರೆಸ್ ಪಾಲಿನ ಕ್ಷೇತ್ರಗಳಲ್ಲಿ ಗುಪ್ತವ... ಶಿವಸೇನೆಗೆ ಬೆಂಬಲಿಸುತ್ತಿದೆಂದೂ ಅದೇ ... ಶಿವಸೇನೆಯು ಬಿಜೆಪಿಯೊಂದಿಗೆ ಮೈ... ಹೊಂದಿದ್ದರೂ ಬಿಜೆಪಿ ಪಾಲಿನ ಕ್ಷೇತ್ರಗ... ಎನ್‌ಸಿಪಿಗೆ ಗುಪ್ತವಾಗಿ ಬೆಂಬ... ನೀಡುವುದೆಂದೂ ಒಳ ಒಪ್ಪಂದ ಮಾಡಿಕೊಂಡ... ಎಂಬ ವರದಿಗಳಿವೆ.

ಚುನಾವಣಾ ಫಲಿತಾಂಶ ಬಂದ ಮೇಲೆ ... ನಾಲ್ಕು ಪಕ್ಷಗಳ ಅಧಿಕೃತ ಮೈತ್ರಿ ಏನಾಗಲಿ... ಗುಪ್ತ ಮೈತ್ರಿಯು ಕಾರ್ಯಾಚರಣೆಗೆ ಬಂದ... ಸ್ಥಾನಗಳಿಕೆಯಲ್ಲಿ ಹಾಗೂ ಮುಂ... ಬೆಳವಣಿಗೆಯಲ್ಲಿ ಅದು ಯಾವ ಪರಿಣಾ... ಬೀರಲಿದೆ ಕಾದು ನೋಡಬೇಕಾಗಿದೆ.


ಗದಗಲ

ಶರತ್‌ಚಂದ್ರ

ಾಕಿಸ್ತಾನದಲ್ಲಿ ಪ್ರಜಾಸತ್ತೆಗೆ ಇನ್ನೊಂದು ವಿಜಯ

ಸ್ತಾನದಲ್ಲಿ ಇನ್ನೊಂದು ಬಾರಿ ಸರ್ವಾಧಿಕಾರಿ ನ್ನು ಧಿಕ್ಕರಿಸಿದ ಜನಾಂದೋಲನದ ಬಲದಿಂದ ಸತ್ತೆಗೆ ವಿಜಯ ದೊರಕಿದೆ. ಜ್ಯಶಾಹಿ-ಮಿಲಿಟರಿ ದುಷ್ಟಕೂಟದ ಹಳೆಯ ರಗಳು ಪಿತೂರಿಗಳು ಮತ್ತು ಅವರ ಜತೆ ಶಾಮೀಲಾಗುವ ರಾಜಕೀಯ ಪಕ್ಷಗಳ ು ನಡೆಯುವುದಿಲ್ಲ ಎಂದು ಇನ್ನೊಂದು ಬಾರಿ ಚ್ಚರಿಸಿದ್ದಾರೆ. ಪಿಪಿಪಿ ತನ್ನ ಎದುರಾಳಿ ಮುಸ್ಲಿಂ ಮಟ್ಟ ಹಾ'ಕಲು ಮಾಡಿದ ಪ್ರಜಾಸತ್ತೆ ೇಧಿ ಕ್ರಮಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಿದ್ದಾರೆ. ಜನರಲ್ ಮುಶರಫ್ ಸಂವಿಧಾನವನ್ನು ಬುಡಮೇಲು ಮಾಡಲು ಮಾಡಿದ ಪ್ರಯತ್ನಕ್ಕೆ ಪ್ರತಿರೋಧ ನೀಡಿ ವಜಾ ಆದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಪುನಃ ನೇಮಿಸಬೇಕು ಎಂಬ ಜನಾದೇಶವನ್ನು ಪಾಲಿಸಲು ಮೀನ ಮೇಷ ಎಣಿಸುತ್ತಿದ್ದ ಜರ್ದಾರಿ ಸರ್ಕಾರ ಮಣಿಯಬೇಕಾಗಿ ಬಂದಿದೆ.

ನ್ಯಾಯಾಧೀಶರುಗಳ ಪುನರ್ ನೇಮಕಾತಿಯ ವಿಷಯದಲ್ಲಿ ಜರ್ದಾರಿ ಸರ್ಕಾರ ಮೊದಲಿಂದಲೂ ವಿಳಂಬದ ಧೋರಣೆ ಅನುಸರಿಸಿತ್ತು. ಒಮ್ಮೆ ಒಂದು ನೆಪ, ಇನ್ನೊಮ್ಮೆ ಇನ್ನೊಂದು ನೆಪ, ಮಗದೊಮ್ಮೆ ಸರಾಸರಿ ನಿರಾಕರಣೆ - ಇವುಗಳ ಸರ್ಕಾರಿ ನೀತಿ ವಿರುದ್ಧ ಜನರ ಆಕ್ರೋಶ ಮತ್ತು ಚಳುವಳಿ ಸತತವಾಗಿ ಇತ್ತು. ಇದರ ನಾಯಕತ್ವವನ್ನು ಸರ್ವ ಪಕ್ಷಗಳ ಪ್ರಜಾಸತ್ತಾತ್ಮಕ ಚಳುವಳಿ 2007 ರಿಂದ ವಹಿಸಿತ್ತು. ವಕೀಲರು ಇದರಲ್ಲಿ ದೊಡ್ಡ ರೀತಿಯಲ್ಲಿ ಭಾಗವಹಿಸಿದ್ದರು. ಈ ಚಳುವಳಿ ಚುನಾವಣೆಯನ್ನು ಬಹಿಷ್ಕರಿಸಿತ್ತು. ಹಲವು ಎಡ ಪ್ರಗತಿಪರ ಪಕ್ಷಗಳು ಈ ಚಳುವಳಿಯ ಮಂಚೂಣಿಯಲ್ಲಿದ್ದವು. ಶರೀಫರ ಮುಸ್ಲೀಂ ಲೀಗ್ ಸಹ ಮೊದಲು ಇದರ ಭಾಗವಾಗಿದ್ದು ಆ ಮೇಲೆ ನ್ಯಾಯಾಧೀಶರುಗಳ ಪುನರ್ ನೇಮಕಾತಿಯ ಮುಖ್ಯ ಉದ್ದೇಶದಿಂದ ಚುನಾವಣೆಯಲ್ಲಿ ಭಾಗವಹಿಸಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.



ಪಾಕಿಸ್ತಾನ ಮುಸ್ಲೀಂ ಲೀಗ್ (ನವಾಜ್ ಶರೀಫ್) ಪಕ್ಷದ ಶರೀಫ್ ಸಹೋದರರು ಚುನಾವಣೆಗೆ ಸ್ಪರ್ಧಿಸದಂತೆ ಸುಪ್ರೀಂ ಕೋರ್ಟು ತೀರ್ಪಿನೊಂದಿಗೆ ಈಗಿನ ಬಿಕ್ಕಟ್ಟು ಆರಂಭವಾಯಿತು. ಪಂಜಾಬಿನ ಲೀಗ್ ಸರ್ಕಾರದ ತಕ್ಷಣ ವಜಾದಿಂದ ಜರ್ದಾರಿ ಸರ್ಕಾರದ ಉದ್ದೇಶ ಸ್ಪಷ್ಟವಾಯಿತು. ಕರಾಚಿಯಿಂದ ಪಾರ್ಲಿಮೆಂಟ್ ಚಲೋ ಜಾಥಾ ಮತ್ತು ಪಾರ್ಲಿಮೆಂಟಿನ ಮುಂದೆ ಪುನಃ ನೇಮುಕಾತಿ ಆಗುವವರೆಗೆ ಧರಣಿ ಮುಷ್ಕರದ ಘೋಷಣೆಯೊಂದಿಗೆ ಈ ಚಳುವಳಿ ತೀವ್ರವಾಯಿತು. ಚಳುವಳಿ ಹತ್ತಿಕ್ಕಲು ಮತ್ತು ತನ್ನ ಮೂರ್ಖ ಕ್ರಮಗಳನ್ನು ಮುಚ್ಚಿಕೊಳ್ಳಲು ಸರ್ಕಾರದ ದಮನ ಚಕ್ರ ಸಹ ತೀವ್ರವಾಯಿತು. ವಿರೋಧೀ ರಾಜಕೀಯ ನಾಯಕರು ಕಾರ್ಯಕರ್ತರುಗಳ ವ್ಯಾಪಕ ಬಂಧನ, ಪ್ರತಿಕೆ-ಟಿವಿಗಳ ಮೇಲೆ ನಿಷೇಧ, ಜಾಥಾ ತಡೆಯಲು ಲಾಹೋರ್ ಸೇರಿದಂತೆ ಹಲವು ನಗರಗಳ ದಿ'ಗ್ಬಂಧನ, ಹೆದ್ದಾರಿಗಳನ್ನು ಮುಚ್ಚುವುದು - ಮುಂತಾದ ಮಿಲಿಟರಿ ಸರ್ಕಾರವನ್ನೂ ಮೀರಿಸುವ ದಮನ ಕ್ರಮಗಳನ್ನು ಕೈಗೊಳ್ಳಲಾಯಿತು. ಆದರೆ ಸರ್ಕಾರ ಜನರ ಆಕ್ರೋಶ ಪ್ರತಿರೋಧದ ತೀಕ್ಷ್ಣತೆಯ



ಸರಿಯಾದ ಅಂದಾಜು ಮಾಡಿರಲಿಲ್ಲ. ಮೂರೇ ದಿನಗಳಲ್ಲಿ ಸರ್ಕಾರ ಮಣಿಯಬೇಕಾಯಿತು. ರಾಜಕೀಯ ಪಕ್ಷಗಳ ನಡುವೆ ಒಡಕು ತಂದು ತನ್ನ ಬೇಳೆ ಬೇಯಿಸಿಕೊಳ್ಳುವ ಸಾಮ್ರಾಜ್ಯಶಾಹಿ-ಮಿಲಿಟರಿ ದುಷ್ಟಕೂಟದ ಆಟಕ್ಕೆ ಸೋಲಾಯಿತು.

ನಾವಣೆ ಸಮೀಕ್ಷೆಗಳು ....

14 ರಿಂದ

ಯುತ್ತಿರುವ ಸನ್ನಿವೇಶದಲ್ಲಿ ಯುಪಿಎ, ಡಿಎಗಳು ವಿಘಟಿತ ವಾಗುತ್ತಾ ಮೂರನೇ ಬಲಪಡೆದುಕೊಳ್ಳುತ್ತಿರುವ ಅಂಶವನ್ನು ು ಗುರುತಿಸಲು ತಯಾರೇ ಇಲ್ಲ. ಅಥವಾ ಅವರಿಗೆ ಬೇಕಾಗೇ ಇಲ್ಲ. ಈ ಸಮೀಕ್ಷೆ ಪ್ರಕಟವಾದ ಬೆನ್ನ ಹಿಂದೆ ಯುಪಿಎ ಕೂಟ ಮತ್ತೊಂದು ದೊಡ್ಡ ಹೊಡೆತ ಬಿದ್ದಿದೆ.

ಪಶ್ಚಿಮಬಂಗಾಳ: ಎಡರಂಗ ವಿರೋಧಿಗಳ ಹಿಂಸಾ ರಾಜಕೀಯ

ಪಶ್ಚಿಮ ಬಂಗಾಳದ ಎಡರಂಗ ವಿರೋಧಿಶಕ್ತಿಗಳೆಲ್ಲಾ ಸೇರಿ ಮತ್ತೊಮ್ಮೆ ತಮ್ಮ ಕೊಲೆಗಡುಕ ಸಂಸ್ಕೃತಿಯ ದರ್ಶನ ಮಾಡಿಸುತ್ತಿದ್ದಾರೆ. ಕೇವಲ 2009ರ ಮಾರ್ಚ್ ತಿಂಗಳಲ್ಲಿ ಇಲ್ಲಿಯವರೆಗೆ ಎಂಟು ಜನ ಸಿಪಿಐ(ಎಂ) ಸಂಗಾತಿಗಳು ತೃಣಮೂಲ ಕಾಂಗ್ರೆಸ್, ಕಾಂಗ್ರೆಸ್ ಹಾಗೂ ಸ್ವಘೋಷಿತ ಮಾವೋವಾದಿಗಳ ದಾಳಿಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಫೆಬ್ರವರಿ ತಿಂಗಳಲ್ಲಿ ಕೂಡ ಇಂತಹದ್ದೇ ದಾಳಿಗಳಲ್ಲಿ 7 ಜನ ಸಂಗಾತಿಗಳು ಪ್ರಾಣ ಕಳೆದುಕೊಂಡಿದ್ದಾರೆ. ಚುನಾವಣೆಗಳಲ್ಲಿ ಈ ಹಿಂಸಾ ರಾಜಕೀಯಕ್ಕೆ ಸೂಕ್ತ ಉತ್ತರ ನೀಡಲು ಎಡ ರಂಗ ಜನರಿಗೆ ಮನವಿ ಮಾಡಿದೆ.

ಬ್ಬಬ್ಬಾ... ! ಗೃಹಮಂತ್ರಿ-ಸಿಐಎ ಮುಖ್ಯಸ್ಥರ ಭೇಟಿ

ಯುಪಿಎ ಸರ್ಕಾರ ಅಮೇರಿಕಾದೊಂದಿಗೆ ಅಣು ಪ್ಪಂದ ಮಾಡಿಕೊಂಡದ್ದು ತನ್ನ ಘನ ಸಾಧನೆಗಳಲ್ಲಿ ಂದು ಅಂತ ಸಾರುತ್ತಿದೆ. ಈ ಪ್ರಶ್ನೆಯಲ್ಲಿ ಕಾಂಗ್ರೆಸ್ ತೃತ್ವದ ಸರ್ಕಾರ ಹೇಳಿದ ಹಸಿ ಹಸಿ ಸುಳ್ಳುಗಳು ಅಮೇರಿಕದ ಅಧಿಕಾರಿಗಳು, ರಾಜಕಾರಣಿಗಳ ೇಳಿಕೆ, ಅಲ್ಲಿನ ವಿರೋಧ ಪಕ್ಷಗಳಿಗೆ ಸರ್ಕಾರದಿಂದ ೀಡಲಾದ ಸ್ಪಷ್ಟನೆ ಇವುಗಳಿಂದಲೇ ಯಲಾಯಿತು.

ಅದು ಕೇವಲ ವಿದ್ಯುತ್ ಸ್ಥಾವರಕ್ಕೆ ಸಂಬಂಧಿ ದ ಒಪ್ಪಂದವಲ್ಲ, ಅದನ್ನು ಮೀರಿದ್ದು. ಅದು ದೊಂದಿಗಿನ ವ್ಯೂಹಾತ್ಮಕ (ಯುದ್ಧ) ಮೈತ್ರಿಗೆ ಬಂಧಿಸಿದ್ದು ಎಂದು ಎಡಪಕ್ಷಗಳು ಆಗಲೇ ಚ್ಚರಿಸಿದ್ದವು.

ಯುಪಿಎ ಸರ್ಕಾರ ನಮ್ಮ ವಿದೇಶಾಂಗ ನೀತಿಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದೆ ನೋಡಿ, ಭಾರತದ ಗೃಹಮಂತ್ರಿ ಪಿ.ಚಿದಂಬರಂ ಅವರು ಇತ್ತೀಚೆಗೆ ಅಮೇರಿಕಾದ ಸಿಐಎಯ ಮುಖ್ಯಸ್ಥರನ್ನು ಭೇಟಿಯಾಗಿದ್ದಾರೆ. ಭಾರತದ ಗೃಹಮಂತ್ರಿಯೊಬ್ಬರೊಂದಿಗೆ ಅಮೇರಿಕದ ಸಿಐಎ ಮುಖ್ಯಸ್ಥರ ಭೇಟಿ ನಡೆದಿರುವುದು ಇದೇ ಪ್ರಪ್ರಥಮ. ಗುಪ್ತಚರ ವಿಭಾಗಗಳ ಜೊತೆಗಾರರೊಂದಿಗೆ ಸಿಐಎ ಮುಖ್ಯಸ್ಥರನ್ನು ಅತ್ಯಂತ ಉನ್ನತ ಶ್ರೇಣಿಯ ರಾಜಕೀಯ ನಾಯಕರೆಂಬಂತೆ ಅತ್ಯಂತ ಆದರದಿಂದ ಬರಮಾಡಿಕೊಳ್ಳಲಾಗಿದೆ.

ಸಿಐಎ ಅಂದರೆ ಅದೊಂದು ದುಷ್ಟತನ, ನೀಚತನಕ್ಕೆ ಕುಖ್ಯಾತವಾದ ಜಗತ್ತಿನ ಒಂದು ಭಯಾನಕ ಗೂಢಚಾರ ಸಂಘಟನೆ ಅನ್ನುವುದನ್ನು ನಾವು ಮರೆಯಬಾರದು. ಅಮೇರಿಕದ ಹಿತಾಸಕ್ತಿಗೆ ಧಕ್ಕೆ ಬರಬಹುದೆಂಬ ಲೆಕ್ಕಾಚಾರಗಳ ಆಧಾರದಲ್ಲಿ ಜಗತ್ತಿನ ವಿವಿಧ ದೇಶಗಳ ರಾಜಕೀಯಗಳಲ್ಲಿ ಮೂಗು ತೂರಿಸಿ ತಂತ್ರ, ಕುತಂತ್ರಗಳಿಂದ ಸರ್ಕಾರಗಳನ್ನು ಬುಡಮೇಲು ಮಾಡಿದ 'ಸಾಧನೆ' ಈ ಸಿಐಎ ಯದ್ದು.

ಭಾರತವೂ ಕ್ರಮೇಣ ಪಾಕಿಸ್ತಾನ ಹಾದಿಯಲ್ಲಿ ಸಾಗುತ್ತಿದೆ. ಸಿಐಎ ಮತ್ತು ಎಫ್‌ಬಿಐ ಮುಖ್ಯಸ್ಥರು ಪ್ರಧಾನಿ ಮತ್ತು ಗೃಹಮಂತ್ರಿಯನ್ನು ಭೇಟಿ ಮಾಡುವುದು ಸಾಮಾನ್ಯವಾಗಿದೆ. ಭಾರತ ಒಂದು ಸಾರ್ವಭೌಮ ರಾಷ್ಟ್ರವಾಗಿ ಉಳಿಯಬೇಕು ಎಂದು ಬಯಸುವವರೆಲ್ಲ ನಿಜಕ್ಕೂ ಎಚ್ಚರವಹಿಸಬೇಕಾದ ವಿಷಯ ಇದು. ಸಿಪಿಐ(ಎಂ) ಈ ಭೇಟಿಯನ್ನು ಉಗ್ರವಾಗಿ ಖಂಡಿಸಿದೆ.

ಪಿಡಿಪಿ-ಎಲ್‌ಡಿಎಫ್‌ಅನ್ನು ಬೆಂಬಲಿಸುತ್ತಿದೆ ಅಷ್ಟೇ!

ಪೀಪಲ್ಸ್ ಡೆಮಾಕ್ರೆಟಿಕ್ ಪಾರ್ಟಿ(ಪಿಡಿಪಿ) ಅಂತ ಒಂದು ಪಕ್ಷ ಕೇರಳದಲ್ಲಿದೆ. ಪಿಡಿಪಿ ಒಂದು ಮುಸ್ಲಿಂ ಸಮುದಾಯವನ್ನು ಆಧರಿಸಿರುವ ಪಕ್ಷ, ಅದರೊಂದಿಗೆ ಎಲ್‌ಡಿಎಫ್ ಮೈತ್ರಿ ಮಾಡಿಕೊಂಡಿದೆ. ಇದೇ ಸರಿಯೇ ಎಂಬಂತೆ ಕೆಲವೆಡೆ ಪ್ರಶ್ನೆಗಳನ್ನು ಎತ್ತಲಾಗಿದೆ.

ಮೊದಲನೆಯದಾಗಿ ಸ್ಪಷ್ಟಪಡಿಸಬೇಕಿರುವುದೇನೆಂದರೆ ಪಿಡಿಪಿ ಪಕ್ಷವು ಎಲ್‌ಡಿಎಫ್‌ನ ಭಾಗವಲ್ಲ ಹಾಗೂ ಎಲ್‌ಡಿಎಫ್ ಅಥವಾ ಸಿಪಿಐ(ಎಂ) ಪಿಡಿಪಿಯೊಂದಿಗೆ ಮೈತ್ರಿ ಯನ್ನಾಗಲೀ, ಸೀಟು ಹೊಂದಾಣಿಕೆಯನ್ನಾಗಲೀ ಮಾಡಿಕೊಂಡಿಲ್ಲ.

ನಿಜ, ಪಿಡಿಪಿ ಎಂಬುದು ಮುಖ್ಯವಾಗಿ ಮುಸ್ಲಿಂ ಸಮುದಾಯವನ್ನು ಆಧರಿಸಿರುವ ಪಕ್ಷ. ಆದರೆ ಆ ಪಕ್ಷ ಇತ್ತೀಚಿನ ವರ್ಷಗಳಲ್ಲಿ ತನ್ನ ನಿಲುವನ್ನು ಬದಲಿಸಿಕೊಂಡಿದೆ. ಆ ಪಕ್ಷ ಇತ್ತೀಚಿನ ವರ್ಷಗಳಲ್ಲಿ ದಲಿತರು, ಹಿಂದುಳಿದವರ, ಅನ್ಯಾಯಕ್ಕೊಳಗಾದ ಇತರ ಸಮುದಾಯಗಳ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಸಾಮ್ರಾಜ್ಯಶಾಹಿ ವಿರೋಧಿ ನಿಲುವನ್ನು ತಳೆದಿದೆ.

ಈ ಪಿಡಿಪಿ ಪಕ್ಷವು ಪ್ರಸ್ತುತ ಲೋಕಸಭಾ ಚುನಾವಣೆಗಳಲ್ಲಿ ಎಲ್‌ಡಿಎಫ್ ಅಭ್ಯರ್ಥಿಗಳನ್ನು ಬೆಂಬಲಿಸಲು ತೀರ್ಮಾನ ತೆಗೆದುಕೊಂಡಿದೆ. ಹಾಗೆ ಅವರು ತೀರ್ಮಾನ ತೆಗೆದುಕೊಳ್ಳುವುದನ್ನು ಸಿಪಿಐ(ಎಂ) ಆಗಲಿ ಎಲ್‌ಡಿಎಫ್ ಆಗಲಿ ಬೇಡ ಎನ್ನಲು ಸಾಧ್ಯವೇ? ಪಿಡಿಪಿಯ ನಿಲುವನ್ನು ಎಲ್‌ಡಿಎಫ್ ಸ್ವಾಗತಿಸಿದೆ ಅಷ್ಟೆ.




'ಥ್ಯಾಂಕ್ಸ್ ಮಾ' ಅವ್ಯವಸ್ಥೆ ತೆರೆದಿಟ್ಟ ಚಿತ್ರ

ಕಳ್ಳತನ, ದರೋಡೆ, ಮತ್ತಿತ್ತರ ಚಟುವಟಿಕೆಗಳನ್ನು ನಡೆಸಿಕೊಂಡು ಬದುಕುತ್ತಿರುವ ಐದು ಜನ ಮಕ್ಕಳ ಕತೆ 'ಥ್ಯಾಂಕ್ಸ್ ಮಾ' ಚಿತ್ರ ಸಮಾಜದ ಅವ್ಯವಸ್ಥೆಯನ್ನು ತೆರೆದಿಟ್ಟಿದೆ.

ದೇಶದಲ್ಲಿ ಪ್ರತಿ ದಿನ ಸುಮಾರು 270 ಕಂದಮ್ಮಗಳು ಬೀದಿಪಾಲಾಗುತ್ತಿದ್ದು, ಇಂದಿಗೂ ಸಹ ವ್ಯವಸ್ಥೆಯ ಭಾಗವಾಗಿರುವ ಬಡತನ ಒಂದು ಕಡೆಯಾದರೆ, ಹೆಣ್ಣು ಮಗುವನ್ನು ಒಪ್ಪದಿರುವ ಮತ್ತೊಂದು ವಿಭಾಗದ ಜನತೆಯು ದೇಶದಲ್ಲಿ ಇದೆ. ಈ ಧಾರುಣ ಸತ್ಯವನ್ನು ಇರ್ಫಾನ್ ಕಮಾಲ್ ಎಂಬ ಯುವ ನಿರ್ದೇಶಕ ತಮ್ಮ 'ಥ್ಯಾಂಕ್ಸ್ ಮಾ' ಚಿತ್ರದಲ್ಲಿ ಬಹಳ ಅರ್ಥಪೂರ್ಣವಾಗಿ ಚಿತ್ರೀಕರಿಸಿದ್ದಾರೆ.

ಸಮಾಜದಲ್ಲಿ ಇಂದಿಗೂ ಚಿಕ್ಕ ಮಕ್ಕಳ ಮೇಲೆ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿರುವ ಲೈಂಗಿಕ ದೌರ್ಜನ್ಯ, ಮುಂಬೈ ನಗರದಲ್ಲಿನ ಹಿಜಡಾಗಳ ಹಾವಳಿ, ಪೋಲಿಸರಿಗೆ ಜನರ ಮೇಲಿಲ್ಲದ ಅನುಕಂಪ ಮತ್ತು ಆಸ್ಪತ್ರೆಗಳಲ್ಲಿ ಲಂಚಾವತಾರದ ಪ್ರಸಂಗವನ್ನು ಮತ್ತು ಹುಟ್ಟಿದ ಮಕ್ಕಳನ್ನು ಬೀದಿಪಾಲು ಮಾಡುತ್ತಿರುವ ವಸ್ತುವಾಗಿಸಿಕೊಂಡು ಈ ಚಿತ್ರವನ್ನು ತೆಗೆದಿದ್ದಾರೆ.

ಸೋಡಾ (ಸಲ್ಮಾನ್-14ವರ್ಷ) ಎಂಬ ಸ್ಲಂ ಹುಡುಗ ಮತ್ತು ಅವನ ನಾಲ್ವರೂ ಸ್ನೇಹಿತರ ಜೊತೆ ಸೇರಿ ರೈಲ್ವೇ ನಿಲ್ದಾಣದ ಜನನಿಬೀಡ ಪ್ರದೇಶದಲ್ಲಿ ಪಿಕ್‌ಪ್ಯಾಕೇಟ್ ಮಾಡುವುದು ಮತ್ತು ಬಂದಿದ್ದರಲ್ಲಿ ಐದು ಜನ ಹಂಚಿಕೊಳ್ಳುವುದು ಕೆಲಸ. ಇವನು ಸೇರಿದಂತೆ, ಸ್ನೇಹಿತರಾದ ಮುನಿಸಿಪಾಲಿಟಿ (ಶ್ಯಾಂ - 12), ಸುರ್‌ಸುರಿ (ಅಲ್‌ಮಾಸ್ -10), ಡೇಡ್ ಶ್ಯಾಂ (ಜಪ್ಪರ್ - 08), ಕಟ್ಟಿಂಗ್ (ಫಯಾಜ್ -10) ಎಂಬ ಐದು ಜನ ರೈಲ್ವೇ ನಿಲ್ದಾಣದ ಪಕ್ಕದಲ್ಲಿರುವ ಸ್ಲಂನಲ್ಲಿ ವಾಸವಿದ್ದು, ಮುಂಬೈ ಎಂಬ



ದೊಡ್ಡ ನಗರದಲ್ಲಿ ಇರುವ ಹಲವು ಸ್ಲಂಗಳಲ್ಲಿ ಜೀವನ ನಡೆಸುತ್ತಿರುವ ಜನರ ಬಗ್ಗೆ ತೆರೆದಿಡುತ್ತದೆ.

ಕಳ್ಳತನ, ದರೋಡೆ, ಮತ್ತಿತ್ತರ ಚಟುವಟಿಕೆಗಳನ್ನು ನಡೆಸಿಕೊಂಡು ಬದುಕುತ್ತಿರುವ ಐದು ಜನ ಮಕ್ಕಳ ಕತೆ 'ಥ್ಯಾಂಕ್ಸ್ ಮಾ' ಚಿತ್ರ ಸಮಾಜದ ಅವ್ಯವಸ್ಥೆಯನ್ನು ತೆರೆದಿಟ್ಟಿದೆ.

ಮುನಿಸಿಪಾಲಿಟಿ ಮತ್ತು ಅವರ ಸ್ನೇಹಿತರು ಸೇರಿ ರೈಲ್ವೇ ನಿಲ್ದಾಣದಲ್ಲಿ ಕಳ್ಳತನ ಮಾಡಿ ತಪ್ಪಿಸಿಕೊಳ್ಳುತ್ತಾರೆ. ನಂತರದಲ್ಲಿ ಆ ವ್ಯಕ್ತಿ ಪೋಲಿಸರೊಂದಿಗೆ ಬಂದು 'ಮುನಿಸಿಪಾಲಿಟಿ'ಯನ್ನು ಹಿಡಿದು ಬಡಿಯುತ್ತಾರೆ ಪೋಲಿಸರು. ನಂತರ 'ನನ್ನ ಪರ್ಸ್‌ನಲ್ಲಿರುವ ಹಣವನ್ನು ನೀನೇ ಇಟ್ಟುಕೋ. ಆದರೆ ಅದರಲ್ಲಿ ನನ್ನ ಮಕ್ಕಳ ಫೋಟೋಗಳಿವೆ. ವರ್ಷಕ್ಕೊಮ್ಮೆಯಷ್ಟೇ ಅವರನ್ನು ನಾನು ನೋಡುವುದು ಅವರ ಫೋಟೋ ಕೂಡ ಇಲ್ಲವಾದರೆ ನನ್ನ ಮನಸ್ಸಿಗೆ ತುಂಬಾ ನೋವಾಗುತ್ತದೆ' ಎಂದು ಹೇಳುವಾಗ ಈ ಹುಡುಗನಲ್ಲಿಯೂ ತಾನೂ ಒಬ್ಬ ಅನಾಥ ಎಂಬ ಭಾವನೆ ಉಂಟಾಗುತ್ತದೆ.



ಚಿತ್ರದ ನಿರ್ದೇಶಕ
ಇರ್ಫಾನ್

ಪೋಲಿಸ್‌ನವರು ಇವನನ್ನು ಪೋಲಿಸ್ ರಿಮ್ಯಾಂಡ್ ಹೋಂನಲ್ಲಿ ಹಾಕುತ್ತಾರೆ. ಅಲ್ಲಿಂದ ಹೇಗೋ ಮಾಡಿ ತಪ್ಪಿಸಿಕೊಳ್ಳುತ್ತಾನೆ. ತಪ್ಪಿಕೊಳ್ಳುವ ಸಂದರ್ಭದಲ್ಲಿ ಯಾರೋ 2 ದಿನದ ಹೆಣ್ಣು ಮಗುವನ್ನು ರಿಮ್ಯಾಂಡ್ ಹೋಂ ಬಾಗಿಲ ಬಳಿ ಬಿಟ್ಟು ಹೋಗುತ್ತಾಳೆ. ಇದನ್ನು ಗಮನಿಸಿದ ಮುನಿಸಿಪಾಲಿಟಿ ಮಗುವನ್ನು ತೆಗೆದುಕೊಳ್ಳುತ್ತಾನೆ. ನಂತರ ತನ್ನ ಮೇಲೆ ವಿಲಕ್ಷಣವಾಗಿ ನಡೆದುಕೊಂಡ ರಿಮ್ಯಾಂಡ್‌ಹೋಂ ಮುಖ್ಯಸ್ಥನ ಬಳಿ ಹೋಗದ. ಆ ಮಗುವಿನ ತಾಯಿಯನ್ನು ಹುಡುಕುತ್ತಾ ಹೋಗುತ್ತಾನೆ.

ಸ್ಲಂ ಮತ್ತು ಕೆಳ ವರ್ಗದ ಜನರೆಂದರೆ ಪೋಲಿಸನವರು ಹೇಗೆ ವರ್ತಿಸುತ್ತಾರೆ ಎಂದು ಗಮನಿಸುವ ಮುನಿಸಿಪಾಲಿಟಿ ಈ ಮಗುವನ್ನು ಅವರ ಬಳಿ ಕೊಂಡೊಯ್ಯದೆ ಅವರಿಂದ ತಪ್ಪಿಸಿಕೊಳ್ಳುತ್ತಾ ಹೋಗುತ್ತಾನೆ. ಆಸ್ಪತ್ರೆಗಳ ಸಿಬ್ಬಂದಿಯವರ ಹಣದ ವ್ಯಾಮೋಹ ಮತ್ತು ಅತ್ಯಂತ ಸುಶಿಕ್ಷಿತ ಮೇಲ್ವರ್ಗದಲ್ಲಿ ಹೆತ್ತ ಮಗಳ ಜೊತೆಗೆ ಕಾಮುಕವಾಗಿ ನಡೆದುಕೊಳ್ಳುವ ಕ್ರೂರ ತಂದೆ ಹಾಗೂ ಮುಂಬೈ ನಗರಗಳಲ್ಲಿ ಮಧ್ಯ ರಾತ್ರಿಯಲ್ಲಿ ನಡೆಯುವ ಅನೈತಿಕ ಚಟುವಟಿಕೆಗಳನ್ನು ಗಮನಿಸಿಸುತ್ತಾ ಹೋಗುವ ಮುನಿಸಿಪಾಲಿಟಿ ಆ ಮಗುವಿನ ಹೆತ್ತ ತಾಯಿ ಸಿಗದೆ ಇದ್ದ ಸಂದರ್ಭದಲ್ಲಿ ತನಗೆ ಸಲಹೆ ನೀಡುತ್ತಿದ್ದ ಚರ್ಚ್‌ನ ಫಾದರ್‌ನನ್ನು ಭೇಟಿಯಾಗಿ ಅವರ ಆಸ್ಪತ್ರೆಯಲ್ಲಿ ಕೊಟ್ಟು ಹಿಂತಿರುಗುತ್ತಾನೆ.

ಬಹುತೇಕ ಹೊಸಬರಾಗಿರುವ ಮತ್ತು ಮಕ್ಕಳೇ ಪ್ರಧಾನವಾಗಿ ಅಭಿನಯಿಸಿರುವ ಈ ಚಿತ್ರದ ನಿರ್ದೇಶನವನ್ನು ಇರ್ಫಾನ್‌ಕಮಾಲ್‌ರವರು ಮತ್ತು ಚಿತ್ರದ ಕಥೆಯನ್ನು ಇರ್ಫಾನ್‌ಕಮಾಲ್ ಮತ್ತು ನವನೀತ್‌ವಿಶಾಲ್ ಬರೆದಿದ್ದಾರೆ. ಸ್ಲಂ ಡಾಗ್ ಮಿಲಿಯನರ್ ಚಿತ್ರಕ್ಕೆ ಆಸ್ಕರ್ ಪ್ರಶಸ್ತಿ ಮತ್ತು ಹಿಂದಿ ಚಿತ್ರರಂಗದ ಅಬ್ಬರದ ನಡುವೆ ಬಂದಿರುವ 'ಥ್ಯಾಂಕ್ಸ್ ಮಾ' ಚಿತ್ರವೂ ನೋಡುವಂತಹ ಚಿತ್ರವಾಗಿದೆ. ನವೆಂಬರ್ 2008ರಲ್ಲಿ ಗೋವಾದಲ್ಲಿ ನಡೆದ ಚಿತ್ರತ್ಸೋವದಲ್ಲಿ ಕೂಡ ಈ ಚಿತ್ರ ಪ್ರದರ್ಶನಗೊಂಡಿತ್ತು. ಇತ್ತೀಚಿಗೆ ನಡೆದ ಲಂಕೇಶ್ ಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ 'ಥ್ಯಾಂಕ್ಸ್ ಮಾ' ಚಿತ್ರಕ್ಕೆ ಈ ಪ್ರಶಸ್ತಿಯನ್ನು ನಿರ್ದೇಶಕ ಇರ್ಫಾನ್‌ಕಮಾಲ್‌ರವರಿಗೆ ನೀಡಲಾಯಿತು. ನಂತರ ಈ ಚಿತ್ರದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಕವಿತೆ

ಬೆಳಕು ಬೆಂಕಿಯಾದ ಕನಸು

ಖಾವಿ ತೊಟ್ಟ ಬಾಲ ಬಸವ
ಖಾಲಿ ಜೋಳಿಗೆಯ ಹೊತ್ತ ಕಾಡಸಿದ್ದ
ಬರಿಗಾಲಲಿ ನಡೆದು ಬಂದು ನಿಂತಾದ
ಬೀದಿಯಂಗಳದ ತುಂಬಾ ಬೆಳ್ಳಂಬೆಳ್ಳ ಬೆಳಕು...

ಒಲೆಯ ಕೆಂಡ
ರೊಟ್ಟಿ ಸುಡುವುದನೆ ಮರೆತು
ಸೂಸಿತ್ತು ಬೆಳಕು....

ಕೆಂಡದುಂಡೆಗಳು
ಹೂದಂಡೆಗಳಾಗಿ
ಮೆರೆವ ಹೊತ್ತು....

ಸತ್ತವನ ಮನೆಯ ಮುಂದೆ ಆಲಾಪನೆಗೈಯ್ದು
ಕಾಣದ ಆ ದೇವನೆಡೆಗೆ ಕೈದೋರಿ
ಅವ್ವನ ಬಿಕ್ಕುಗಳನು
ಅಪ್ಪನ ಹಸಿವನ್ನು ಖಾಲಿ ಜೋಳಿಗೆಗೆ ತುಂಬಿ
ಕೇರಿ ಬಿಟ್ಟು ಊರು ಬಿಟ್ಟು
'ದೂರ ಸಾಗಿಸಿ ಬರುವೆನೆಂದು
ಹೇಳಿ ಹೋದ ನಿಷ್ಠವು
ಬೇಡಲಿಲ್ಲ ಅವರು
ಅದನೆ ಇದನೆ ನೀಡಿರೆಂದು....
ಇಂದು
ಭಕುತರೆಡೆಗೆ ಎಸೆದ ಹೂದಂಡೆಗಳೆಲ್ಲ
ಕೆಂಡದುಂಡೆಗಳಾಗಿ ಸುಡುವ ಹೊತ್ತು...
ಜ್ವಾಳ, ರಾಗಿ, ಸಜ್ಜೆ ತುಂಬಿ ತುಳುಕಿದ
ಜೋಳಿಗೆಯಲ್ಲಿ
ಗಾಂಧಿ ಚಿತ್ರದ ನೋಟುಗಳ ಕಂತೆ, ಕಂತೆ...
ಹಸಿವು ತಾಳದೆ
'ನಮ್ಮ ಸಾಯಿಸಿ' ರೆಂದು



ಕೈ ಮುಗಿದು ಬೇಡಿ
ಬರೆದ ಪತ್ರವಿಲ್ಲ.....
ದೇವನ ದರುಶನಕೆ ನಿಂತ
ಅಪ್ಪನ ಹರಿದ ಜೇಬಿಗೆ ಕೈ ಹಾಕಿ...
ಆ ಮಠಕೆ, ಈ ಮಠಕೆ
ಕೊಟ್ಟ ರೊಕ್ಕದ ಲೆಕ್ಕವಿದೆ
ಮಂತ್ರಿಯ ಡೈರಿಯ ತುಂಬಾ...
ಗದ್ದುಗೆಗಳು ನೂಪುರಗಳಾಗಿ
ಎದ್ದು ನಿಲ್ಲುವುದ ಕಂಡು
ಉಸಿರುಗಟ್ಟಿದ ದೇವನೆಲ್ಲೋ
ದೇಶಾಂತರ ಓಡಿ
ಹೋದಂತೆ

ಬೆಳಕು
ಬೆಂಕಿಯಾದ ಕನಸು

■ ಬಿ.ಶ್ರೀನಿವಾಸ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Naga
Editor : S.Y.GURUSHANTH

ಶ್ರೀ ಬಿ.ಬಾಬು ಪ್ರ.ದ.ಸ
ಯಾಜ್ಞವಲ್ಕ್ಯ ಗುಡಿ ಹಿಂದುಗಡೆ, ನೇಕಾರರ ಓಣಿ,
ಗಂಗಾವತಿ-583 337,ಜಿಲ್ಲೆ ಕೊಪ್ಪಳ